ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 16 ಬುಧವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 90 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮಹಾಜನ ಕಾಲೇಜಲ್ಲಿ ಕೆಬಿಜಿ ಅವರಿಗೆ ಶ್ರದ್ಧಾಂಜಲಿ





ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.


ಮೈಸೂರು,ಜು.15–ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಮಾತನಾಡುತ್ತಾ, ಐದು ದಶಕಗಳ ಕಾಲ ಪತ್ರಿಕಾರಂಗದಲ್ಲಿ ಕೆ.ಬಿ.ಗಣಪತಿ ಅವರು ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ನಾನು ನಾಲ್ಕು ದಶಕಗಳಿಂದ ಅವರ ಬೆಳವಣಿಗೆಯನ್ನು ತುಂಬಾ ಹತ್ತಿರದಿಂದ ಕಂಡಿದ್ದೇನೆ. ಇವರು ಕೇವಲ ಪತ್ರಕರ್ತರಾಗಿರಲ್ಲಿಲ್ಲ, ಭಾರತೀಯ ಸಂಸ್ಕೃತಿಯನ್ನು ಬೆಳೆಸುವ ಕೈಂಕರ್ಯದಲ್ಲಿ ಸದಾ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. 'ಮೈಸೂರು ಮಿತ್ರ' ಪತ್ರಿಕೆ ಸಂಪಾದಕರಾಗಿದ್ದ ಇವರು ನಿಜವಾಗಿಯೂ ಮೈಸೂರಿನವರೆಲ್ಲರಿಗೂ ಮಿತ್ರರೇ ಆಗಿದ್ದರು ಎಂದರು.

ಇಂಗ್ಲಿಷ್‌ನಲ್ಲಿ ಸಂಜೆ ಪತ್ರಿಕೆಯನ್ನು ತುಂಬಾ ಮಂದಿ ಪ್ರಕಟಿಸಿದವರಿದ್ದಾರೆ. ಆದರೆ ಅವು ಯಾವುದು ದೀರ್ಘ ಕಾಲ ಉಳಿಯಲಿಲ್ಲ. ಕೆ.ಬಿ.ಗಣಪತಿ ಅವರು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲೂ ಪ್ರಬುದ್ಧತೆ ಹೊಂದಿದವರಾಗಿದ್ದರಿಂದ, 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಅತ್ಯಂತ ಸಮರ್ಥವಾಗಿ ಕಾರ್ಯನಿರ್ವಹಿಸುವ ಏಕೈಕ ಇಂಗ್ಲಿಷ್ ಪತ್ರಿಕೆಯಾಗಿದ್ದು ಜನಮನ್ನಣೆ ಪಡೆದುಕೊಂಡಿದೆ. ಅವರು ಬರೆಯುತ್ತಿದ್ದ ಸಂಪಾದಕೀಯ ಸಮಾಜಕ್ಕೆ ಮಾದರಿಯಾಗಿರುತ್ತಿತ್ತು. ಜೊತೆಗೆ ಸಾಧಕರನ್ನು ಗುರುತಿಸಿ ಬೆಳೆಸುವ ಗುಣ ಹೊಂದಿದ್ದರು. ಅಲ್ಲದೇ ಅವರ ಮಗ ನಮ್ಮ ಮಹಾಜನ ಕಾಲೇಜಿನ ವಿದ್ಯಾರ್ಥಿಯೂ ಆಗಿದ್ದರು ಎಂಬುದು ಸಂತೋಷದ ಸಂಗತಿಯಾಗಿದೆ ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿ, ಕೆ.ಬಿ.ಗಣಪತಿ ಅವರ ಬಗ್ಗೆ ನನಗೆ ಅಪಾರವಾದ ಪ್ರೀತಿ, ಗೌರವವಿದೆ. ಅವರು ಮಹಾಜನ ವಿದ್ಯಾಸಂಸ್ಥೆಯ ನಿಕಟಪೂರ್ವ ಅಧ್ಯಕ್ಷರಾಗಿದ್ದ ನನ್ನ ತಂದೆಯವರಾದ ಆರ್.ವಾಸುದೇವಮೂರ್ತಿ ಅವರೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ನಮ್ಮ ಕುಟುಂಬದೊಂದಿಗೂ ಸಹ ಅಷ್ಟೇ ಅನ್ಯೋನ್ಯವಾದ ಸಂಬಂಧವಿತ್ತು. ಸದಾ ನಮ್ಮ ಸಂಸ್ಥೆಯ ಬೆಳವಣಿಗೆ ಉತ್ತೇಜಿಸುತ್ತಿದ್ದರು. ಈಗ ಅವರು ಭೌತಿಕವಾಗಿ ನಮ್ಮನ್ನು ಅಗಲಿರಬಹುದು. ಆದರೆ ಅವರ ಆದರ್ಶ ಸ್ಮರಣೀಯವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ, ಐಕ್ಯೂಎಸಿ ಸಂಯೋಜಕರಾದ ಶ್ರೀಮತಿ ಗೀತಾ ಡಿ, ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಸುನೀಲ್ ಎನ್, ಪಿಆರ್‌ಓ ಶ್ರೀಮತಿ ಪೂರ್ಣಿಮಾ, ಅಧ್ಯಾಪಕರು ಮತ್ತು ಅಧ್ಯಾಪಕೇತರರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಜರಿದ್ದರು.

ಕೆಬಿಜಿ ಅವರ ನಿಧನಕ್ಕೆ ಗಣ್ಯರ ಕಂಬನಿ



'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಪತ್ರಿಕೋದ್ಯಮದ ದಾರ್ಶನಿಕರು. ತಮ್ಮ ಪತ್ರಿಕೆಗಳ ಮೂಲಕ ಅವರು ಮೈಸೂರು ಭಾಗದ ಜನತೆಗೆ ಮಹತ್ವದ ವಿಚಾರಗಳನ್ನು ತಿಳಿಸುವಲ್ಲಿ ಅಪಾರ ಶ್ರಮ ವಹಿಸುತ್ತಿದ್ದರು. ಕಳೆದ 45 ವರ್ಷಗಳಿಂದ ಅವರೊಂದಿಗೆ ನಾನು ಒಡನಾಟ ಹೊಂದಿದ್ದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ.

–ಡಾ.ವಿ.ಲಕ್ಷ್ಮೀನಾರಾಯಣ್, ವೈದ್ಯರು, ಶ್ರೀಹರಿ ಡಯಾಬಿಟೀಸ್ ಫೌಂಡೇಷನ್, ಮೈಸೂರು.

ಸದಾ ಹಸಿರು ನೆನಪು!

ಕೆ.ಬಿ.ಗಣಪತಿಯವರ ಹಠಾತ್ ನಿಧನ
ಅಪಾರ ಓದುಗ ಬಳಗಕೆ ಆಘಾತಕಾರಿ!
ಐದು ದಶಕಗಳ ಕಾಲ ಅವಿಶ್ರಾಂತ ದುಡಿದಿರಿ..
ಕಟ್ಟಿ ಬೆಳೆಸಿದಿರಿ 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್'ಗಳ
ಜನಮಾನಸದ ಭಾವ–ಭಾವನೆಗೆ ಕನ್ನಡಿಯಾದಿರಿ!
ತಿದ್ದಿ ನೇರ್ಪಡಿಸಿ ಸುದ್ದಿ ನೀಡಿದಿರಿ
ಸೃಷ್ಟಿಸಿದಿರಿ, ಹೊಸ ಲೇಖಕರ
ಜೀವಕಳೆ ತುಂಬಿದಿರಿ ಸಾಂಸ್ಕೃತಿಕ ಲೋಕಕೆ!
ಮಾದರಿಯಾದಿರಿ ಪತ್ರಿಕಾಲೋಕಕೆ!
ಈಗ ನೀವಿಲ್ಲವಾದರೂ ಸದಾ ಹಸಿರು
ನಮ್ಮ ಮನದಾಳದಲಿ ನಿಮ್ಮ ನೆನಪು!

–ಪ್ರೊ.ಸಿ.ಪಿ.ಸಿದ್ಧಾಶ್ರಮ, ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿವಿ



'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿ ಅವರ ನಿಧನದಿಂದ ರಾಜ್ಯ ದೊಡ್ಡ ಪತ್ರಕರ್ತ ಹಾಗೂ ಅಂಕಣಕಾರನನ್ನು ಕಳೆದುಕೊಂಡಂತಾಗಿದೆ. ನಾನು ಜಿಲ್ಲಾ ಪಂಚಾಯತ್ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಡಾ.ಕೆ.ಬಿ.ಗಣಪತಿ ಅವರು ಸಲಹೆ ನೀಡುವ ಮೂಲಕ ಸ್ಥಳೀಯ ಸಂಸ್ಥೆಗಳಿಗೆ ಮತ್ತು ನಮ್ಮ ನಾಡಿಗೆ ಕೊಡುಗೆ ನೀಡಿದ್ದಾರೆ. ಡಾ.ಕೆ.ಬಿ.ಗಣಪತಿ ಅವರ ನಿಧನದಿಂದ ಸಮಾಜಕ್ಕೆ ಹಾಗೂ ಪತ್ರಿಕೋದ್ಯಮಕ್ಕೆ ತುಂಬಲಾರದ ನಷ್ಟವಾಗಿದೆ.

–ಬಿ.ಎಂ.ರಾಮು, ಮಾಜಿ ಅಧ್ಯಕ್ಷರು, ಮೈಸೂರು ಜಿಲ್ಲಾ ಪಂಚಾಯತ್



ಕೆಬಿಜಿ ಅವರ ಅಗಲಿಕೆ ಸುದ್ದಿ ಅರಗಿಸಿಕೊಳ್ಳಲು ಕಷ್ಟವಾಯಿತು

ಕಳೆದ 40 ವರ್ಷದಿಂದ ನಮ್ಮ ಮನೆಗೆ 'ಮೈಸೂರು ಮಿತ್ರ' ಪತ್ರಿಕೆ ತರಿಸುತ್ತಿದ್ದೇವೆ. ನಮ್ಮ ದೈನಂದಿನ ಜೀವನದಲ್ಲಿ ಪತ್ರಿಕೆ ಒಂದು ಭಾಗವಾಗಿದೆ. ಪತ್ರಿಕೆಯಲ್ಲಿ ಎಲ್ಲಾ ಸುದ್ದಿಗಳು ಉತ್ತಮವಾಗಿ ಮೂಡಿಬರುತ್ತಿವೆ. ಪತ್ರಿಕೆ ಸಂಸ್ಥಾಪಕರಾದ ಕೆ.ಬಿ.ಗಣಪತಿ ಅವರ ಮೇಲೆ ನಮಗೆ ಅಪಾರವಾದ ಗೌರವಿದೆ. ಅವರ ನಿಧನ ಸುದ್ದಿ ತಿಳಿದು ಬೇಸರವಾಗಿದೆ.

–ನಾಗಲಕ್ಷ್ಮಿ, ಕುವೆಂಪುನಗರದ ನಿವಾಸಿ, 'ಮೈಸೂರು ಮಿತ್ರ' ಪತ್ರಿಕೆಯ ಹಿರಿಯ ಓದುಗರು.

ಕೆಬಿಜಿಯವರಿಗೆ ಟಿಬೆಟಿಯನ್ನರ ಶ್ರದ್ಧಾಂಜಲಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ವಿವಿಧ ಬೈಲಕುಪ್ಪೆ ಟಿಬಿಟಿಯನ್ ಯುವ ಕಾಂಗ್ರೆಸ್ ಮಹಿಳಾ ಮುಖಂಡರಾದ ತ್ಸೆರಿಂಗ್ ಯೂಡನ್, ಮಿಗ್ಮಾರ್ ತ್ಸೆರಿಂಗ್, ತುಂಪ್ಟೆನ್, ಇಂಡೋ–ಟಿಬೆಟಿಯನ್ ಫ್ರೆಂಡ್‌ಶಿಪ್ ಒಕ್ಕೂಟದ ಸೋಮಶೇಖರ್, ವಿಜಯಾ ರಮೇಶ್ ಅವರು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಮೈಸೂರಿನ ಪತ್ರಿಕಾ ರಂಗದ ಭೀಷ್ಮ, ಹಿರಿಯ ಪತ್ರಕರ್ತ, ಲೇಖಕ, ಚಿಂತಕ, ಸಾಹಿತಿ ಹೀಗೆ ಬಹುಮುಖ ಪ್ರತಿಭೆಗಳ ಗಣಿಯಾಗಿದ್ದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರ ಅಕಾಲಿಕ ನಿಧನ ಸಮಾಜಕ್ಕೆ ದೊಡ್ಡ ನಷ್ಟವನ್ನುಂಟು ಮಾಡಿದೆ. ದಕ್ಷಿಣ ಭಾರತದ ಸ್ಥಳೀಯ ಪತ್ರಿಕೆಗಳಲ್ಲೇ ಅತಿ ಹೆಚ್ಚು ಪ್ರಸಾರದೊಂದಿಗೆ ಲಕ್ಷಾಂತರ ಓದುಗರನ್ನು ತಲುಪಿದ ಈ ಎರಡು ಪತ್ರಿಕೆಗಳು ಆಧುನಿಕ ತಂತ್ರಜ್ಞಾನದ ಮೂಲಕ ಜಾಗತಿಕ ಮಟ್ಟದಲ್ಲೂ ಓದುಗರನ್ನು ಸೃಷ್ಟಿಸಿಕೊಂಡಿವೆ. ಅನೇಕ ಹೊಸ ಬರಹಗಾರರು ಮತ್ತು ಲೇಖಕರನ್ನು ಸೃಷ್ಟಿಸಿದ ಹೆಮ್ಮೆಯ ಗಣಪತಿಯವರ ಪ್ರಾಮಾಣಿಕತೆ, ದಕ್ಷತೆ ಮತ್ತು ಆತ್ಮವಿಶ್ವಾಸ ಎಲ್ಲರೂ ಮೆಚ್ಚುವಂತಹದ್ದು. ಪತ್ರಿಕೆಗಳು ಮುಂದೆಯೂ ಇದೇ ರೀತಿ ಮೌಲ್ಯಯುತವಾಗಿ ಓದುಗರನ್ನು ತಲುಪಲಿ. **–ಬೂಕನಕೆರೆ ವಿಜೇಂದ್ರ, ಮೈಸೂರು.**

ವಿದ್ಯಾರ್ಥಿನಿ ಮೇಲೆ ಅತ್ಯಾಚಾರ: ಉಪನ್ಯಾಸಕ ಸೇರಿ ಮೂವರ ಬಂಧನ



ಬೆಂಗಳೂರು, ಜು.15– ಇಡೀ ರಾಜ್ಯವೇ ತಲೆತಗ್ಗಿಸುವಂತಹ ಮತ್ತೊಂದು ಘಟನೆ ನಡೆದಿದೆ. ವಿದ್ಯೆ ಕಲಿಸುವ ಶಿಕ್ಷಕರೇ ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯ ಕಾಲೇಜೊಂದರ ಇಬ್ಬರು ಉಪನ್ಯಾಸಕರು ಹಾಗೂ ಅವರ ಸ್ನೇಹಿತ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿದ ಆರೋಪ ಸಂಬಂಧ ಬೆಂಗಳೂರಿನ ಮಾರತಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರನ್ನು ಕಾಲೇಜಿನ ಭೌತಶಾಸ್ತ್ರ ಉಪನ್ಯಾಸಕ ನರೇಂದ್ರ, ಜೀವಶಾಸ್ತ್ರ ಉಪನ್ಯಾಸಕ ಸಂದೀಪ್ ಹಾಗೂ ಅವರ ಗೆಳೆಯ ಅನೂಪ್ ಎಂದು ಗುರುತಿಸಲಾಗಿದೆ.

ಉಪನ್ಯಾಸಕರಿಂದಲೇ ನೀಚಕೃತ್ಯ: ಭೌತಶಾಸ್ತ್ರ ಉಪನ್ಯಾಸಕ ನರೇಂದ್ರ ನೋಟ್ಸ್ ನೀಡುವ ನೆಪದಲ್ಲಿ ವಿದ್ಯಾರ್ಥಿನಿ ಜತೆ ಸಲುಗೆ ಬೆಳೆಸಿಕೊಂಡಿದ್ದ. ಬಳಿಕ ವಾಟ್ಸಾಪ್‌ನಲ್ಲಿ ಚಾಟ್ ಮಾಡುತ್ತಿದ್ದ. ವಿದ್ಯಾರ್ಥಿನಿ ಬೆಂಗಳೂರಿಗೆ ಬಂದ ನಂತರವೂ ಚಾಟ್ ಮಾಡುವುದು, ನೋಟ್ಸ್ ನೀಡುವುದನ್ನು ಉಪನ್ಯಾಸಕ ಮುಂದುವರಿಸಿದ್ದ. ಅದೇ ನೆಪದಲ್ಲಿ ಮಾರತಹಳ್ಳಿಯ ಗೆಳೆಯನ ರೂಂಗೆ ಕರೆದುಕೊಂಡು ಹೋಗಿ ಅತ್ಯಾಚಾರ ಎಸಗಿ ವಿಚಾರ ಯಾರಿಗೂ ತಿಳಿಸದಂತೆ ಬೆದರಿಕೆ ಹಾಕಿದ್ದ.

ಉಪನ್ಯಾಸಕ ನರೇಂದ್ರ ದುಷ್ಕೃತ್ಯ ಎಸಗಿದ ಬಳಿಕ ಜೀವಶಾಸ್ತ್ರ ವಿಭಾಗದ ಉಪನ್ಯಾಸಕ ಸಂದೀಪ್ ಸಹ ಯುವತಿಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದ. ಈ ಸಮಯದಲ್ಲಿ ಆಕೆ ಪ್ರತಿರೋಧ ವ್ಯಕ್ತಪಡಿಸಿದಳು. ಆಗ, ನೀನು ನರೇಂದ್ರನ ಜೊತೆಗೆ ಇರುವ ಫೋಟೊ ಹಾಗೂ ವಿಡಿಯೋ ನನ್ನ ಬಳಿ ಇದೆ. ಅದನ್ನು ಕಾಲೇಜಿನಲ್ಲಿ ಎಲ್ಲರಿಗೂ ಗೊತ್ತಾಗುವಂತೆ ಮಾಡುವೆ ಎಂದು ಬ್ಲ್ಯಾಕ್‌ಮೇಲ್ ಮಾಡಿ ಅತ್ಯಾಚಾರ ನಡೆಸಿದ್ದ.

ಉಪನ್ಯಾಸಕರ ಸ್ನೇಹಿತನಿಂದಲೂ ಅತ್ಯಾಚಾರ: ವಿದ್ಯಾರ್ಥಿನಿ ಮೇಲೆ ಸಂದೀಪ್ ಅತ್ಯಾಚಾರ ಎಸಗಿದ ರೂಂ ಅನೂಪ್ ಎಂಬಾತನದ್ದಾಗಿತ್ತು. ಘಟನೆ ಬೆನ್ನಲ್ಲೇ ವಿದ್ಯಾರ್ಥಿನಿಯನ್ನು ಸಂಪರ್ಕಿಸಿದ್ದ ಅನೂಪ್, ನೀನು ನನ್ನ ರೂಂಗೆ ಬಂದಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಎಂದು ಬೆದರಿಕೆ ಹಾಕಿದ್ದ. ಬಳಿಕ ಆತನಿಂದಲೂ ಯುವತಿ ಮೇಲೆ ಅತ್ಯಾಚಾರ ನಡೆದಿದೆ ಎಂದು ಹೇಳಲಾಗುತ್ತಿದೆ. ಉಪನ್ಯಾಸಕರಿಂದ ಬೆದರಿಕೆ ಹೆಚ್ಚಾದಾಗ ಸಂಕಷ್ಟ ತಾಳಲಾರದೆ ಪೋಷಕರು ಮಗಳನ್ನು ಮಹಿಳಾ ಆಯೋಗಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕೌನ್ಸೆಲಿಂಗ್ ನೀಡಿ ಧೈರ್ಯ ತುಂಬಿ, ಬಳಿಕ ಪೊಲೀಸರಿಗೆ ದೂರು ಕೊಟ್ಟಿದ್ದಾರೆ.



ಡಾ.ಕೆ.ಬಿ.ಗಣಪತಿ ಅವರಿಗೆ ಶ್ರದ್ಧಾಂಜಲಿ

ಹೆಲ್ಪಿಂಗ್ ಹ್ಯಾಂಡ್ಸ್ ಜೈನ್ ಯುವ ಸಂಘಟನೆ ವತಿಯಿಂದ ಹಿರಿಯ ಪತ್ರಕರ್ತರು ಹಾಗೂ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಮಹಾವೀರ್ ಕಬಿಯಾ, ರಾಜನ್ ಬಾಗ್‌ಬಾರ್, ಮನೋಹರ್ ಸಂಕ್ಲಾ, ಪ್ರಕಾಶ್ ಗಾಂಧಿ, ಗೌತಮ್ ಗಾಂಧಿ, ಗೌತಮ್ ಪಟ್ವಾ, ಮಹಾವೀರ್ ದೋಕಾ, ದಿನೇಶ್ ಬೋಹ್ರಾ, ಸುನೀಲ್ ಪಟ್ವಾ, ಸುನೀಲ್ ಲುನಾವತ್, ಪ್ರಮೋದ್ ಚೋಪ್ರಾ, ವಿಕ್ರಂ ಕಾವಡ್, ಜಂಬೂ ಲೋದಾ ಮತ್ತಿತರರು ಉಪಸ್ಥಿತರಿದ್ದರು.

ಡಾ. ಕೆ.ಬಿ.ಗಣಪತಿ, ಸರೋಜಾದೇವಿಯರಿಗೆ ಕೋಟಿ ನಮನ





ಮೈಸೂರು,ಜು.15(ಎಂಕೆ)–'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಹಾಗೂ ಚಲನಚಿತ್ರ ಬಹುಭಾಷಾ ತಾರೆ ಬಿ.ಸರೋಜಾದೇವಿ ಅವರಿಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಸದಸ್ಯ, ಚಲನಚಿತ್ರ ನಿರ್ದೇಶಕ ಸಿದ್ದೇಗೌಡ ಜಿಬಿಎಸ್ ಸಂತಾಪ ಸೂಚಿಸಿದ್ದಾರೆ. ಕೆಬಿಜಿ ಅವರು ತಮ್ಮ ಪತ್ರಿಕೆಯಲ್ಲಿ ಪ್ರತೀ ಶುಕ್ರವಾರ ಸಿನಿಮಾ ರಂಗದ ಚಟುವಟಿಕೆಗಳ ಸುದ್ದಿ ಪ್ರಕಟಿಸಿ, ಪ್ರೇಕ್ಷಕರನ್ನು ಚಿತ್ರಮಂದಿರಗಳತ್ತ ಕರೆತರುವ ಮೂಲಕ ಕನ್ನಡ ಚಿತ್ರರಂಗಕ್ಕೆ ತಮ್ಮದೆ ಕೊಡುಗೆ ನೀಡಿದ್ದಾರೆ. ಹಾಗೆಯೇ ಭಾರತೀಯ ಚಿತ್ರರಂಗದಲ್ಲಿಯೇ ಛಾಪು ಮೂಡಿಸಿದ್ದ ಕನ್ನಡದ ಅಭಿನಯ ಸರಸ್ವತಿ ಎಂದೇ ಖ್ಯಾತರಾದ ಅವರ ಕೊಡುಗೆ ಸದಾ ಸ್ಮರಣೀಯ. ಕನ್ನಡ, ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲಿ ನಟಿಸಿ ಚಿತ್ರರಂಗದಲ್ಲಿ ಅಪಾರ ಜನಪ್ರಿಯತೆ ಗಳಿಸಿದ ಮೇರುನಟಿ ಡಾ.ಸರೋಜಾದೇವಿ ಹಾಗೂ ಪತ್ರಿಕೋದ್ಯಮಿ ಕೆಬಿಜಿ ಅವರು ನಮ್ಮೆಲ್ಲರನ್ನು ಅಗಲಿರುವ ಅವರಿಗೆ ಕೋಟಿ ಕೋಟಿ ನಮನಗಳು ಎಂದು ಸ್ಮರಿಸಿದ್ದಾರೆ.

ನಾಳೆ ಲಾರಿ ತಂಗುದಾಣದಲ್ಲಿ ಶ್ರೀ ಚಾಮುಂಡೇಶ್ವರಿ ಜನ್ಮೋತ್ಸವ

ಮೈಸೂರು, ಜು.15– ದಿ ಮೈಸೂರು ಸಿಟಿ ಲೋಕಲ್ ಲಾರಿ ಮಾಲೀಕರ ಸಂಘದ ವತಿಯಿಂದ ಹರಿಶ್ಚಂದ್ರ ರಸ್ತೆಯಲ್ಲಿರುವ ಲಾರಿ ತಂಗುದಾಣದ ಆವರಣದಲ್ಲಿ ಶ್ರೀ ಮಹಾಗಣಪತಿ, ಶ್ರೀ ಚಾಮುಂಡೇಶ್ವರಿ ಶ್ರೀ ಪ್ರಾಣದೇವರ ಸನ್ನಿಧಿಯಲ್ಲಿ ಜು.17ರಂದು ಶ್ರೀ ಚಾಮುಂಡೇಶ್ವರಿ ಜನ್ಮೋತ್ಸವವನ್ನು ಆಚರಿಸಲಾಗುವುದು. ಅಂದು ಬೆಳಗ್ಗೆ 8.30ರಿಂದ ಪೂಜಾ ಕೈಂಕರ್ಯಗಳು ನಡೆಯಲಿದ್ದು, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.07.2025 ಬುಧವಾರ, ಮಳೆ ನಕ್ಷತ್ರ: ಪುನರ್ವಸು, 6.07.2025ರಿಂದ 19.07.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ, ನೇತ್ರಧಾಮ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಸುಯೋಗ್ ಆಸ್ಪತ್ರೆ :** ಕಣ್ಣು ತೆರೆದರೆ ಜನನ, ಕಣ್ಣು ಮುಚ್ಚಿದರೆ ಮರಣ, ಜನನ ಮರಣಗಳ ನಡುವೆ ರೆಪ್ಪೆ ಆಡಿಸುವುದೇ ಜೀವನ, ಉಚಿತ ನೇತ್ರ ತಪಾಸಣಾ ಶಿಬಿರ, ಉದ್ಘಾಟನೆ : ನಿವೃತ್ತ ಜಿಲ್ಲಾಧಿಕಾರಿ ಚಿಕ್ಕತಿಮ್ಮಯ್ಯ, ಅಧ್ಯಕ್ಷತೆ : ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ, ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಅಮೃತ, ಸ್ಥಳ: ರಾಮಕೃಷ್ಣ ಪರಮಹಂಸ ವೃತ್ತದ ಪರಮಹಂಸ ಮಂಟಪ, ರಾಮಕೃಷ್ಣ ವೃತ್ತದ ಕೆಳಮಹಡಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಮತ್ತು ಅನ್ಯನರ ಸಂಬಂಧಿ ಕಾಯಿಲೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಬಾಸುದೇವ ಸೋಮಾನಿ ಕಾಲೇಜು,** ಎನ್‌ಎಸ್‌ಎಸ್ ಮತ್ತು ಶಿಕ್ಷಗ್ರಹ ಸಂಸ್ಥೆ : ಶೈಕ್ಷಣಿಕ ಪರಿವರ್ತನೆಯಲ್ಲಿ ಯುವ ಜನತೆಯ ಸಹಯೋಗ ಕುರಿತು ಕಾರ್ಯಾಗಾರ, ಉದ್ಘಾಟನೆ : ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು : ಶಿಕ್ಷಗ್ರಹ ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ಕೆ.ಆರ್. ಅರ್ಚನ, ಸೋಮಶೇಖರ, ಗೀತಾಂಜಲಿ, ಕುಬೇರ್ ಪಿ. ಗೌಡ, ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಡಾ. ಟಿ. ರಮೇಶ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಸಂಸ್ಕೃತಿ ಆದಿತ್ಯ ಲೋಕೇಶ್ ಯೂ ಟ್ಯೂಬ್ :** ಆದಿತ್ಯ ಲೋಕೇಶ್ ಕ್ರಿಯೇಷನ್ಸ್ ಆದಿತ್ಯ ಲೋಕೇಶ್ ನಿರ್ಮಿಸಿ ನಿರ್ದೇಶಿಸಿರುವ ಅಪದ್ಬಾಂಧವ ಕಿರುಚಿತ್ರದ ಪ್ರೀಮಿಯರ್ ಶೋ, ಉಪಸ್ಥಿತರು : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ರಾಜಶೇಖರ ಕದಂಬ, ನಾಗರಾಜ್ ಭೈರಿ, ಡಾ. ಸುಯೋಗ್ ಯೋಗಣ್ಣ, ಹೆಚ್.ಎನ್. ಶ್ರೀಕಂಠಯ್ಯ, ಅಂಶಿ ಪ್ರಸನ್ನಕುಮಾರ್, ಎಂ. ಚಂದ್ರಶೇಖರ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

■ **ಅಖಿಲ ಕರ್ನಾಟಕ ಒಕ್ಕಲಿಗರ ಸಂಘ, ಮೈಸೂರು ಜಿಲ್ಲಾ ಘಟಕ :** ರಾಜ್ಯ ಒಕ್ಕಲಿಗರ ಸಂಘದ ಸಂಸ್ಥಾಪಕರಾದ ಕೆ,ಹೆಚ್. ರಾಮಯ್ಯರವರ ಜಯಂತಿ ಕಾರ್ಯಕ್ರಮ, ವಿವಿಧ ಕ್ಷೇತ್ರಗಳ ಸಾಧಕರಿಗೆ ಕೆ.ಹೆಚ್. ರಾಮಯ್ಯ ಸೇವಾ ರತ್ನ ಪ್ರಶಸ್ತಿ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ : ಮಾಜಿ ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಉಪಸ್ಥಿತರು : ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ. ಗಂಗಾಧರ್, ಮೈಸೂರು ಜಿಲ್ಲಾ ಘಟಕದ ಗೌರವಾಧ್ಯಕ್ಷ ಡಾ. ಸಿ.ವೈ. ಶಿವೇಗೌಡ, ಸಂಘದ ಮಾಜಿ ಗೌರವಾಧ್ಯಕ್ಷ ಕೆ.ವಿ. ಶ್ರೀಧರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಸಿಂಡಿಕೇಟ್ ಸದಸ್ಯ ಡಾ. ಈ.ಸಿ. ನಿಂಗರಾಜೇಗೌಡ, ಮಾಜಿ ಉಪಮೇಯರ್ ಶ್ರೀಮತಿ ಶಾಂತಕುಮಾರಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ಬೆಳಗ್ಗೆ 11.30ಕ್ಕೆ.

■ **ಭಾವಸಾರ ಕ್ಷತ್ರಿಯ ಸಂಘ :** 29ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ, ಸಂಜೆ 5ಕ್ಕೆ ಮಹಾಮಂಗಳಾರತಿ, ನಂತರ ಶ್ರೀರಂಗಪಟ್ಟಣದ ಕಾವೇರಿ ನದಿಯಲ್ಲಿ ಶ್ರೀ ದೇವಿ ಕಳಸ ವಿಸರ್ಜನೆ, ಪ್ರಸಾದ ವಿನಿಯೋಗ, ಸ್ಥಳ: ಸಂಘದ ಆವರಣ, ಬನ್ನಿಮಂಟಪ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ ಅವರಿಗೆ ನುಡಿ ನಮನ, ಪುಷ್ಪಾರ್ಚನೆ: ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಪ್ರಧಾನ ನುಡಿ : ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ, ವಿಶೇಷ ಆಹ್ವಾನಿತರು : ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಅಧ್ಯಕ್ಷತೆ : ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಡಾ.ಬಿ.ಆರ್. ನಟರಾಜ್ ಜೋಯ್ಸ್, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಪರ ಹಿರಿಯ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು–ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ. ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ನಿತಿನ್ ರಾಜಾರಾಂ ಹಾಗೂ ಪಿ.ಎಸ್. ರಂಜನಿ, ವ್ಯಾಖ್ಯಾನ–ಡಾ. ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ಹಲೋ ಆಕಾಶವಾಣಿ ನೇರ ಫೋನ್–ಇನ್ ಕಾರ್ಯಕ್ರಮ, ಆದಾಯ ತೆರಿಗೆ ಅಂದ್ರೆ ಇನ್ ಕಂ ಟ್ಯಾಕ್ಸ್ ರಿಟರ್ನ್ಸ್ ಸಲ್ಲಿಸುವಲ್ಲಿ ಎದುರಿಸುವ ಸಮಸ್ಯೆಗಳು ಮತ್ತು ಪರಿಹಾರ ಕುರಿತ ಕೇಳುಗರ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ ಛಾರ್ಟರ್ಡ್ ಅಕೌಂಟೆಂಟ್‌ಗಳಾದ ಮಹೇಶ್ ಬಿ. ವಿ., ತರುಣ್ ಕೊಠಾರಿ ಮತ್ತು ತೇಜಸ್ವಿನಿ ಪಿ. ಆರ್. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಲಾಲ್ ಗುಡಿ ಜಿ. ಜಯರಾಮನ್–ವೈಯೋಲಿನ್ ಹಾಗೂ ಅಮ್ಜದ್ ಅಲಿಖಾನ್–ಸರೋದ್ ದ್ವಂದ್ವ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ : 12.05 ವನಿತಾ ವಿಹಾರ, 12.35 ದೇವರನಾಮ, 12.45 ತತ್ವಪದಗಳು, ಸುಮಿತ್ರಾ ಎಂ. ಮತ್ತು ಸಂಗಡಿಗರಿಂದ ಗುರು ಶೇಖರನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಟಿ. ಎನ್. ಕೃಷ್ಣನ್ – ವೈಯೋಲಿನ್ ವಾದನ, 4.00 ಮಹಿಳಾ ರಂಗ–ಸಾಧನ ಶಿಖರ–ಆಶಾಕಿರಣ ಟ್ರಸ್ಟ್‌ನ ಡಾ. ಶಶಿಕಲಾ ರಾಮನಾಥ್ ಅವರೊಂದಿಗೆ ಸಂದರ್ಶನ, ಪ್ರಸ್ತುತಿ–ದಿಗ್ವಿಜಯ್ .ಬಿ., 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಶಾಂತಾ ಡಿ. ಕಿಣಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಬಸವನ ಹುಳುಗಳ ಸಮಗ್ರ ಹತೋಟಿ ಈ ಕುರಿತು ಮೈಸೂರು ತಾಲೂಕು ಎಲಚನ ಹಳ್ಳಿಯ ತೋಟಗಾರಿಕಾ ಮಹಾ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ.ಕೆ. ರಾಮೇಗೌಡ ಅವರಿಂದ ಸಂದರ್ಶನ, ಬಾನುಲಿ ಬೇಸಾಯ ದಣಿವರಿಯದ ಕೃಷಿಗೆ ನಮ್ಮ ಸಹಾಯ, ಪ್ರಸ್ತುತಿ–ಆರ್. ಲೋಕೇಶ್ವರಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ಮೈಸೂರು ಆಕಾಶವಾಣಿಯ 90ರ ಸಂಭ್ರಮದ ಅಂಗವಾಗಿ ವಿಶೇಷ ಕಾರ್ಯಕ್ರಮ ಸರಣಿ ನುಡಿನಾದ ಸಂಗಮ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ–ಪುಟ್ಟೇಗೌಡ ಮತ್ತು ಸಂಗಡಿಗರಿಂದ ಭಜನೆಪದಗಳು

■ **ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ :** ವಿಶ್ವ ಹಾವುಗಳ ದಿನಾಚರಣೆ ಅಂಗವಾಗಿ ಹಾವುಗಳ ಬಗ್ಗೆ ಮಕ್ಕಳಿಗೆ ಜಾಗೃತಿ, ಉರುಗ ತಜ್ಞ ಸ್ನೇಕ್ ಶಾಮ್ ಅವರಿಗೆ ಅಭಿನಂದನಾ ಸಮಾರಂಭ, ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್. ಶ್ರೀವತ್ಸ, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ಮಾಜಿನಗರ ಪಾಲಿಕಾ ಸದಸ್ಯ ಮಾ.ವಿ.ರಾಮ ಪ್ರಸಾದ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಶಾಲೆ ಮುಖ್ಯ ಉಪಾಧ್ಯಾಯರಾದ ಸುಗುಣಾವತಿ, ಸ್ಥಳ: ಅಕ್ಕನ ಬಳಗ ಶಾಲೆ, ತ್ಯಾಗರಾಜ ರಸ್ತೆ, ಮಧ್ಯಾಹ್ನ 4ಕ್ಕೆ.

■ **ವೃತ್ತಿ ರಂಗಭೂಮಿ ರಂಗಾಯಣ ದಾವಣಗೆರೆ, ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ :** 15 ದಿನಗಳ ರಂಗ ಸಂಗೀತ ಮತ್ತು ಅಭಿನಯ ಸಮೇತ ರಂಗ ಗೀತೆಗಳ ಕಲಿಕಾ ಕಾರ್ಯಾಗಾರದ ಸಮಾರೋಪ ಮತ್ತು ಪ್ರದರ್ಶನ ಸಮಾರಂಭ, ಸಮಾರೋಪ ಭಾಷಣ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀಮತಿ ಕೆ.ಎಂ. ಗಾಯಿತ್ರಿ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ, ನಾಗೇಶ್ ವಿ. ಬೆಟ್ಟಕೋಟೆ, ಮುಖ್ಯ ಅತಿಥಿಗಳು : ಕಾರ್ಯಾಗಾರ ನಿರ್ದೇಶಕ ವೈ.ಎಂ. ಪುಟ್ಟಣ್ಣಯ್ಯ, ಪೌರಾಣಿಕ ನಾಟಕಗಳ ನಿರ್ದೇಶಕ ರಾಜಪ್ಪ ಕಿರಗಸೂರು, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ನಾಟಕಕಾರ ಡಾ. ರಾಜಪ್ಪ ದಳವಾಯಿ, ವೃತ್ತಿ ರಂಗಭೂಮಿ ರಂಗಾಯಣ ದಾವಣಗೆರೆ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ, ಸ್ಥಳ: ಕೆಎಸ್‌ಜಿಎಚ್ ಸಭಾಂಗಣ, ಸಂಜೆ 5ಕ್ಕೆ

■ **ಮೈಸೂರು ನಗರ ಶರಣ ಸಾಹಿತ್ಯ ಪರಿಷತ್ತು :** ಶರಣ ದರ್ಶನ–125, ಆನ್‌ಲೈನ್ ಕಾರ್ಯಕ್ರಮ, ಎನ್.ಸಿ. ಶಿವಪ್ರಕಾಶ್ ಅವರಿಂದ ಶರಣ ನಿವೃತ್ತಿ ಸಂಗಯ್ಯ ಕುರಿತು ಉಪನ್ಯಾಸ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಎಂ. ಚಿನ್ನಸ್ವಾಮಿ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಲೋಕಕಲ್ಯಾಣಕ್ಕಾಗಿ ಶ್ರೀಮದ್ ಭಾಗವತ್ ಪ್ರವಚನ, ವಿದ್ವಾನ್ ಶ್ರೀ ಗಣೇಶ್ ಶರ್ಮಾ (ಮೈಸೂರು)) ಅವರಿಂದ. ಸ್ಥಳ: ರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6.30ರಿಂದ.

■ **ರೋಟರಿ ಮೈಸೂರು ಮಿಡ್‌ಟೌನ್:** ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ಇಬ್ಬರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಉಪಸ್ಥಿತರು : ವಿಧಾನ ಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, ಅಧ್ಯಕ್ಷತೆ : ರೋಟರಿ ಮಿಡ್‌ಟೌನ್ ಸಂಸ್ಥೆಯ ಅಧ್ಯಕ್ಷ ರಾಕೇಶ್ ಬಾಬು, ಕಾರ್ಯದರ್ಶಿ ಭಾಸ್ಕರ್ ಸೈನಿಕ್, ರೊ.ಎಲಿಝುರ್ ಮಿಲ್ಟನ್, ಟ್ರಿನಿಟಿ ಕಾಲೇಜಿನ ಪಾಂಶುಪಾಲ ಡಾ.ಇ.ಎಂ.ಶರ್ಮಾ, ಸ್ಥಳ: ರೋಟರಿ ಶಾಲೆಯ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜುಲೈ 16 ಬುಧವಾರ 2025
ಸಂಪುಟ: 46 | ಸಂಚಿಕೆ: 90 | ಪುಟಗಳು: 12
₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಹೃದಯಾಘಾತದಿಂದ ಪಾರಾಗಬೇಕೆ...!!!

ಜೀವನ ಶೈಲಿ ಬದಲಿಸಿ

ಪೂರ್ವಜರ ಆಹಾರ ಪದ್ಧತಿ ಮೊರೆ ಹೋಗಿ: ತಜ್ಞರ ವರದಿ ಆಧರಿಸಿ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಸಲಹೆ



ಬೆಂಗಳೂರು, ಜು. 15(ಕೆಎಂಶಿ)– ನಮ್ಮ ಪೂರ್ವಜರ ಆಹಾರ ಪದ್ಧತಿ ಮುಂದುವರೆಸುವ ಮೂಲಕ ಹೃದಯಾಘಾತ ಅಪಾಯದಿಂದ ಪಾರಾಗಿ ಎಂದು ರಾಜ್ಯ ಸರ್ಕಾರ ಜನರನ್ನು ಎಚ್ಚರಿಸಿದೆ.

ರಾಜ್ಯದಲ್ಲಿ ಹೃದಯಾಘಾತ ಸಂಖ್ಯೆ ಹೆಚ್ಚಳಕ್ಕೆ ಸಂಬಂಧಿಸಿದಂತೆ ತಜ್ಞರು ನೀಡಿದ ವರದಿ ಬಿಡುಗಡೆ ಮಾಡಿ, ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಜನತೆ ಪಾಶ್ಚಾತ್ಯ ದೇಶಗಳ ಆಹಾರ ಪದ್ಧತಿಗೆ ಮಾರುಹೋಗುತ್ತಿರುವುದೇ ಹಠಾತ್ ಹೃದಯಾಘಾತಗಳಿಗೆ ಕಾರಣವಾಗಿದೆ ಎಂದರು.

ಹಾಸನ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚಿವೆ. ಅದರಲ್ಲೂ, ಯುವಜನರಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳುತ್ತಿದೆ.

ಕೋವಿಡ್ ಸಾಂಕ್ರಾಮಿಕಕ್ಕೆ ಒಳಗಾದವರು ಹಾಗೂ ಲಸಿಕೆ ಪಡೆದವರು ಹೆಚ್ಚಾಗಿ ಹೃದಯಾಘಾತಕ್ಕೆ ಒಳಗಾಗುತ್ತಿದ್ದಾರೆ ಎಂಬುದರಲ್ಲಿ ಸತ್ಯವಿಲ್ಲ. ನಮ್ಮ ಆಹಾರ ಪದ್ಧತಿಯಲ್ಲಿನ ಬದಲಾವಣೆಯೇ ಹೃದಯಾಘಾತಕ್ಕೆ ಕಾರಣವಾಗಿದೆ.

ಕೋವಿಡ್ ಲಸಿಕೆಗೂ, ಸಾವು ಪ್ರಕರಣಗಳಿಗೂ ಸಂಬಂಧವಿಲ್ಲ. ವ್ಯಾಕ್ಸಿನ್ ಬಗ್ಗೆ ಅನುಮಾನ ಬೇಡ, ಎಲ್ಲಾ ಜಿಲ್ಲೆಗಳಲ್ಲಿ ಹೃದಯಾಘಾತ ಸಾವಿನ ಘಟನೆಗಳು ಒಂದೇ ರೀತಿ ಇವೆ. ಹಾಸನ ಜಿಲ್ಲೆ ಬೇರೆ ಅನ್ನೋದು ತಪ್ಪು ಎಂದರು.


ಶರಣಪ್ರಕಾಶ್ ಪಾಟೀಲ್

ಜನರು ಆತಂಕಗೊಂಡು ಆಸ್ಪತ್ರೆಗಳಿಗೆ ಧಾವಿಸುವ ಅಗತ್ಯವಿಲ್ಲ. ಸರಾಸರಿ ಹೃದಯಾಘಾತ ಪ್ರಕರಣಗಳು ಕಳೆದ ವರ್ಷದಷ್ಟೇ ಇವೆ. ಪ್ರತಿ ವರ್ಷ ಆರೋಗ್ಯ ತಪಾಸಣೆಗೆ ಒಳಗಾಗುವುದು ಒಳ್ಳೆಯದು.

ಯೋಗಾಭ್ಯಾಸ ಮತ್ತು ನಿಯಮಿತ ವ್ಯಾಯಾಮಕ್ಕೆ ದಿನದಲ್ಲಿ ಒಂದು ಗಂಟೆ ಮೀಸಲಿಡಬೇಕು, ಯುವಜನರು ಧೂಮಪಾನ ಸೇರಿದಂತೆ ಕೆಟ್ಟ ವ್ಯಸನಗಳಿಂದ ದೂರ ಇರಬೇಕು. ರಸ್ತೆ ಬದಿ ಆಹಾರ ತಯಾರಿಕೆ ವಿಧಾನದ ಬಗ್ಗೆ ಕಟ್ಟುನಿಟ್ಟಿನ ಕ್ರಮ ವಹಿಸಲಾಗುತ್ತಿದೆ.

ಆತಂಕ ಬಿಟ್ಟು ಉತ್ತಮ ಜೀವನ ಶೈಲಿ, ಅಗತ್ಯ ನಿದ್ರೆ ಮತ್ತು ವಿರಾಮ ತೆಗೆದುಕೊಳ್ಳಬೇಕು. ಹೃದಯಾಘಾತ ರೋಗ ಲಕ್ಷಣಗಳು ಕಂಡುಬಂದರೆ ಮಾತ್ರ ಆಸ್ಪತ್ರೆಗೆ ಧಾವಿಸಿ, ಸುಮ್ಮನೆ ಹೋಗಬೇಡಿ ಎಂದು ಕಿವಿಮಾತು ಹೇಳಿದರು.

ಮಧುಮೇಹ, ರಕ್ತದೊತ್ತಡ, ವಾಯುಮಾಲಿನ್ಯ, ಆಹಾರ ಪದ್ಧತಿಯಲ್ಲಿನ ಬದಲಾವಣೆ, ಒತ್ತಡದ ಬದುಕು ಹೃದಯಾಘಾತಕ್ಕೆ ಕಾರಣವಾಗುತ್ತಿವೆ. ಯುವಜನರಲ್ಲೇ ಏಕೆ ಹೃದಯಾಘಾತ ಸಾವುಗಳು ಹೆಚ್ಚು ಆಗುತ್ತಿವೆ ಎಂಬ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ.

ಜನವರಿಯಲ್ಲಿ 178 ಜನರು ದಾಖಲಾಗಿದ್ದು, 11 ಜನ ಮೃತಪಟ್ಟಿದ್ದಾರೆ. ಫೆಬ್ರವರಿಯಲ್ಲಿ 181 ಜನ ದಾಖಲಾಗಿದ್ದು 10 ಜನ, ಮಾರ್ಚ್‌ನಲ್ಲಿ 200 ಜನರಲ್ಲಿ 9 ಜನ ಸಾವೀಗೀಡಾಗಿದ್ದಾರೆ. ಬೆಂಗಳೂರಲ್ಲಿ 2,165 ಜನರಲ್ಲಿ 101 ಜನ ಮೃತಪಟ್ಟಿದ್ದಾರೆ ಎಂದು ಅಂಕಿ–ಅಂಶ ನೀಡಿದರು.

ಮಕ್ಕಳಿಗೆ ಸ್ಕ್ರೀನಿಂಗ್ ಮಾಡುವ ಆಗತ್ಯ ಇಲ್ಲ. ಜನರಿಗೆ ಜಯದೇವ ಆಸ್ಪತ್ರೆಯಿಂದ ಅರಿವು ಮೂಡಿಸುವ ಕಾರ್ಯ ನಡೆಸಲಾಗುತ್ತಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ

ತನಿಖಾ ಸ್ಥಿತಿಗತಿ ವರದಿ ಸಲ್ಲಿಸಲು ಕೋರ್ಟ್ ಮಹತ್ವದ ಸೂಚನೆ

ಬೆಂಗಳೂರು, ಜು.15– ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ನಿ ಪಾರ್ವತಿ ವಿರುದ್ಧ ಕೇಳಿಬಂದಿರುವ ಮೈಸೂರು



ನಗರಾಭಿವೃದ್ಧಿ ಪ್ರಾಧಿಕಾರ ಹಗರಣದ ತನಿಖಾ ಸ್ಥಿತಿಗತಿ ವರದಿ ಸಲ್ಲಿಸುವಂತೆ ನ್ಯಾಯಾಲಯ ಲೋಕಾಯುಕ್ತಕ್ಕೆ ಸೂಚನೆ ನೀಡಿತು.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಮಂಗಳವಾರ (ಜು.15) ಖಾಸಗಿ ದೂರು ವಿಚಾರಣೆ ನಡೆಯಿತು. ವಿಚಾರಣೆಗೂ ಮುನ್ನ ಲೋಕಾಯುಕ್ತ ತನಿಖಾಧಿಕಾರಿ ಈವರೆಗಿನ ತನಿಖಾ ಪ್ರಗತಿ ವರದಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದರು.

ಈ ವೇಳೆ, ದೂರುದಾರ ಸ್ನೇಹಮಯಿ ಕೃಷ್ಣ ಅವರು, ತಾವು ಸಲ್ಲಿಸಿದ ದಾಖಲೆಗಳನ್ನು ಲೋಕಾಯುಕ್ತ ಪೊಲೀಸರು ಪರಿಗಣಿಸಿಲ್ಲ. ದಾಖಲೆ ಪರಿಗಣಿಸದೇ ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಅವರ ವಿರುದ್ಧ ಬಿ ರಿಪೋರ್ಟ್ ಸಲ್ಲಿಸಲಾಗಿದೆ. ಹೀಗಾಗಿ ತನಿಖಾಧಿಕಾರಿ ವಿರುದ್ಧ ಕ್ರಮ ಕೋರಿರುವ ಅರ್ಜಿಗಳನ್ನು ಪರಿಗಣಿಸಬೇಕು ಎಂದು ಮನವಿ ಮಾಡಿದರು. ಎಲ್ಲ ದಾಖಲೆಗಳನ್ನು ಪರಿಗಣಿಸಲಾಗಿದೆ ಎಂದು ಲೋಕಾಯುಕ್ತ ಎಸ್‌ಪಿಪಿ ಪೀಠಕ್ಕೆ ತಿಳಿಸಿದರು. ನ್ಯಾಯಾಲಯ ಜುಲೈ 28ರಂದು ತನಿಖಾ ಸ್ಥಿತಿಗತಿ ವರದಿ ಸಲ್ಲಿಸಲು ಸೂಚನೆ ನೀಡಿತು.

ಬಿ ರಿಪೋರ್ಟ್ ಸಲ್ಲಿಸಿದ್ದ ಲೋಕಾಯುಕ್ತ: ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ▸ 6ನೇ ಪುಟಕ್ಕೆ

ಪಾಲಿಕೆಗಳ ನೌಕರರ ಬೇಡಿಕೆಗಳಿಗೆ ಅಸ್ತು

- ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ ನೇತೃತ್ವದಲ್ಲಿ ಸಭೆ
- ಉದ್ದೇಶಿತ ಮುಷ್ಕರ ವಾಪಸ್



ಮಹಾನಗರ ಪಾಲಿಕೆ ನೌಕರರ ಸಂಘದ ಬೇಡಿಕೆಗಳನ್ನು ಈಡೇರಿಸುವ ಸಂಬಂಧ ಸಕಾರಾತ್ಮಕವಾಗಿ ಸರ್ಕಾರ ಸ್ಪಂದಿಸಿರುವ ಮೇರೆಗೆ ಮಂಗಳವಾರ ಗೃಹ ಕಚೇರಿ ಕಾವೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ರಾಜ್ಯದ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಅಮೃತರಾಜ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಾಕ್ಷರಿ, ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜು.15(ಪಿಎಂ)– ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ ಅವರು ಮಹಾನಗರ ಪಾಲಿಕೆಗಳ ನೌಕರರ ಸಂಘದ ಪದಾಧಿಕಾರಿಗಳೊಂದಿಗೆ ಮಂಗಳವಾರ ನಡೆಸಿದ ಸಂಧಾನ ಸಭೆ ಯಶಸ್ವಿಯಾಗಿದೆ.

ಕುಡಿಯುವ ನೀರು ಪೂರೈಕೆ ಹೊರತುಪಡಿಸಿ ಎಲ್ಲಾ ಕೆಲಸ ಕಾರ್ಯ ಸ್ಥಗಿತಗೊಳಿಸಿ ಮೈಸೂರು ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ 10 ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೌಕರರು ಜು.8ರಿಂದ ಐದು ದಿನಗಳ ಕಾಲ ಮುಷ್ಕರ ನಡೆಸಿದ್ದರು.

ನೌಕರರ ಬೇಡಿಕೆಗಳ ಬಗ್ಗೆ ಅಧಿಕಾರಿಗಳು ಮತ್ತು ನೌಕರರ ಸಂಘದ ರಾಜ್ಯ ಪದಾಧಿಕಾರಿಗಳೊಂದಿಗೆ ಜು.15ರಂದು ಸಭೆ ನಡೆಸಿ ನಿಯಮಾನುಸಾರ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಸಚಿವ ಬಿ.ಎಸ್.ಸುರೇಶ (ಬೈರತಿ ಸುರೇಶ್) ಭರವಸೆ ನೀಡಿದ್ದ ಮೇರೆಗೆ ಜು.12ರ ಶನಿವಾರ ಸಂಜೆ ವೇಳೆಗೆ ತಾತ್ಕಾಲಿಕವಾಗಿ ಮುಷ್ಕರ ಕೈಬಿಡಲಾಗಿತ್ತು. ಅಂತೆಯೇ ಇಂದು (ಮಂಗಳವಾರ) ವಿಕಾಸಸೌಧದಲ್ಲಿ ರಾಜ್ಯದ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಅಮೃತರಾಜ್ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಾಕ್ಷರಿ ನೇತೃತ್ವದ ಪದಾಧಿಕಾರಿಗಳೊಂದಿಗೆ ಸಚಿವರು ಸಭೆ ನಡೆಸಿದರು.

ಸಭೆಯಲ್ಲಿ ಬಹುತೇಕ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಸಚಿವರು ಭರವಸೆ ನೀಡಿದ ಹಿನ್ನೆಲೆಯಲ್ಲಿ ಉದ್ದೇಶಿತ ಮುಷ್ಕರವನ್ನು ವಾಪಸ್ ಪಡೆಯಲಾಗಿದೆ ಎಂದು ಷಡಾಕ್ಷರಿ ಮತ್ತು ಅಮೃತರಾಜ್ ಪ್ರಕಟಿಸಿದರು. ಮಹಾನಗರ ಪಾಲಿಕೆಗಳ ಸಾಮಾನ್ಯ ನೇಮಕಾತಿ ನಿಯಮಗಳು 2011ಕ್ಕೆ ಸಮಗ್ರ ತಿದ್ದುಪಡಿ ಮಾಡುವುದು, ಮಹಾನಗರ ಪಾಲಿಕೆ ನೌಕರರನ್ನು ಪೂರ್ಣ ಪ್ರಮಾಣದಲ್ಲಿ ಸರ್ಕಾರಿ ನೌಕರರೆಂದು ಪರಿಗಣಿಸುವುದು, ಸರ್ಕಾರಿ ನೌಕರರ ರೀತಿಯಲ್ಲಿ ಮಹಾನಗರ ಪಾಲಿಕೆಗಳ ಅಧಿಕಾರಿಗಳು ಹಾಗೂ ನೌಕರರಿಗೂ ಕೆಜಿಐಡಿ, ಜಿಐಎಸ್ ಮತ್ತು ಜಿಪಿಎಫ್ ಸೌಲಭ್ಯಗಳನ್ನು ನೀಡುವುದು ಸೇರಿದಂತೆ ಹಲವು ಬೇಡಿಕೆಗಳನ್ನು ನೌಕರರ ಸಂಘಗಳು ಸರ್ಕಾರದ ಮುಂದಿಟ್ಟಿದ್ದವು. ಸಭೆ ಬಳಿಕ ಮಾಹಿತಿ ನೀಡಿದ ಸಚಿವ ಬಿ.ಎಸ್.ಸುರೇಶ ಅವರು, ಪಾಲಿಕೆ ನೌಕರರಿಗೆ ಸಕಾಲಕ್ಕೆ ವೇತನ ನೀಡುವುದು, ಸಿ ಮತ್ತು ಆರ್ ನಿಯಮಗಳಿಗೆ ತಿದ್ದುಪಡಿ ತರುವ ಕುರಿತು ಆರ್ಥಿಕ ಇಲಾಖೆ ಅನುಮೋದನೆ ಪಡೆಯುವಂತೆ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ತಿಳಿಸಿದರು. ▸ 6ನೇ ಪುಟಕ್ಕೆ

11ರಲ್ಲಿ 7 ಬೇಡಿಕೆ ಈಡೇರಿಸುವ ಭರವಸೆ...

"ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ಪ್ರಮುಖ 11 ಬೇಡಿಕೆಗಳಲ್ಲಿ 7 ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದು, ಉಳಿದ 4 ಬೇಡಿಕೆಗಳನ್ನು ಆರ್ಥಿಕ ಇಲಾಖೆ ಅನುಮೋದನೆ ಪಡೆದು ಈಡೇರಿಸುವುದಾಗಿ ಐತಿಹಾಸಿಕ ನಿರ್ಣಯ ಕೈಗೊಳ್ಳಲಾಗಿದೆ.

–ಎ.ಅಮೃತ್‌ರಾಜ್ (ಅಧ್ಯಕ್ಷರು) ಮತ್ತು ಬಿ.ವೆಂಕಟರಾಮ್ (ಉಪಾಧ್ಯಕ್ಷರು), ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ.

ಭೂಮಿಗೆ ವಾಪಸಾದ ಶುಭಾಂಶು ಶುಕ್ಲಾ ತಂಡ


ಭೂಮಿಗೆ ವಾಪಸ್ಸಾದ ಶುಭಾಂಶು ಶುಕ್ಲಾ


ನ್ಯೂಯಾರ್ಕ್: ಯಶಸ್ವಿ ಬಾಹ್ಯಾಕಾಶ ಯಾನ ಮುಕ್ತಾಯಗೊಳಿಸಿದ ಭಾರತದ ಗಗನ ಯಾತ್ರಿ ಶುಭಾಂಶು ಶುಕ್ಲಾ ಅವರಿದ್ದ ತಂಡ ಇಂದು ಡ್ರ್ಯಾಗನ್ ನೌಕೆಯ ಮೂಲಕ ಯಶಸ್ವಿಯಾಗಿ ಭೂಮಿಗೆ ಮರಳಿದೆ.

"ನಾವು ಮನೆಗೆ ಮರಳಿದ್ದೇವೆ" ಆಕ್ಸಿಯಮ್–4 ಮಿಷನ್ ಕಮಾಂಡರ್ ಪೆಗ್ಗಿ ವಿಟ್ಸನ್, ಜುಲೈ 15 ರಂದು ಪೆಸಿಫಿಕ್ ಮಹಾಸಾಗರದ ಸ್ಯಾನ್ ಡಿಯಾಗೋ ಬಳಿಯ ಕ್ಯಾಲಿಫೋರ್ನಿಯಾ ಕರಾವಳಿಯಲ್ಲಿ ಡ್ರ್ಯಾಗನ್ ಎಂದು ಕರೆಯಲ್ಪಡುವ ಬಾಹ್ಯಾಕಾಶ ನೌಕೆ ಇಳಿದ ಸ್ವಲ್ಪ ಸಮಯದ ನಂತರ, ಮಧ್ಯಾಹ್ನ 3.02 ಕ್ಕೆ ಆಕ್ಸಿಯಮ್ ಸ್ಪೇಸ್‌ನ ಕಮಾಂಡ್ ಕಂಟ್ರೋಲ್ ಸೆಂಟರ್‌ಗೆ ತಿಳಿಸಿದ ಸಂದೇಶ ಇದಾಗಿದೆ.

ಪೆಗ್ಗಿ ವಿಟ್ಸನ್ ಸಂದೇಶಕ್ಕೆ ಕಮಾಂಡ್ ಕೇಂದ್ರ "ಮನೆಗೆ ಸ್ವಾಗತ" ಎಂದು ಉತ್ತರಿಸಿದೆ. ಇದಕ್ಕೆ ಪೆಗ್ಗಿ ಉತ್ತರಿಸುತ್ತಾ, "ಮಹಾ ಸವಾರಿ ಮತ್ತು ಸುರಕ್ಷಿತ ಪ್ರಯಾಣಕ್ಕಾಗಿ ಧನ್ಯವಾದಗಳು." ಗ್ರೇಸ್‌ನಲ್ಲಿರುವ ಸಿಬ್ಬಂದಿ ಆರೋಗ್ಯವಾಗಿದ್ದಾರೆ ಎಂದು ತಿಳಿಸಿದ್ದಾರೆ. ಆಕ್ಸಿಯಮ್–4 ▸ 6ನೇ ಪುಟಕ್ಕೆ

ಕೋಟ್ಯಾಂತರ ಕನಸುಗಳಿಗೆ ಸ್ಫೂರ್ತಿ

ನವದೆಹಲಿ: ಐತಿಹಾಸಿಕ ಬಾಹ್ಯಾಕಾಶ ಯಾನದ ನಂತರ ಭೂಮಿಗೆ ಮರಳಿದ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರು ಕೋಟ್ಯಾಂತರ ಕನಸುಗಳಿಗೆ ಸ್ಫೂರ್ತಿಯಾಗಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಬಾಹ್ಯಾಕಾಶಯಾನ ಮುಗಿಸಿ ಮಂಗಳವಾರ ▸ 6ನೇ ಪುಟಕ್ಕೆ



ಆನೆ–ಮಾನವ ಸಂಘರ್ಷ ತಡೆಗೆ 'ಆನೆಪಥ'

ಆವಾಸಸ್ಥಾನ ರಕ್ಷಣೆಗೆ ಐಐಎಸ್‌ಸಿಯೊಂದಿಗೆ ಅರಣ್ಯ ಇಲಾಖೆ ಐತಿಹಾಸಿಕ ಒಡಂಬಡಿಕೆ



ಬೆಂಗಳೂರು: ರಾಜ್ಯದಲ್ಲಿ ಹೆಚ್ಚುತ್ತಿರುವ ಆನೆ–ಮಾನವ ಸಂಘರ್ಷ ನಿಯಂತ್ರಿಸಲು ಮತ್ತು ಕಾಡಿನಂಚಿನ ರೈತರ ಬೆಳೆ ರಕ್ಷಿಸುವ ನಿಟ್ಟಿನಲ್ಲಿ ಆನೆ ಪಥ (ಕಾರಿಡಾರ್), ಆವಾಸಸ್ಥಾನ ರಕ್ಷಣೆಗೆ ಆಧುನಿಕ ತಂತ್ರಜ್ಞಾನ ಬಳಸಲು ತೀರ್ಮಾನಿಸಲಾಗಿದ್ದು, ಐಐಎಸ್‌ಸಿಯೊಂದಿಗೆ ಒಡಂಬಡಿಕೆಗೆ ಸಹಿ ಹಾಕಲಾಗಿದೆ ಎಂದು ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ವಿಕಾಸಸೌಧದ ತಮ್ಮ ಕಚೇರಿಯಲ್ಲಿಂದು ಐಐಎಸ್‌ಸಿಯ ಪ್ರೊ.ರಮನ್ ಸುಕುಮಾರ್ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ ಪಿ.ಸಿ.ರೇ ಸಹಿ ಹಾಕಿ ಒಡಂಬಡಿಕೆ ವಿನಿಮಯ ಮಾಡಿಕೊಂಡ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹಾಸನ, ಕೊಡಗು ಭಾಗದಲ್ಲಿ ಹೆಚ್ಚಾಗಿ ಆನೆ–ಮಾನವ ಸಂಘರ್ಷವಿದ್ದು, ಜೀವಹಾನಿ, ಬೆಳೆ ಹಾನಿ ಸಂಭವಿಸುತ್ತಿದೆ. ಇದರ ನಿಯಂತ್ರಣಕ್ಕೆ ಎಲ್ಲಾ ಸಾಧ್ಯ ಕ್ರಮಗಳನ್ನು ಇಲಾಖೆ ಕೈಗೊಳ್ಳುತ್ತಿದೆ ಎಂದಿದ್ದಾರೆ.

ಪ್ರಸ್ತುತ ಮಾನವ–ಆನೆ ಸಂಘರ್ಷ ಇತರ ಪ್ರದೇಶಕ್ಕೂ ವಿಸ್ತರಿಸುತ್ತಿದ್ದು, ಪರಿಸರ ಸಂಶೋಧನೆ ಮತ್ತು ಕ್ಷೇತ್ರ ಅನುಷ್ಠಾನವನ್ನು ಸಮನ್ವಯಗೊಳಿಸುವ ಮೂಲಕ ಆನೆಪಥ, ಆವಾಸಸ್ಥಾನಗಳ ಸಂರಕ್ಷಣೆಗೆ ಈ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.



ಏಷ್ಯನ್ ಆನೆಗಳ ಭೂಪ್ರದೇಶ ನಿರ್ವಹಣೆಗಾಗಿ 5 ವರ್ಷಗಳ ಸಹಯೋಗದ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ವಿವರಿಸಿದ್ದಾರೆ.

ಸ್ಯಾಟಲೈಟ್ ಟೆಲಿಮೆಟ್ರಿ, ಕ್ಯಾಮರಾ ಟ್ರ್ಯಾಪ್‌ಗಳು ಮತ್ತು ಜಿಐಎಸ್ ಮಾದರಿಗಳನ್ನು ಬಳಸಿಕೊಂಡು ಆನೆ ಕಾರಿಡಾರ್‌ಗಳನ್ನು ಗುರುತಿಸುವುದು ಮತ್ತು ಆನೆಗಳ ಸುಗಮ ಸಂಚಾರಕ್ಕೆ ಎದುರಾಗಿರುವ ಅಡೆ–ತಡೆಗಳನ್ನು ಗುರುತಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಆನೆ ಲದ್ದಿಯಲ್ಲಿರುವ ಹಾರ್ಮೋನ್‌ಗಳ ಪರೀಕ್ಷೆ ನಡೆಸುವ ಮೂಲಕ ಆನೆಗಳ ದೇಹದ ಸ್ಥಿತಿ ಮತ್ತು ಒತ್ತಡ ಸೂಚಕಗಳನ್ನು ಅಂದಾಜು ಮಾಡಲಾಗುತ್ತದೆ. ಅದೇ ರೀತಿ ಬೆಳೆ ನಾಶದ ಮಾದರಿಗಳ ಅಧ್ಯಯನ, ಸಂಘರ್ಷದ ಹಾದಿ ತುಳಿದ ಆನೆಗಳ ಅಧ್ಯಯನ, ವಿಶ್ಲೇಷಣೆ ಮಾಡಿ ರೈತರಿಗೆ ಅರಿವು ಮೂಡಿಸುವುದೂ ಈ ಯೋಜನೆಯ ಭಾಗವಾಗಿದೆ ಎಂದು ತಿಳಿಸಿದ್ದಾರೆ.

ಆನೆಗಳು ನಾಡಿನತ್ತ ಬಂದಾಗ ಮುನ್ನೆಚ್ಚರಿಕೆಯ ಗಂಟೆ ಮೊಳಗಿಸುವ ವ್ಯವಸ್ಥೆ ರೂಪಿಸುವ ಹಾಗೂ ಸ್ವಯಂಚಾಲಿತ ಧ್ವನಿಯಂತ್ರಗಳ ಮೂಲಕ ಆನೆಗಳನ್ನು ಹಿಮ್ಮೆಟ್ಟಿಸುವ ಬಗ್ಗೆಯೂ ಅಧ್ಯಯನ ನಡೆಸಲಾಗುವುದು. ಅರಣ್ಯ ಇಲಾಖೆ ಮತ್ತು ಭಾರತೀಯ ವಿಜ್ಞಾನ ಮಂದಿರದ ತಜ್ಞರು, ಅಧ್ಯಯನಿಗಳು ಆನೆಗಳ ವರ್ತನೆ, ಸ್ವಭಾವದ ದತ್ತಾಂಶ ಕ್ರೋಢೀಕರಿಸಿ ಆನೆಪಥ (ಕಾರಿಡಾರ್) ಹಾಗೂ ಮುಂದಿನ 10 ವರ್ಷಗಳಲ್ಲಿ ಎದುರಾಗಬಹುದಾದ ▸ 6ನೇ ಪುಟಕ್ಕೆ

ಚಿತ್ರಮಂದಿರಗಳು, ಮಲ್ಟಿಪ್ಲೆಕ್ಸ್‌ಗಳಲ್ಲಿ ಟಿಕೆಟ್ ದರ 200 ರೂ. ಫಿಕ್ಸ್



ಬೆಂಗಳೂರು: ರಾಜ್ಯದ ಎಲ್ಲ ಚಿತ್ರಮಂದಿರ ಮತ್ತು ಮಲ್ಟಿಪ್ಲೆಕ್ಸ್‌ಗಳಲ್ಲಿ ಇನ್ನು ಮುಂದೆ ಏಕರೂಪದ ದರ ಇರಬೇಕು ಎಂದು ಸರ್ಕಾರ ಆದೇಶಿಸಿದೆ. ಆ ಮೂಲಕ ರಾಜ್ಯಾದ್ಯಂತ ಒಂದೇ ದರ ನಿಗದಿ ಮಾಡಲಾಗಿದೆ. ಸಿನಿಮಾ ಪ್ರದರ್ಶನದ ಟಿಕೆಟ್ ಬೆಲೆ 200 ರೂ. ಮೀರಬಾರದು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದು ಎಲ್ಲ ಭಾಷೆಯ ಸಿನಿಮಾಗಳಿಗೂ ಅನ್ವಯ ಆಗಲಿದೆ. ಈ ಬಗ್ಗೆ ರಾಜ್ಯ ಸರ್ಕಾರ ಅಧಿಕೃತ ಆದೇಶ ನೀಡಿದೆ.

ಕನ್ನಡ ಚಿತ್ರರಂಗ ಕಷ್ಟದಲ್ಲಿದೆ. ನಿರೀಕ್ಷಿತ ಪ್ರಮಾಣದ ಪ್ರೇಕ್ಷಕರು ಬಾರದೇ ಇರುವುದರಿಂದ ಅನೇಕ ಚಿತ್ರಮಂದಿರಗಳನ್ನು ಮುಚ್ಚಲಾಗಿದೆ. ಕರ್ನಾಟಕದಲ್ಲಿಯೇ ಪರಭಾಷೆ ಸಿನಿಮಾಗಳು ಬಹುಕೋಟಿ ರೂಪಾಯಿ ಮಾಡಿಕೊಳ್ಳುತ್ತವೆ. ಪರಭಾಷೆ ಸಿನಿಮಾಗಳ ಟಿಕೆಟ್‌ಗಳು ಸಾವಿರ ರೂಪಾಯಿ ಮೀರಿದ ಉದಾಹರಣೆ ಕೂಡ ಇದೆ. ▸ 6ನೇ ಪುಟಕ್ಕೆ

ದಸರಾದಿಂದ 'ಹಿರಣ್ಯ' ಔಟ್; 'ಲಕ್ಷ್ಮೀ' ಡೌಟ್

- ಕಳೆದ ಬಾರಿ ಅಂಬಾರಿ ಹೊತ್ತ ಅಭಿಮನ್ಯು ಜೊತೆ ಕುಮ್ಕಿ ಆನೆಯಾಗಿ ಹೆಜ್ಜೆ ಹಾಕಿದ್ದವು
- ಹಿರಣ್ಯ, ಲಕ್ಷ್ಮೀ ಗರ್ಭಿಣಿಯರು! ಪಶು ವೈದ್ಯಾಧಿಕಾರಿಗಳ ವರದಿಯಿಂದ ಬಯಲು
- ಅಳೆದು ಸುರಿದು ಹೆಣ್ಣಾನೆ ಆಯ್ಕೆ ಪ್ರಕ್ರಿಯೆಯಲ್ಲಿ ಹೈರಾಣಾದ ಅರಣ್ಯ ಇಲಾಖೆ ಅಧಿಕಾರಿಗಳು


ಹಿರಣ್ಯ

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಜು.15–ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಗಜಪಡೆಯಲ್ಲಿ ಹೆಣ್ಣಾನೆ ಆಯ್ಕೆ ಪ್ರಕ್ರಿಯೆ ಅರಣ್ಯ ಇಲಾಖೆಗೆ ಕಗ್ಗಂಟಾಗಿದೆ. ಈಗಾಗಲೇ ಪರಿಶೀಲಿಸಿದ್ದ ಐದು ಹೆಣ್ಣಾನೆಗಳಲ್ಲಿ ಎರಡು ಆನೆಗಳು ಗರ್ಭ ಧರಿಸಿರುವುದು ದೃಢಪಟ್ಟಿರುವುದರಿಂದ ಹೊಸ ಹೆಣ್ಣಾನೆಗಳಿಗೆ ತಲಾಶ್ ಆರಂಭವಾಗಿದೆ.

ಕಳೆದ ಬಾರಿ ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿ ಹೊತ್ತ ಅಭಿಮನ್ಯುವಿನ ಎಡ–ಬಲ ಕುಮ್ಕಿ ಆನೆಗಳಾಗಿ ಹೆಜ್ಜೆ ಹಾಕಿದ್ದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ರಾಂಪುರ ಕ್ಯಾಂಪ್‌ನ ಲಕ್ಷ್ಮೀ ಮತ್ತು ಹಿರಣ್ಯ ಈ ಬಾರಿ ದಸರಾ ಗಜಪಡೆಯಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವ ನಿರೀಕ್ಷೆಯಲ್ಲಿದ್ದವು. ಅವುಗಳ ಆರೋಗ್ಯ ತಪಾಸಣೆಯನ್ನೂ ಮಾಡಲಾಗಿತ್ತು. ಮೂತ್ರ ಪರೀಕ್ಷೆಯಲ್ಲಿ ಈ ಎರಡೂ ಆನೆಗಳು ಗರ್ಭ ಧರಿಸಿರುವುದು ದೃಢಪಟ್ಟಿತ್ತು. ಈಗ ಗರ್ಭಾವಸ್ಥೆಯ ನಿಖರ ಮಾಹಿತಿಗೆ ಫಿಕಲ್ ಪ್ರೆಗ್ನೆನ್ಸಿ ಪರೀಕ್ಷೆಗೆ ಒಳಪಡಿಸಲಾಗಿದೆ.

ತುಂಬು ಗರ್ಭಿಣಿ ಹಿರಣ್ಯ: ದಸರಾ ಗಜಪಡೆಯಲ್ಲಿ ಕುಮ್ಕಿ ಆನೆಯಾಗಿದ್ದ ರಾಂಪುರ ಕ್ಯಾಂಪ್‌ನ ಹಿರಣ್ಯ (48) ಸೇರಿದಂತೆ ಐದು ಆನೆಗಳನ್ನು ಬಂಡೀಪುರದ ಹಳೆ ಕ್ಯಾಂಪಸ್‌ನಲ್ಲಿಟ್ಟು ವಿಶೇಷವಾಗಿ ಆರೈಕೆ ಮಾಡಲಾಗುತ್ತಿತ್ತು. ಆದರೆ, ಕಳೆದ ಎರಡು ದಿನದಿಂದ ಹಿರಣ್ಯಳ ವರ್ತನೆಯಲ್ಲಿ ಬದಲಾವಣೆ ಕಂಡು ಬಂದಿದ್ದು, ಶೀಘ್ರವೇ ಮರಿಗೆ ಜನ್ಮ ನೀಡುವ ಸುಳಿವು ನೀಡಿದೆ. ಈ ಹಿನ್ನೆಲೆಯಲ್ಲಿ ಹಿರಣ್ಯಳನ್ನು ರಾಂಪುರ ಕ್ಯಾಂಪ್‌ಗೆ ಸ್ಥಳಾಂತರಿಸಲಾಗಿದೆ.

"ಆನೆ ಕ್ಯಾಂಪ್‌ಗಳಲ್ಲಿರುವ ಎಲ್ಲಾ ಆನೆಗಳನ್ನು ರಾತ್ರಿ ವೇಳೆ ಮೇಯಲು ಕಾಡಿಗೆ ಬಿಡಲಾಗುತ್ತದೆ. ಈ ವೇಳೆ ಪರಸ್ಪರ ನೈಸರ್ಗಿಕ ಸಂಪರ್ಕದ ಮೂಲಕ ಹೆಣ್ಣಾನೆಗಳು ಗರ್ಭ ಧರಿಸುತ್ತವೆ. ದಸರಾಗೆ ಗಜಪಡೆಯಲ್ಲಿ ಕರೆತರುವಾಗ ಅರಣ್ಯ ಇಲಾಖೆ ಸೂಕ್ಷ್ಮವಾಗಿ ಹೆಜ್ಜೆ ಇಡಬೇಕಾಗುತ್ತದೆ.

– ವನ್ಯಜೀವಿ ಹಾಗೂ ಪರಿಸರ ಪ್ರೇಮಿಗಳು.

ಬಂಡಿಪುರದಲ್ಲಿ ಮೈಸೂರು–ಊಟಿ ಮುಖ್ಯರಸ್ತೆ ಬಳಿಯೇ ಬೀಡುಬಿಟ್ಟಿದ್ದ ಹಿರಣ್ಯ, ಮರಿಗೆ ಜನ್ಮ ನೀಡಿದರೆ ವಾಹನಗಳ ಸಂಚಾರದಿಂದ ಕಿರಿಕಿರಿಯುಂಟಾಗಬಹುದೆಂಬ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ. ಪರಿಸ್ಥಿತಿ ಗಮನಿಸಿದರೆ ಎರಡು ದಿನದಲ್ಲಿ ಮರಿಗೆ ಜನ್ಮ ನೀಡುವುದು ಖಚಿತವಾಗಿದೆ. ಹಾಗಾಗಿ ಈ ಬಾರಿ ದಸರಾ ಗಜಪಡೆಯಿಂದ ಹಿರಣ್ಯ ಹೊರಬೀಳುವುದು ಖಚಿತವಾಗಿದೆ.

ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ 2021ರಲ್ಲಿ ಕೊಡಗಿನ ಆನೆ ಮನೆ ಫೌಂಡೇಷನ್‌ನಿಂದ ವಶಕ್ಕೆ ಪಡೆದು ರಾಂಪುರ ಕ್ಯಾಂಪ್‌ನಲ್ಲಿ ಹಿರಣ್ಯಳ ಪಾಲನೆ ಮಾಡಲಾಗುತ್ತಿತ್ತು. ಸೌಮ್ಯ ಸ್ವಭಾವಿಯಾಗಿರುವ ಈ ಆನೆ ಎರಡು ಬಾರಿ ದಸರಾದಲ್ಲಿ ಪಾಲ್ಗೊಂಡಿತ್ತು. ಕಳೆದ ಬಾರಿ ಕುಮ್ಕಿ ಆನೆಯಾಗಿ ಜವಾಬ್ದಾರಿ ನಿಭಾಯಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು.


ಲಕ್ಷ್ಮಿ

ಭರವಸೆ ಮೂಡಿಸಿದ ಲಕ್ಷ್ಮಿಯೂ ಡೌಟು: ಮೂರು ಬಾರಿ ದಸರಾ ಉತ್ಸವದಲ್ಲಿ ಪಾಲ್ಗೊಂಡು, ಒಮ್ಮೆ ಕುಮ್ಕಿ ಆನೆಯಾಗಿ ಯಶಸ್ವಿಯಾಗಿ ಸಾಗಿದ ರಾಂಪುರ ಕ್ಯಾಂಪ್‌ನ 24 ವರ್ಷದ ಲಕ್ಷ್ಮಿಯೂ ಈ ಬಾರಿ ದಸರಾ ▸ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗಂಡ	: ಲೇಯ್, ಮರ್ಯಾದೆಯಿಂದ ಮ್ಯಾಚ್ ಹಾಕು.
ಹೆಂಡತಿ	: ಆಗಲ್ಲ, ಏನ್ ಮಾಡ್ತೀರ?
ಗಂಡ	: ನೋಡ್ಕೋತ್ತೀನಿ
ಹೆಂಡತಿ	: ಏನ್ ನೋಡ್ಕೋತ್ತೀರ?
ಗಂಡ	: ಯಾವ ಚಾನಲ್ ಹಾಕ್ತಿಯೋ ಅದನ್ನೇ ನೋಡ್ಕೋತ್ತೀನಿ.

ಮೈಸೂರು ಮಿತ್ರ

ಬುಧವಾರ, 16 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........


ಕೆಸರಿನಲ್ಲಿ ಹುಟ್ಟಿದೆಯೆಂಬ ಕಾರಣಕ್ಕೆ ಕಮಲಕ್ಕೇನೂ ಕುಂದಿಲ್ಲ.
ಜಾತಿ, ಮತ ಪಂಥಗಳನ್ನು ಮೀರಿದ ಬದುಕಿನ
ರೀತಿ ನೀತಿಗಳೇ ಮುಖ್ಯವಾಗಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹರಟೆಗೆ ವಾಹನ ಬೇಕಿಲ್ಲ, ವಿಮಾನಕ್ಕೆ ರಸ್ತೆ ಬೇಕಿಲ್ಲ.

ನಿಮ್ಮ ಪತ್ರಗಳು

ಕೆಬಿಜಿಯವರಿಗೆ ನುಡಿ ನಮನ

ಪತ್ರಿಕೋದ್ಯಮಕ್ಕೆ ಕೆಬಿಜಿ ಅವರ ನಿಧನ ತುಂಬಲಾರದ ನಷ್ಟ



ಮಾನ್ಯರೆ,

ಹಿರಿಯ ಲೇಖಕರು, ಪತ್ರಿಕೋದ್ಯಮದ ದಿಗ್ಗಜ ಎಂದೇ ಪ್ರಸಿದ್ಧಿ ಪಡೆದಿದ್ದ ಕೆ.ಬಿ.ಗಣಪತಿಯವರ ನಿಧನದ ಸುದ್ದಿಯನ್ನು ಕೇಳಿ ಮನಸ್ಸಿಗೆ ತುಂಬಾ ನೋವಾಯಿತು. ನಂಬಲಿಕ್ಕೇ ಆಗಲಿಲ್ಲ.

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಕೆಬಿಜಿ ಎಂದೇ ಪ್ರಸಿದ್ಧಿ ಪಡೆದಿದ್ದ ಇವರು ಮೂಲತಃ ಕೊಡಗಿನವರಾಗಿದ್ದು, ಮೈಸೂರಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕಾ ಕ್ಷೇತ್ರದಲ್ಲಿ ಐದು ದಶಕಗಳ ಕಾಲ ಸುದೀರ್ಘ ಸೇವೆಯನ್ನು ಸಲ್ಲಿಸಿದ್ದಾರೆ. 'ಮೈಸೂರು ಮಿತ್ರ'ದಲ್ಲಿ 'ಭೂ ಮಂತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನಲ್ಲಿ 'ಅಬ್ರಕಡಬ್ರ' ಅಂಕಣಗಳಲ್ಲಿ ಲೇಖನಗಳನ್ನು ಬರೆಯುವ ಮೂಲಕ ಬಹಳಷ್ಟು ಪ್ರಸಿದ್ಧಿ ಪಡೆದಿದ್ದರು. ಈ ಅಂಕಣಗಳ ಮೂಲಕ ಎಲ್ಲರ ಮನಸ್ಸನ್ನು ಗೆದ್ದಿದ್ದರು. 1980ರಲ್ಲಿ 'ಮೈಸೂರು ಮಿತ್ರ' ದಿನಪತ್ರಿಕೆಯನ್ನು ಆರಂಭಿಸಿದರು. ವರ್ಷ ಕಳೆದಂತೆ ಓದುಗರಿಗೆ ಅಚ್ಚುಮೆಚ್ಚಾಯಿತು. ಪತ್ರಿಕೋದ್ಯಮಕ್ಕೆ ಬರುವ ಅನೇಕರಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡಿ ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದರು. ಹಮ್ಮು-ಬಿಮ್ಮು ಇಲ್ಲದ ಸರಳ ವ್ಯಕ್ತಿತ್ವದ ಸಾಕಾರಮೂರ್ತಿ, ಸದಾ ಹಸನ್ಮುಖಿಯಾಗಿರುತ್ತಿದ್ದರು. ಎಲ್ಲರೊಟ್ಟಿಗೆ ಬೆರೆಯುವಂತಹ ಹೃದಯವೈಶಾಲ್ಯವನ್ನು ಬೆಳೆಸಿಕೊಂಡಿದ್ದರು. 'ಮೈಸೂರು ಮಿತ್ರ' ದಿನಪತ್ರಿಕೆಯನ್ನು ಓದುಗರಿಗೆ ಕೈಗೆಟಕುವ ಬೆಲೆಯಲ್ಲಿ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಪತ್ರಿಕೆ ಓದುಗರ ಮನಸ್ಸನ್ನು ಗೆಲ್ಲಲು ಪರಿಶ್ರಮ ಪಟ್ಟಿದ್ದಾರೆ. ಸಂಕಷ್ಟದ ಸಂದರ್ಭದಲ್ಲೂ ಪತ್ರಿಕೆಯನ್ನು ಮುನ್ನಡೆಸಲು ಎದೆಗುಂದದೆ ಹೊರ ತಂದಿದ್ದರು. ಇತ್ತೀಚೆಗೆ ಇವರ ಸೇವೆಯನ್ನು ಪರಿಗಣಿಸಿ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತ್ತು. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಅನೇಕ ಕೃತಿಗಳು, ಪ್ರವಾಸ ಕಥನಗಳನ್ನು ಹೊರತಂದಿದ್ದಾರೆ. ಪತ್ರಿಕೋದ್ಯಮಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದ ಇಂಥವರನ್ನು ಕಳೆದುಕೊಂಡು ಮೈಸೂರಿನ ಪತ್ರಿಕಾ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಎಂದು ಹೇಳಬಹುದು. ಇವರ ಆತ್ಮಕ್ಕೆ ಶಾಂತಿ ಸಿಗಲಿ, ಅಭಿಮಾನಿಗಳಿಗೆ, ಓದುಗರಿಗೆ, ಕುಟುಂಬ ವರ್ಗದವರಿಗೆ, ಸ್ನೇಹಿತರಿಗೆ, ಪತ್ರಿಕೋದ್ಯಮಕ್ಕೆ ಇವರ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

-ಪರಶಿವಮೂರ್ತಿ ಎನ್ ಪಿ. ನಂಜೀಪುರ, ಸರಗೂರು ತಾಲೂಕು.

■ ಪತ್ರಿಕಾ ಧರ್ಮದ ಶಿಸ್ತಿನ ಸಿಪಾಯಿ ಡಾ. ಕೆಬಿಜಿ

ಮಾನ್ಯರೆ,

ಪತ್ರಿಕಾರಂಗದ ನಿರಂತರ ಮೌಲ್ಯ ಪ್ರತಿಪಾದಕರಾಗಿದ್ದ ಅಕ್ಷರಶಃ ಮೈಸೂರು ಮತ್ತು ಕೊಡಗು ಸೀಮೆಯ ಮನೆ ಮಗನಂತಿದ್ದ ಡಾ. ಕೆ.ಬಿ. ಗಣಪತಿಯವರು ಪತ್ರಿಕಾ ರಂಗದಲ್ಲಿ ಶಿಸ್ತಿನ ಸಿಪಾಯಿಯಾಗಿದ್ದರು. ದಕ್ಷಿಣ ಕರ್ನಾಟಕದಲ್ಲಿ ಅಪಾರ ಆತ್ಮೀಯ ಓದುಗ ಬಳಗವನ್ನು ಹೊಂದಿದ್ದರು. ಮೈಸೂರು ಭಾಗದ ಜನಕ್ಕೆ 'ಮೈಸೂರು ಮಿತ್ರ' ಮತ್ತು ಸ್ಟಾರ್ ಆಫ್ ಮೈಸೂರ್' ಪತ್ರಿಕೆಯನ್ನು ಓದಲಿಲ್ಲವೆಂದರೆ ದಿನ ಪೂರ್ಣವಾಗುವುದಿಲ್ಲ ಎಂಬ ನಾಣ್ಣುಡಿಯಾಗುವ ಮಟ್ಟಿಗೆ ಪತ್ರಿಕೆಗಳ ಜೊತೆಗೆ ಓದುಗರು ತಾದಾತ್ಮ್ಯತೆಯನ್ನು ಹೊಂದಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪಡೆದು ಗೌರವಕ್ಕೆ ಪಾತ್ರರಾಗಿರುವ ಪ್ರಥಮ ಪತ್ರಕರ್ತರಾಗಿದ್ದಾರೆ. ಕೆಬಿಜಿಯೆಂದು ಪ್ರೀತಿಯಿಂದ ಕರೆಸಿಕೊಳ್ಳುತ್ತಾ ಸಮಾಜಮುಖಿ, ಮಾನವ ಕಲ್ಯಾಣ ಮತ್ತು ವ್ಯಕ್ತಿತ್ವ ವಿಕಸನದ ಬರಹಗಳಿಂದ ದೇಶ ಕಟ್ಟುವ ಕಾಯಕಕ್ಕೆ ಪ್ರಜಾಸತ್ತಾತ್ಮಕ ಮತ್ತು ಸಾಂವಿಧಾನಿಕ ಮೌಲ್ಯಗಳ ಮೂಲಕ ಹೆಗಲಾಗಿದ್ದರು. ಯಾವುದೇ ಅತಿರೇಕ-ಅಬ್ಬರ, ಹುಸಿ ಚಿಂತನೆಗಳಿಲ್ಲದ ಅವರ ಬರಹ ಮತ್ತು ಸಾಹಿತ್ಯ ಸಾರ್ವಕಾಲಿಕ ಚಿಂತನೆಗಳ ಭಂಡಾರದಂತಿದೆ.

ಸರಳ-ಸಜ್ಜನಿಕೆ, ನಗು-ಮೊಗದಿಂದ ಪತ್ರಿಕಾ ಧರ್ಮಕ್ಕೆ ಚ್ಯುತಿಯಾಗದಂತೆ ಯುವ ಪತ್ರಕರ್ತರನ್ನು, ಬರಹಗಾರರನ್ನು ರೂಪಿಸಿದ ಕೀರ್ತಿ ಕೆಬಿಜಿಯವರಿಗೆ ಸಲ್ಲುತ್ತದೆ. ಅವರು ಕಟ್ಟಿದ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳು ಮೈಸೂರು ಪಾಕ್, ಅರಮನೆ, ಚಾಮುಂಡಿಬೆಟ್ಟದಂತೆ ತನ್ನದೇ ಆದ ಅಸ್ಮಿತೆಯನ್ನು ಡಾ. ಕೆ.ಬಿ.ಗಣಪತಿಯವರು ಉಳಿಸಿ-ಬೆಳೆಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಕೆಬಿಜಿಯವರು ಸದಾ ಸ್ಮರಣೀಯರಾಗಿದ್ದಾರೆ. ಅವರಿಗೆ ಅನಂತ ಪ್ರಣಾಮಗಳು. **-ಬ್ಯಾ. ರಾ. ಪ್ರಸನ್ನಕುಮಾರ್, ಮೈಸೂರು.**

■ ದೂರವಾದ 'ಮಿತ್ರ'ನಿಗೆ ನುಡಿ ನಮನ

ಮಾನ್ಯರೆ,

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ ಅವರ ನಿಧನದ ಸುದ್ದಿ ಕೇಳಿ ಅತ್ಯಂತ ಬೇಸರವಾಯಿತು. ನಮ್ಮ ನಗರಕ್ಕೆ ಅತ್ಯಂತ ಅಮೂಲ್ಯ ಕೊಡುಗೆಯಾದ ಎರಡು ದಿನಪತ್ರಿಕೆಗಳನ್ನು ಕೊಟ್ಟ ಗಣಪತಿಯವರ ಕಾರ್ಯಗಳು ಶ್ಲಾಘನೀಯವಾಗಿದೆ. ಅವರ ನೇರ-ದಿಟ್ಟ ಬರವಣಿಗೆ, ಕೌಶಲದ ಚಾಕಚಕ್ಯತೆ ಸದಾ ನನ್ನ ಬರವಣಿಗೆಗಳಿಗೆ ಪ್ರೇರಣೆಯಾಗಿವೆ. ಕನ್ನಡ ಪತ್ರಿಕೋದ್ಯಮ ಕ್ಷೇತ್ರ ಅದರಲ್ಲಿಯೂ ಮೈಸೂರು ಜಿಲ್ಲಾ ಪತ್ರಿಕೋದ್ಯಮದಲ್ಲಿ ವಿಶೇಷ ಛಾಪು ಮೂಡಿಸಿದ್ದರು. ತಮ್ಮ ಲೇಖನಗಳಿಂದ ಆರ್.ಕೆ.ನಾರಾಯಣ್‌ರವರ ಮನೆಯ ಸಂರಕ್ಷಣೆಯಲ್ಲಿ ಮುಖ್ಯ ಪಾತ್ರ ವಹಿಸುವಿಕೆ, ಹಾಗೇ ಅನೇಕ ಸತ್ಕಾರ್ಯಗಳು ನಡೆದಿವೆ. ಸದಾಕಾಲ ಮಿನುಗುವ ನಕ್ಷತ್ರದ ಹಾಗೆ ನಮ್ಮ ಹೆಮ್ಮೆಯ 'ಸ್ಟಾರ್'ರವರ ಸಾಧನೆಗಳು ಎಂದೆಂದಿಗೂ ನಮ್ಮ ನೆನಪಿನಲ್ಲಿ ಅಜರಾಮರವಾಗಿರುತ್ತದೆ. ಅಕಾಡೆಮಿ ನ್ಯೂಸ್‌ಪೇಪರ್ ಪ್ರೈ. ಲಿ., ಕುಟುಂಬಕ್ಕೆ ತುಂಬಲಾರದ ನಷ್ಟವುಂಟಾಗಿದ್ದು, ದುಃಖ ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ನನ್ನ ಪ್ರಾರ್ಥನೆ.

-ಯಶಸ್. ಆರ್, ಲೇಖಕ ಹಾಗೂ ಸಾಮಾಜಿಕ ಕಾರ್ಯಕರ್ತ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಕೆಬಿಜಿ ಎಂಬ ತ್ರ್ಯಕ್ಷರೀ ಮಂತ್ರ

ಸಾವಿರದ ಒಂಬೈನೂರ ಅರುವತ್ತರ ಮತ್ತು ಎಪ್ಪತ್ತರ ದಶಕಗಳಲ್ಲಿ ಮೈಸೂರು ದಿನಪತ್ರಿಕೆಗಳ ತವರೂರಾಗಿತ್ತು. ಸಾಧ್ವಿ, ಮೈಸೂರು ಪತ್ರಿಕೆ ಮುಂತಾದ ಹಲವು ಹಳೆಯ ಪತ್ರಿಕೆಗಳು ಇದ್ದರೂ ಅನೇಕ ಹೊಸ ಪತ್ರಿಕೆಗಳೂ ಹುಟ್ಟುತ್ತಿದ್ದುವು. ಅಂತಹ ಅನೇಕ ದಿನಪತ್ರಿಕೆಗಳು ಸ್ವಲ್ಪ ಕಾಲದಲ್ಲೇ ಅಸ್ತಂಗತವಾಗುತ್ತಿದ್ದವು. ಅವುಗಳ ಹೆಸರು ಇತಿಹಾಸದ ಪುಟಗಳನ್ನು ಸೇರುತ್ತಿತ್ತು. ಇಂತಹ ಕಾಲದಲ್ಲಿ ಮೈಸೂರಿಗೆ ಬಂದ ಕೆ.ಬಿ.ಗಣಪತಿ ಅವರು 'ಸ್ಟಾರ್ ಆಫ್ ಮೈಸೂರ್' ಎಂಬ ಇಂಗ್ಲಿಷ್ ಪತ್ರಿಕೆಯನ್ನೂ ಸ್ವಲ್ಪ ಕಾಲಾನಂತರ 'ಮೈಸೂರು ಮಿತ್ರ' ಎಂಬ ಕನ್ನಡ ದಿನಪತ್ರಿಕೆಯನ್ನೂ ಆರಂಭಿಸಿದರು. ಹತ್ತರ ಜೊತೆಗೆ ಹನ್ನೊಂದು. ಇದೂ ನಾಲ್ಕು ದಿನಾನಂತರ ಉಳಿಯುವುದೋ ಇಲ್ಲವೋ ಎಂಬ ಸಂದೇಹ ಅನೇಕ ಜನರ ಮನಸ್ಸಿನಲ್ಲಿ ಇತ್ತು. ಕಾಮಾಕ್ಷಿ ಆಸ್ಪತ್ರೆಯ ಬಳಿ 'ಮೈಸೂರು ಮಿತ್ರ' ಕಚೇರಿ. ಇದನ್ನೆಲ್ಲ ನಾವು ನೋಡಿದ್ದೆವು.

ಪತ್ರಿಕಾ ರಂಗದಲ್ಲಿ ಸ್ಪರ್ಧೆ ಜಾಸ್ತಿ. ದೊಡ್ಡ ಪತ್ರಿಕೆಗಳು ಎಲ್ಲವೂ ಬೆಂಗಳೂರಿನಲ್ಲಿ ಮುದ್ರಿತವಾಗಿ ವ್ಯಾನುಗಳಲ್ಲಿ ಬೆಳಗಿನ ಜಾವದ ವೇಳೆಗೆ ರಾಜ್ಯದ ನಗರಗಳಿಗೆ ತಲುಪುತ್ತಿದ್ದ ಕಾಲ. ಆ ಪತ್ರಿಕೆಗಳಲ್ಲಿ ಸಹಜವಾಗಿ ಸುಪ್ರಸಿದ್ಧ ಲೇಖಕರು ಕಥೆಗಳನ್ನೂ ಕವಿತೆಗಳನ್ನೂ ವಿಮರ್ಶೆಗಳನ್ನೂ ಬರೆಯಲು ಹಂಬಲಿಸುತ್ತಿದ್ದರು. ಒಂದೋ ಎರಡೋ ಸಾವಿರ ಪ್ರಸಾರವಿರುವ ಪ್ರಾದೇಶಿಕ ಸಣ್ಣ ಪತ್ರಿಕೆಗಳಲ್ಲಿ ಲೇಖನವು ಪ್ರಕಟಗೊಂಡರೂ ಪ್ರಯೋಜನವೇನು ಎಂಬ ಧೋರಣೆ ಲೇಖಕರಲ್ಲಿತ್ತು. ಸೀಮಿತ ಪ್ರಸಾರದ ಇಂಗ್ಲಿಷ್ ಪತ್ರಿಕೆಯನ್ನು ನಡೆಸುವುದಂತೂ ಇನ್ನೂ ಕಷ್ಟ, Deccan Herald, Indian Express, The Hindu ಮುಂತಾದವು ಪ್ರತಿಷ್ಠೆಯನ್ನು ಗಳಿಸಿಕೊಂಡಿದ್ದ ಪತ್ರಿಕೆಗಳು. ಅಂತಹ ಸನ್ನಿವೇಶದಲ್ಲಿ 'ಸ್ಟಾರ್ ಆಫ್ ಮೈಸೂರ್' ಅನ್ನು ಆರಂಭಿಸಿ, ಅದಕ್ಕೆ ತನ್ನದೇ ಆದ ಗೌರವವನ್ನು ಗಳಿಸಿಕೊಟ್ಟು ಐದು ದಶಕಗಳ ಕಾಲ ಬೆಳೆಸಿದ ಸಾಹಸ ಕೆ.ಬಿ.ಗಣಪತಿಯವರದು.


ಕ್ರಿಯಾಸಿದ್ಧಿ: ಸತ್ತ್ವೇ ಭವತಿ ಮಹತಾಂ ನೋಪಕರಣೇ (ದೊಡ್ಡವರಿಗೆ ಕಾರ್ಯಸಿದ್ಧಿಯಾಗುವುದು ಅವರಲ್ಲಿರುವ ಆತ್ಮಶಕ್ತಿಯಿಂದ, ಉಪಕರಣಗಳಿಂದ ಅಲ್ಲ) ಎಂಬ ಕವಿವಾಣಿಗೆ ಜೀವಂತ ಸಾಕ್ಷಿಯಾಗಿದ್ದರು ಶ್ರೀ ಕೆ.ಬಿ. ಗಣಪತಿ. ಅವರ ಆಂಗ್ಲ ಭಾಷಾಜ್ಞಾನ, ಲೋಕ ವೃತ್ತಾಂತದ ಅರಿವು ಅವರ ನೆರವಿಗೆ ಬಂದವು. ಕೆಲವು ಪತ್ರಿಕೆಗಳಲ್ಲಿ ಕೆಲಸ ಮಾಡಿದ್ದ ಅವರಿಗೆ ಜನರ ನಾಡಿಯ ಮಿಡಿತ ಗೊತ್ತಿತ್ತು. ಅದಕ್ಕೆ ಅನುಗುಣವಾಗಿ ಅವರು ಬರೆಯುತ್ತಿದ್ದ Abracadabra ಮುಂತಾದ ಅಂಕಣಗಳು ಜನರಿಗೆ ಹಿಡಿಸಿದುವು.

ಇದರಿಂದ Star of Mysore ಎಷ್ಟು ಜನಪ್ರಿಯವಾಯಿತೆಂದರೆ ಸಾಯಂಕಾಲ ಕಚೇರಿಯಿಂದ ಹಿಂದಿರುಗಿದ ಜನ ಮನೆಗೆ ಬಂದು ಮೊದಲು ಸ್ಟಾರನ್ನು ಓದುತ್ತಿದ್ದರು. ಚಿಕ್ಕ ಗಾತ್ರದಲ್ಲಿದ್ದ ಅದು ಈಗ ಹಲವರ ಲೇಖನಗಳನ್ನು ಒಳಗೊಂಡು ಬೆಳೆದಿದೆ. ಅದರಂತೆ 'ಮೈಸೂರು ಮಿತ್ರ' ಹಲವು ಜಿಲ್ಲೆಗಳಿಗೆ ವ್ಯಾಪಿಸಿ ತನ್ನ ಪ್ರಭಾವವನ್ನು ಬೆಳೆಸಿಕೊಳ್ಳುವುದಕ್ಕೂ ಕೆಬಿಜಿ ಅವರ ದೂರದರ್ಶಿತ್ವ ಮತ್ತು ಪರಿಶ್ರಮಗಳೇ ಕಾರಣ. ಸುದ್ದಿಯಲ್ಲಿ ಪಾವಿತ್ರ್ಯ, ವಿಮರ್ಶೆಯಲ್ಲಿ ಸ್ವಾತಂತ್ರ್ಯ ಎಂಬ ನೀತಿಯನ್ನು ಅವರು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಸಮಗ್ರ ಸಮಾಜದ ಹಿತಕ್ಕಾಗಿ, ಸ್ವಾರ್ಥಿಗಳ ಕಪಟ ನಾಟಕಗಳನ್ನು ಬಯಲಿಗೆಳೆಯಲು ಅವರೆಂದೂ ಹಿಂಜರಿಯುತ್ತಿರಲಿಲ್ಲ. ಎಂದೂ ನಿರಾಧಾರವಾಗಿ ಯಾರನ್ನೂ ದೂಷಿಸಬಾರದು, ಪೂರ್ವಾಗ್ರಹದಿಂದ ಕಾರಣವೇ ಇಲ್ಲದೆ ಯಾರ ತೇಜೋವಧೆಯನ್ನು ಮಾಡಬಾರದು ಎಂಬುದು ಅವರ ಪಾಲಿಸಿ. ಅದಕ್ಕೆ ಲೋಪ ಬರುವುದನ್ನು ಅವರು ಸಹಿಸುತ್ತಿರಲಿಲ್ಲ.

ರಾಜಕೀಯದಲ್ಲಿ ಹಲವು ಪಂಥಗಳಿರುತ್ತವೆ, ಬಣಗಳಿರುತ್ತವೆ. ಆದರೆ ಪತ್ರಿಕೆ ಸತ್ಯದ ಪಂಥದಲ್ಲಿರಬೇಕು. ವೈಯಕ್ತಿಕವಾದ ಒಲವು ಏನೇ ಇರಲಿ, ಅದು ಸತ್ಯವನ್ನು ಮುಚ್ಚಿಡುವುದಕ್ಕೆ ಕಾರಣವಾಗಬಾರದು ಎಂಬುದು ಕೆಬಿಜಿ ಅವರ ನಿಲುವು.

ಭಾರತೀಯ ವಿದ್ಯಾಭವನವನ್ನು ಮಾನ್ಯ ಕುಲಪತಿ ಕೆ.ಎಂ. ಮುನ್ಷಿ ಅವರು ಸ್ಥಾಪಿಸಿದರು. ಅದು ಭಾರತೀಯ ಸಂಸ್ಕೃತಿಯ ಉನ್ನತ ಧ್ಯೇಯಗಳನ್ನು ಎತ್ತಿ ಹಿಡಿದು ಜಗತ್ತಿಗೆ ತೋರಿಸುತ್ತಿದೆ. ಅದು ಪ್ರಕಟಿಸುವ Bhavan's journal ಒಂದು ಆದರ್ಶ ಪತ್ರಿಕೆ. ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ (ಉತ್ತಮ ಚಿಂತನೆಗಳು ಎಲ್ಲ ಕಡೆಗಳಿಂದಲೂ ನಮಗೆ ಬರಲಿ) ಎಂಬುದು ಅದರ ಧ್ಯೇಯವಾಕ್ಯ. ಇದು ಕೆಬಿಜಿ ಅವರಿಗೂ ಇಷ್ಟವಾದ ತತ್ತ್ವ. ಒಳ್ಳೆಯ ಚಿಂತನೆ ಯಾರಿಂದ ಬಂದರೂ ಸ್ವೀಕರಿಸಬೇಕು ಎಂದು ಅವರು ನಂಬಿದ್ದರು. ಮೊದಲಿನಿಂದ ವಿದ್ಯಾಭವನದಲ್ಲಿ ಗೌರವಾದರಗಳನ್ನು ಹೊಂದಿದ್ದ ಕೆಬಿಜಿ ಮೈಸೂರಿನಲ್ಲಿ ಅದರ ಶಾಖೆ ಆರಂಭವಾಗಲು ಸಂಪೂರ್ಣ ಬೆಂಬಲ ನೀಡಿದರು. ಪ್ರೊ.ಎ.ವಿ.ನರಸಿಂಹಮೂರ್ತಿಯವರಿಗೆ ವಯಸ್ಸಿನ ಕಾರಣದಿಂದ, ಕೆಬಿಜಿ ವಿದ್ಯಾಭವನದ ಸಂಪೂರ್ಣ ಉತ್ತರದಾಯಿತ್ವವನ್ನು ತಾವೇ ವಹಿಸಿಕೊಂಡು ಮುನ್ನಡೆಸಿದರು. ಅದರ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಮಾರ್ಗದರ್ಶನವನ್ನು ಮಾಡಿದರು.

ಭಾರತೀಯ ವಿದ್ಯಾಭವನದ ಶಾಲೆಯಲ್ಲಿ ಮಾಡಿದ



ಸಂಸ್ಕೃತೋತ್ಸವಕ್ಕೆ ಒಮ್ಮೆ ನನ್ನನ್ನೂ ಭಾಷಣಕಾರರನ್ನಾಗಿ ಕರೆದಿದ್ದರು. ಆ ಸಮಾರಂಭದ ಅಧ್ಯಕ್ಷ ಪೀಠವನ್ನು ಕೆಬಿಜಿ ಅಲಂಕರಿಸಿದ್ದರು. ಅದನ್ನು ನಾನೆಂದೂ ಮರೆಯಲಾರೆ. ಪ್ರತಿಯೊಂದು ಕಾರ್ಯದಲ್ಲೂ ಎಂಥ ಅಚ್ಚುಕಟ್ಟು, ಆ ಕಾರ್ಯಕ್ರಮಗಳಲ್ಲಿ ಮೈಸೂರಿನ ಹಲವು ಶಾಲೆಗಳ ಸಂಸ್ಕೃತ ವಿದ್ಯಾರ್ಥಿಗಳೂ, ಅಧ್ಯಾಪಕರೂ ಭಾಗವಹಿಸಿದ್ದರು.

ನನಗೆ ಅವಕಾಶ ಬಂದಾಗ ನಾನು ಸಂಪೂರ್ಣವಾಗಿ ಸಂಸ್ಕೃತದಲ್ಲೇ ಮಾತನಾಡಿದೆ. ವಿದ್ಯಾರ್ಥಿಗಳಿಗೆ ಒಂದು ಹೊಸ ಸಂಸ್ಕೃತಗೀತೆಯನ್ನೂ ಕಲಿಸಿದೆ. ಭಾಷಣವನ್ನು ಮುಗಿಸಿ ನಾನು ಕುಳಿತುಕೊಂಡಾಗ ಪಕ್ಕದಲ್ಲೇ ಕುಳಿತಿದ್ದ ಕೆಬಿಜಿ ನನ್ನ ಬೆನ್ನು ತಟ್ಟಿ 'ನೀವು ಮಾತನಾಡುವುದು ಎಲ್ಲರ ಹೃದಯಕ್ಕೂ ಮುಟ್ಟುತ್ತದೆ. Keep it up ಎಂದರು. ಅವರ ನಿರ್ಮಲ ಪ್ರಶಂಸೆಗೆ ನಾನು ತಲೆಬಾಗಿಸಿ ವಂದಿಸಿದೆ.

ಕೆಬಿಜಿ ಅವರದು ಎಷ್ಟು ವಿಶಾಲಹೃದಯತೆ ಎಂದರೆ ನಾನು 'ಮೈಸೂರು ಮಿತ್ರ'ದಲ್ಲಿ ಬರೆಯುತ್ತಿದ್ದ ಸಂಸ್ಕೃತಿ ಚಿಂತನೆಯ ಕೆಲವು ಲೇಖನಗಳನ್ನು ಓದಿ, ಅವರೇ ನನಗೆ ದೂರವಾಣಿ ಕರೆಯನ್ನು ಮಾಡಿ 'ಚೆನ್ನಾಗಿ ಬರೆದಿದ್ದೀರಿ' ಎಂದು ಹೊಗಳಿದ್ದರು. ನನ್ನಲ್ಲಿ ಅವರಿಗೆ ಎಷ್ಟು ಅಭಿಮಾನ! ಎಂದುಕೊಂಡೆ. ವಸ್ತುತಃ ಎಲ್ಲ ಅಂಕಣಕಾರರಿಗೂ ಹೀಗೆ ಪ್ರೋತ್ಸಾಹವನ್ನು ಕೊಡುತ್ತಾರೆ. ಕಾಳಿದಾಸನ ರಘುವಂಶದಲ್ಲಿ ಒಂದು ಮಾತು ಬರುತ್ತದೆ-

'ಅಹಮೇವ ಮತೋ ಮಹೀಪತೇ-
ರಿತಿ ಸರ್ವಃ ಪ್ರಕೃತಿಷ್ವಚಿಂತಯತ್'

ನಾನೇ ರಾಜನಿಗೆ ಇಷ್ಟವಾದವನು ಎಂದು ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಅಂದುಕೊಳ್ಳುತ್ತಿದ್ದರು-ಎಂದು ಇದರ ಭಾವಾರ್ಥ. ರಾಜನು ಒಬ್ಬೊಬ್ಬರನ್ನೂ ಅಷ್ಟು ಪ್ರೀತಿಯಿಂದ ಮಾತನಾಡಿಸುತ್ತಿದ್ದುದರಿಂದ ಎಲ್ಲರಿಗೂ 'ನಾನೇ ರಾಜನಿಗೆ ಹೆಚ್ಚು ಪ್ರೀತಿ ಪಾತ್ರ' ಎಂಬ ಭಾವನೆ ಬರುತ್ತಿತ್ತು. ಕೆಬಿಜಿ ಅವರೂ ಅಷ್ಟೆ. ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದರು.

ಗುಣವನ್ನು ಮೆಚ್ಚುತ್ತಿದ್ದರು.

ಒಮ್ಮೆ ಕೆಬಿಜಿ ನಮ್ಮ ಮನೆಗೆ ಬಂದಿದ್ದರು. 'ಹದಿನೈದು ನಿಮಿಷ ನಿಮ್ಮೊಡನೆ ಚರ್ಚಿಸಬೇಕು. ಸಮಯವಿದೆಯೇ? ಎಂದು ಕೇಳಿದರು. ಹದಿನೈದು ನಿಮಿಷ ಮಾತ್ರವಲ್ಲ, ಅರ್ಧ ಘಂಟೆಯಾದರೂ ಚಿಂತೆಯಿಲ್ಲ-ಎಂದು ನಾನು ಹೇಳಿದೆ. ಉಪನಿಷತ್ತುಗಳ ಬಗೆಗೆ, ದೇವರ ಅಸ್ತಿತ್ವದ ಬಗೆಗೆ, ಧರ್ಮದ ಬಗೆಗೆ ಪ್ರಶ್ನೆಗಳನ್ನು ಕೇಳಿದರು. ನನಗೆ ತಿಳಿದುದನ್ನು ನಾನು ಹೇಳಿದೆ. ಯಾವುದನ್ನೂ ಥಟ್ಟನೆ ಅವರು ಒಪ್ಪಲಿಲ್ಲ. ನಮ್ಮ ಚರ್ಚೆ ಅರ್ಧ ಗಂಟೆಗೂ ಮೀರಿ ನಡೆಯಿತು. 'ಇನ್ನೊಮ್ಮೆ ಕೂತು ಮಾತನಾಡೋಣ' ಎಂದು ಅವರು ಹೊರಟರು. 'ಈ ರೀತಿ ಚರ್ಚೆಯನ್ನು ನಾನು ಸದ್ಗುರು ಜಗ್ಗಿ ವಾಸುದೇವ್ ಅವರೊಡನೆಯೂ ಮಾಡಿದ್ದೇನೆ' ಎಂದು ಅವರು ಕಾರನ್ನೇರಿ ಹೋದರು. ಆದರೆ, ಮತ್ತೊಮ್ಮೆ ಅವರೊಂದಿಗೆ ಚರ್ಚೆಯ ಅವಕಾಶ ಮತ್ತೆ ಬರಲೇ ಇಲ್ಲ.

ಕೆಬಿಜಿ ಎಂಬ ತ್ರ್ಯಕ್ಷರೀ ಮಂತ್ರ

ನಮಗೆ ಕೆಬಿಜಿ ಎಂದು ನೆನಪಾದಾಗ ಗೋಚರಿಸುವುದು ಮೂರು ಗುಣಗಳು. K for kindness, B for brilliance, G for generosity kindness ಎಂದರೆ ಕರುಣೆ. ಪ್ರಪಂಚದಲ್ಲಿ ಎಲ್ಲರೂ ನಮ್ಮಷ್ಟು ಅದೃಷ್ಟವಂತರಲ್ಲ. ದೇವರು, ನಮಗೆ ಕೈ, ಕಾಲು, ಕಣ್ಣು, ಬುದ್ಧಿ ಎಲ್ಲವನ್ನೂ ಕೊಟ್ಟಿದ್ದಾನೆ. ಇವು ಇಲ್ಲದವರ ಬಗೆಗೆ ದಯೆಯಿಂದ ಅವರಿಗೆ ಕೈಲಾದ ನೆರವನ್ನು ನೀಡುವುದು kindness. ಇದನ್ನು ಕೆಬಿಜಿ ಅವರಿಂದ ನಾವು ಕಲಿಯಬೇಕು. ಎರಡನೆಯದು ಬ್ರಿಲಿಯೆನ್ಸ್. ನೈಪುಣ್ಯ ಎನ್ನಬಹುದು. ಈ ಗುಣವನ್ನು ಸೂಕ್ಷ್ಮ ದೃಷ್ಟಿಯಿಂದ, ಇತರರಿಗೆ ಕಾಣಿಸದ್ದನ್ನೂ ನೋಡಬಲ್ಲ, ಚಿಂತಿಸಬಲ್ಲ ಶಕ್ತಿ. ಹಲವರು ಪತ್ರಿಕೆಗಳನ್ನು ಆರಂಭಿಸಿದ್ದರೂ ಇತರರಿಗೆ ಸಿಕ್ಕದ ಸಾಫಲ್ಯವನ್ನೂ, ಯಶಸ್ಸನ್ನೂ ಪಡೆದವರು ಕೆಬಿಜಿ. ಮೂರನೆಯದು ಜೆನರಾಸಿಟಿ. ಉದಾರ ಮನಸ್ಸಿನಿಂದ ಸಂಪತ್ತನ್ನು ಇತರರೊಡನೆ ಹಂಚಿಕೊಳ್ಳುವುದು. ಇಂಗ್ಲೀಷಿನಲ್ಲಿ Care and share. ಕೆಬಿಜಿ ಅವರ ಔದಾರ್ಯದಿಂದ ಎಷ್ಟು ಜನ ಉದ್ಯೋಗಿಗಳು ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ! ಅಂತೆಯೇ ನೂರಾರು ಜನರಿಗೆ ಇಂಗ್ಲೀಷ್‌ನಲ್ಲಿ, ಕನ್ನಡದಲ್ಲಿ ಬರೆಯಲು ಪ್ರೋತ್ಸಾಹ ಸಿಕ್ಕಿದೆ. ಅನೇಕರು ಕವಿಗಳೂ ಕಥಾಕಾರರೂ ಆಗಿದ್ದಾರೆ.

ಪತ್ರಿಕೆ ಒಂದು ವಿಶ್ವವಿದ್ಯಾನಿಲಯ

ಪತ್ರಿಕೆಯಲ್ಲಿ ವಾರ್ತೆಗಳು ಮಾತ್ರ ಪ್ರಕಟವಾಗುವುದಿಲ್ಲ. ರಾಜಕೀಯ ವಿಶ್ಲೇಷಕರ, ಅಧ್ಯಾತ್ಮ ಚಿಂತಕರ, ವಿಜ್ಞಾನ ಪರಿಣತರ, ವಿವಿಧ ಶಾಸ್ತ್ರ ನಿಪುಣರ ಲೇಖನಗಳು ಪ್ರಕಟವಾಗುತ್ತವೆ. ಕಾಳಿದಾಸ-ಭಾರವಿ-ಶ್ರೀಹರ್ಷರ ಸಂಸ್ಕೃತ ಕಾವ್ಯಗಳನ್ನು, ಪಂಪ-ರನ್ನ-ಜನ್ನರ ಹಳೆಗನ್ನಡ ಚಂಪೂಗಳನ್ನು ಸಾಮಾನ್ಯ ಜನರು ಎಲ್ಲಿ ಓದಲು ಸಾಧ್ಯ? ವಿಜ್ಞಾನ-ಗಣಿತ-ಖಗೋಳಶಾಸ್ತ್ರಗಳ ರಹಸ್ಯಗಳನ್ನು ಸಾಧಾರಣ ಓದುಗರು ಹೇಗೆ ತಿಳಿಯಬಲ್ಲರು? ಎಲ್ಲವನ್ನು ಪರಿಶ್ರಮಪಟ್ಟು ತಿಳಿದವರ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾದಾಗ ಎಲ್ಲರಿಗೂ ಜ್ಞಾನವು ಲಭ್ಯವಾಗುವುದರಿಂದ ಆ ಪತ್ರಿಕೆ ವಿಶ್ವವಿದ್ಯಾನಿಲಯ. ಪತ್ರಿಕೆಯನ್ನು ಆರಂಭಿಸಿ ನಡೆಸಿದವರು ಆ ವಿಶ್ವವಿದ್ಯಾನಿಲಯದ ಕುಲಪತಿ. ಹಾಗೆ ಈಗ ಕೀರ್ತಿಶೇಷ ಕೆ.ಬಿ. ಗಣಪತಿ ಐವತ್ತು ವರ್ಷ ಅವಿಚ್ಛಿನ್ನವಾಗಿ ಕುಲಪತಿಗಳಾಗಿದ್ದವರು. ಅವರಿಗೆ ನಮ್ಮ ಅಶ್ರುಭರಿತ ಅಂತಿಮ ನಮನ.


ಕೆ.ಬಿ. ಗಣಪತಿಯವರೆ ನೀವು ನಮ್ಮನ್ನು
ಶೋಭಿಸುವ ಲೇಖನದಿ ಪ್ರೋತ್ಸಾಹಿಸಿದಿರಿ.
ಲಾಭವನು ಲೆಕ್ಕಿಸದೆ ಜನರನ್ನು ಸಾಕಿದಿರಿ.
ಶುಭವ ತಂದಿರಿ ಜಗಕೆ, ನಿಮಗೆ ನಮನ.



ಮೈಸೂರಿನ ಭಾರತೀಯ ವಿದ್ಯಾಭವನ (ಬಿವಿಬಿ) ಶಾಲೆಯಲ್ಲಿ 2023-24ನೇ ಸಾಲಿನ ಅಂತರ ಶಾಲಾ ಸಂಸ್ಕೃತೋತ್ಸವ ಸಮಾರಂಭದಲ್ಲಿ ಖ್ಯಾತ ಸಂಸ್ಕೃತ ವಿದ್ವಾಂಸರಾದ ವಿದ್ವಾನ್ ಎಚ್.ವಿ.ನಾಗರಾಜರಾವ್ (ಬಲದಿಂದ ಮೂರನೇಯವರು), ಬಿವಿಬಿ ಅಧ್ಯಕ್ಷ ಡಾ. ಕೆ.ಬಿ.ಗಣಪತಿಯವರು (ಬಲದಿಂದ ಐದನೇಯವರು), ಉಪಾಧ್ಯಕ್ಷ ಡಾ.ಸಿ.ನಾಗಣ್ಣ, ಕಾರ್ಯದರ್ಶಿ ಪಿ.ಎಸ್.ಗಣಪತಿ, ಗೌರವ ಕೋಶಾಧಿಕಾರಿ ಡಾ.ಎ.ಟಿ.ಭಾಷ್ಯಂ, ಪ್ರಾಂಶುಪಾಲೆ ಎಸ್.ಲೇಖಾ ನಾಯರ್, ಉಪಪ್ರಾಂಶುಪಾಲ ಎಚ್.ಎನ್.ಪ್ರಫುಲ್ಲ, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಸಂಸ್ಕೃತ ಶಿಕ್ಷಕರಾದ ಎಸ್.ವಿ.ಕಲಾವತಿ ಮತ್ತು ಎಂ.ವಿ.ಶಾಮ ಉಪಸ್ಥಿತರಿದ್ದರು.

ರೈತರಿಗೆ ಬಡ್ಡಿರಹಿತ ಸಾಲ ನೀಡಲು ಪ್ರಯತ್ನ

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್‌ನ ನಿರ್ದೇಶಕ ಎಂ.ಕೆಂಚಪ್ಪ



ಮೈಸೂರು ತಾಲೂಕು ಕೇರ್ಗಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್‌ನ ನಿರ್ದೇಶಕ ಎಂ. ಕೆಂಚಪ್ಪ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಜು.15(ಎಂಟಿವೈ)- ರೈತರಿಗೆ ಬಡ್ಡಿ ರಹಿತವಾಗಿ ಸಾಲ ಕೊಡಿಸುವ ಮೂಲಕ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಪ್ರಯತ್ನ ಮಾಡುವುದಾಗಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ (ಎಂಸಿಡಿಸಿಸಿ) ಬ್ಯಾಂಕ್‌ನ ನಿರ್ದೇಶಕ ಎಂ.ಕೆಂಚಪ್ಪ ಹೇಳಿದರು.

ಮೈಸೂರು ತಾಲೂಕು ಕೇರ್ಗಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಹಕಾರ ಸಂಘಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾಗಲಿದ್ದು, ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಸಹಕಾರ ಸಂಘಗಳು ಸ್ಥಾಪನೆಯಾಗಬೇಕು. ಮಹಿಳಾ ಸಂಘಗಳು ಮುಂದೆ ಬಂದು ಸಾಲ ಪಡೆದು ಆರ್ಥಿಕವಾಗಿ ಸಬಲರಾಗಬೇಕು. ಉದ್ದಿಮೆದಾರರಿಗೆ ಹಾಗೂ ಹೈನುಗಾರಿಕೆ ಮಾಡುವವರಿಗೂ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ನೀಡಲಾಗುವುದು. ವ್ಯವಸಾಯ ಸಂಘದಲ್ಲಿ ಪಡೆದಂತಹ ಸಾಲವನ್ನು ನಿಗದಿತ ಸಮಯದಲ್ಲಿ ರೈತರು, ಮಹಿಳಾ ಸಂಘಗಳು ಕಟ್ಟಿದರೆ ಬೇರೆಯವರಿಗೂ ಸಾಲ ನೀಡಲು ಸಹಾಯವಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯರವರು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತಿದ್ದು, ಅವರ ಆಶೀರ್ವಾದದಿಂದ ಇಂದು ನಾನು ನಿರ್ದೇಶಕನಾಗಿ ಆಯ್ಕೆಯಾಗಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಹೆಚ್.ಮಹಾದೇವು, ಉಪಾಧ್ಯಕ್ಷೆ ಬಸಮ್ಮ, ನಿರ್ದೇಶಕರಾದ ಎಸ್.ಸಿದ್ದೇಗೌಡ, ಪುಟ್ಟಸ್ವಾಮಿ, ಗೌರಮ್ಮ, ಎಂ.ಬಸವರಾಜು, ಹೆಚ್.ಹೊಂಬೇಗೌಡ, ಜವರೇಗೌಡ, ಕುಮಾರ್, ಗೂಳನಾಯಕ, ಚಿಕ್ಕತಿಮ್ಮಯ್ಯ, ಮೇಲ್ವಿಚಾರಕರಾದ ವಿ.ಕೃಷ್ಣ, ಎಂ.ಗಿರೀಶ್, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮೂಗ ಶಾಂತೇಗೌಡ, ಮಲ್ಲಯ್ಯ, ಮಹಾದೇವ, ಪ್ರವೀಣ್ ಕೆಂಚಪ್ಪ ಇನ್ನಿತರರಿದ್ದರು.

ನಾಳೆ ಹೃದಯ ಹಾಡಿತು ಸಂಗೀತ ಸಂಜೆ

ಮೈಸೂರು, ಜು.15(ಜಿಎ)-ವೈದ್ಯರ ದಿನಾಚರಣೆ ಪ್ರಯುಕ್ತ ಮೈಸೂರಿನ ಅರುಣರಾಗ ಕ್ರಿಯೇಷನ್ಸ್ ವತಿಯಿಂದ ಜು.17ರಂದು ಸಂಜೆ 4 ಗಂಟೆಗೆ ನಾದಬ್ರಹ್ಮ ಸಂಗೀತ ಸಭಾದಲ್ಲಿ 'ಹೃದಯ ಹಾಡಿತು' ಎಂಬ ಸಂಗೀತ ಸಂಜೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕ್ರಿಯೇಷನ್ಸ್ ಅಧ್ಯಕ್ಷೆ ಡಾ.ರೇಖಾ ಅರುಣ್ ಈ ವಿಷಯ ತಿಳಿಸಿ, ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶಾಸಕರಾದ ಶ್ರೀವತ್ಸ ಕೆ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಡಿಎಚ್‌ಓ ಡಾ.ಕುಮಾರಸ್ವಾಮಿ, ಡಾ.ಪ್ರಸಾದ್, ಮಲ್ಲಿಕಾರ್ಜುನ ಆಗಮಿಸಲಿದ್ದಾರೆ. ವಿವಿಧ ಕ್ಷೇತ್ರದ ಸಾಧಕರು ಹಾಗೂ ಹಿರಿಯ ವೈದ್ಯರನ್ನು ಅಭಿನಂದಿಸಲಾಗುತ್ತದೆ. ಸಂಗೀತ ಸಂಜೆಯಲ್ಲಿ ಕನ್ನಡ ಹಾಗೂ ಹಿಂದಿಯ ಸುಮಾರು 30 ಚಿತ್ರಗೀತೆ ಹಾಡಲಾಗುವುದು. ಬಹುತೇಕ ಹಾಡುಗಳು ಹೃದಯ ಪದ ಒಳಗೊಂಡಿರುವುದು ವಿಶೇಷ. ಇದು ಉಚಿತ ಪ್ರವೇಶದ ಕಾರ್ಯಕ್ರಮ ಎಂದರು. ಗೋಷ್ಠಿಯಲ್ಲಿ ಕಾರ್ಯದರ್ಶಿ ಎನ್.ಗುರುರಾಜ್, ಸುನೀತಾ, ಡಾ.ಗಣೇಶ್ ಎಂ.ಶಿವಣ್ಣ, ರೂಪ್‌ಕುಮಾರ್, ನಿರೂಪಕ ಅಜಯ್ ಶಾಸ್ತ್ರಿ ಉಪಸ್ಥಿತರಿದ್ದರು.

ಜು.19, 20 ಮಾಯಾ ನಾಟಕ ಪ್ರದರ್ಶನ

ಮೈಸೂರು, ಜು.15(ಜಿಎ)-ಮೈಸೂರಿನ ವಿಜಯನಗರದಲ್ಲಿರುವ ಜಗನ್ನಾಥ ಭವನದಲ್ಲಿ ಅನುಭೂತಿ ಸಂಸ್ಥೆಯೊಂದಿಗೆ ಈವೆಂಟ್ ಟ್ರೀ ಸಂಸ್ಥೆ ಕೈಜೋಡಿಸಿ ಜು.19, 20ರಂದು 'ಮಾಯಾ' ಎಂಬ ನಾಟಕದ ಪ್ರದರ್ಶನ ಆಯೋಜಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಾಟಕ ನಿರ್ದೇಶಕ ರಾಮನಾಥ ಯೆಸ್ ಈ ವಿಷಯ ತಿಳಿಸಿ, ಇಂದಿನ ತಂತ್ರಜ್ಞಾನ ಯುಗದಲ್ಲಿ ಜನರು ಉದ್ಯೋಗ, ಜೀವನದ ದೈನಂದಿನ ಒತ್ತಡದಿಂದ ತತ್ತರಿಸುತ್ತಿರುವ ವೇಳೆ ಒಂದಷ್ಟು ನಿರಾಳವಾಗಿರಲು ಏಕಾಂಗಿ ಪ್ರವಾಸ ಕೈಗೊಳ್ಳುತ್ತಾರೆ. ಇಂತಹ ಒಂದು ಸಂದರ್ಭದಲ್ಲಿ ಕಾಡುವ ಭಯವನ್ನು ಮೀರುವ ಕಥೆಯ ಎಳೆಯನ್ನುಳ್ಳ 'ಮಾಯಾ' ಎಂಬ ನಾಟಕವಾಗಿದೆ ಎಂದರು.

ಇದು ಮೂವರೇ ಕಲಾವಿದರು ಅಭಿನಯಿಸುವ ನಾಟಕವಾಗಿದ್ದು, ಮಹಿಳೆಯರು ನವೀಕರಿತ ದೃಷ್ಟಿಕೋನದಿಂದ ಜೀವನವನ್ನು ನೋಡುವ ಸಾಧ್ಯತೆಯನ್ನು ಏಕಾಂಗಿ ಪ್ರವಾಸ ಮೂಲಕ ಪಡೆಯುತ್ತಾರೆ. ಇಂತಹ ಒಂದು ಸಂದರ್ಭದಲ್ಲಿ ಓರ್ವ ಮಹಿಳೆ ಎದುರಿಸಬೇಕಾಗಿ ಬಂದ ಭಯ, ಅದನ್ನು ಮೀರುವ ಎಳೆಯಲ್ಲಿ ನಾಟಕ ಸಾಗುತ್ತದೆ ಎಂದರು. ಗೋಷ್ಠಿಯಲ್ಲಿ ಅನುಭೂತಿ ಸಂಸ್ಥೆಯ ಸಂಸ್ಥಾಪಕ ಶ್ರೀವಿದ್ಯಾ, ಲಿಖಿತಾ ಸೇನ್, ವಿನಯ್, ಗರುಡ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದೇವನಹಳ್ಳಿ ಸುತ್ತಮುತ್ತಲ 1777 ಎಕರೆ ಭೂಸ್ವಾಧೀನ ಪ್ರಕ್ರಿಯೆ ಕೈಬಿಟ್ಟ ಸರ್ಕಾರ

- ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
- ಭೂಮಿ ನೀಡಲು ಮುಂದೆ ಬರುವ ರೈತರಿಗೆ ಹೆಚ್ಚಿನ ಪರಿಹಾರ, ಅಭಿವೃದ್ಧಿಪಡಿಸಿದ ನಿವೇಶನ ಮಂಜೂರು



ವಿಧಾನಸೌಧದಲ್ಲಿ ನಡೆದ ಅಧಿಕಾರಿಗಳು ಹಾಗೂ ರೈತ ಮುಖಂಡರ ಜೊತೆಗಿನ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಬೆಂಗಳೂರು,ಜು.15(ಕೆಎಂಶಿ)–ದೇವನಹಳ್ಳಿ ತಾಲೂಕು ಚನ್ನರಾಯಪಟ್ಟಣ ಹಾಗೂ ಸುತ್ತಮುತ್ತಲ ಗ್ರಾಮಗಳ 1,777 ಎಕರೆಯನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದರು.

ವಿಧಾನಸೌಧದಲ್ಲಿ ನಡೆದ ಅಧಿಕಾರಿಗಳು ಹಾಗೂ ರೈತ ಮುಖಂಡರ ಜೊತೆಗಿನ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವು ರೈತರು ಜಮೀನು ನೀಡಲು ಮುಂದೆ ಬಂದಿದ್ದು, ಅಂತಹ ಜಮೀನು ಸ್ವಾಧೀನಕ್ಕೆ ಹೆಚ್ಚಿನ ಪರಿಹಾರ ಮತ್ತು ಅಭಿವೃದ್ಧಿಪಡಿಸಿದ ನಿವೇಶನ ನೀಡಲಾಗುವುದು ಎಂದರು.

ಮಾರ್ಗಸೂಚಿ ದರಕ್ಕಿಂತ ಹೆಚ್ಚುವರಿ ದರ ನೀಡಲಾಗುವುದು. ಕೃಷಿ ಚಟುವಟಿಕೆ ಮುಂದುವರೆಸಲು ಬಯಸುವ ರೈತರು ಸ್ವತಂತ್ರರು. ಪ್ರತಿಯೊಬ್ಬರ ವರಮಾನ ಹೆಚ್ಚಳವಾಗಬೇಕಿದ್ದರೆ ಅಭಿವೃದ್ಧಿ ಆಗಬೇಕು. ಹೊಸ ಕೈಗಾರಿಕೆಗಳ ಆರಂಭಕ್ಕೆ ಜಮೀನು, ಬಂಡವಾಳ ಹೂಡಿಕೆ ಅಗತ್ಯವಿದೆ. ದೇವನಹಳ್ಳಿ ತಾಲೂಕಿನ ಸ್ವಾಧೀನ ಭೂಮಿಯಲ್ಲಿ ಏರೋಸ್ಪೇಸ್ ಪ್ರಾರಂಭಿಸುವುದು ಸರ್ಕಾರದ ಉದ್ದೇಶವಾಗಿತ್ತು. ಭೂಸ್ವಾಧೀನ ವಿರುದ್ಧ ಇಂತಹ ಪ್ರತಿಭಟನೆ ಎಂದೂ ನಡೆದಿರಲಿಲ್ಲ. ಅಲ್ಲಿನ ರೈತರು ಜಮೀನಿನ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಆದ್ದರಿಂದ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಬೇಕೆಂದು ಹೋರಾಟಗಾರರು ತಿಳಿಸಿದ್ದಾರೆ.

ಸರ್ಕಾರ ಎಲ್ಲರ ಅಹವಾಲು ಆಲಿಸಿದೆ. ರಾಜ್ಯದ ಅಭಿವೃದ್ಧಿಗೆ, ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ನೀಡುವುದು ಅಗತ್ಯವಾಗಿದೆ. ಜಮೀನು ಸ್ವಾಧೀನ ಕೈಬಿಡುವುದರಿಂದ ಕೈಗಾರಿಕೆಗಳು ಬೇರೆ ಕಡೆ ಹೋಗುವ ಸಾಧ್ಯತೆ ಇದೆ. ಸರ್ಕಾರ ರೈತಪರವಾಗಿದ್ದು, ಅವರ ಬೇಡಿಕೆ ಪರಿಗಣಿಸಿ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಲು ನಿರ್ಧರಿಸಿದೆ ಎಂದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ ಐದು ಪಾಲಿಕೆ ರಚನೆ ಬಳಿಕ ಸದ್ಯದಲ್ಲೇ ಚುನಾವಣೆ

- ಬೆಂಗಳೂರು ಅಭಿವೃದ್ಧಿ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಘೋಷಣೆ
- ಯಾರೇ ವಿರೋಧಿಸಿದರೂ ಆಡಳಿತ ದೃಷ್ಟಿಯಿಂದ ಐದು ನಗರಪಾಲಿಕೆ ಅಸ್ತಿತ್ವಕ್ಕೆ

ಬೆಂಗಳೂರು, ಜು. 15(ಕೆಎಂಶಿ)– ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ ಐದು ನಗರಪಾಲಿಕೆ ರಚಿಸಿ, ಶೀಘ್ರದಲ್ಲೇ ಚುನಾವಣೆ ನಡೆಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಭವನದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಪದಾಧಿಕಾರಿಗಳ ಸಮಾವೇಶದಲ್ಲಿ ಮಾತನಾಡಿದ ಅವರು, ಐದು ನಗರಪಾಲಿಕೆ ರಚನೆ ಖಚಿತ, ಕೆಲವರು ವಿರೋಧ ಮಾಡಿದರೂ ಆಡಳಿತ ದೃಷ್ಟಿಯಿಂದ ಮಾಡಲೇಬೇಕಾಗಿದೆ ಎಂದರು.

ಐದು ನಗರಪಾಲಿಕೆ ರಚನೆಯಾದರೆ ಕಾರ್ಯಕರ್ತರಿಗೆ ಹೆಚ್ಚಿನ ಸ್ಥಾನಮಾನ ನೀಡಲೇಬೇಕು, ಮಾಡುವ ತೀರ್ಮಾನ ಜಾರಿಗೆ ತರುವುದು ರಾಯಭಾರಿಗಳಾದ ಕಾರ್ಯಕರ್ತರಾಗಿದ್ದು, ನಮ್ಮ ಮತ್ತು ಬೆಂಗಳೂರು ಭವಿಷ್ಯ ಅವರ ಕೈಯ್ಯಲ್ಲಿದೆ.

ಸಮಾಜ ಹಾಗೂ ಬಡವರ ಕಲ್ಯಾಣಕ್ಕೆ 1 ಲಕ್ಷ ಕೋಟಿ ರೂ. ನೀಡಿದ್ದೇವೆ. 50 ಸಾವಿರ ಕೋಟಿ ರೂ. ಗ್ಯಾರಂಟಿಗಳಿಗೆ ವೆಚ್ಚವಾದರೆ, 19 ಸಾವಿರ ಕೋಟಿ ರೂ. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, 11 ಸಾವಿರ ಕೋಟಿ ರೂ. ಪಿಂಚಣಿಗೆ ವೆಚ್ಚ ಮಾಡಲಾಗುತ್ತಿದೆ, ರಾಜ್ಯ ಬಜೆಟ್‌ನ ಶೇ.25ನ್ನು ಜನರಿಗೆ ನೀಡುತ್ತಿದ್ದೇವೆ. ಇದನ್ನು ಜನರಿಗೆ ಮನದಟ್ಟು ಮಾಡುವುದು ಕಾರ್ಯಕರ್ತರ ಕರ್ತವ್ಯ. ದೇಶದ ಇತಿಹಾಸದಲ್ಲಿ ಕಾಂಗ್ರೆಸ್ ನೀಡಿರುವ ಕಾರ್ಯಕ್ರಮಗಳಾದ ಉಳುವವನೇ ಭೂಮಿ ಒಡೆಯ, ಅಂಗನವಾಡಿ, ಆಶಾ, ಮನ್ರೇಗಾ, ಶಕ್ತಿ ಯೋಜನೆ, ಅರಣ್ಯ ಭೂಮಿ ಹಕ್ಕು, ಆಹಾರ ಭದ್ರತಾ ಕಾಯ್ದೆ ಸ್ಥಗಿತಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ.

ಬ್ಯಾಂಕ್‌ಗಳ ರಾಷ್ಟ್ರೀಕರಣ, ಬಿಸಿಯೂಟ, ಅನ್ನಭಾಗ್ಯ ಕ್ರಾಂತಿಕಾರಕ ಯೋಜನೆಗಳು, ಹಟ್ಟಿ, ತಾಂಡಾಗಳ ಜನರಿಗೆ ಇದುವರೆಗೆ 1,11,111 ಭೂದಾಖಲೆ ನೀಡಲಾಗಿದೆ.

ಬಿಜೆಪಿ ಭಾವನೆಗಳ ಮೇಲೆ ರಾಜಕಾರಣ ಮಾಡಿದರೆ, ನಾವು ಬದುಕಿನ ಮೇಲೆ ರಾಜಕಾರಣ ಮಾಡುತ್ತೇವೆ. ವಿರೋಧ ಪಕ್ಷಗಳು ಸದನದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ವಿರುದ್ಧ ಕೋಲಾಹಲ ಎಬ್ಬಿಸಿದವು, ಶಾಸಕರ ಕಾರ್ಯ ಪ್ರಗತಿ ಮಾಡಲು ನೀವು ಯಾರು ಎಂಬುದಾಗಿ ಪ್ರಶ್ನಿಸಿದರು, ಶಾಸಕರ ಸ್ಥಾನಕ್ಕೆ ಕುತ್ತು ತಂದಿದ್ದೀರಿ ಎಂದರು, ಅವರ ಮಾತುಗಳಿಗೆ ನಾವು ಬಗ್ಗಲಿಲ್ಲ ಎಂದರು.

ಕಾರ್ಯಕರ್ತರಿಗೆ ಆಸ್ಪತ್ರೆ, ಬಗರ್ ಹುಕುಂ ಸೇರಿದಂತೆ ಅನೇಕ ಸಮಿತಿಗಳಲ್ಲಿ ಅವಕಾಶ ನೀಡಿದ್ದೇವೆ, ಸದಸ್ಯರ ಸಂಖ್ಯೆ ಹೆಚ್ಚಳ ಮಾಡಿ, ಪ್ರತಿ ಕ್ಷೇತ್ರದಲ್ಲಿ ಪಕ್ಷಕ್ಕಾಗಿ ದುಡಿದ ಎಲ್ಲಾ ವರ್ಗದ 15 ಜನರನ್ನು ಗುರುತಿಸಿ ಅಧಿಕಾರ ನೀಡಲಾಗಿದೆ. ಸರ್ಕಾರ ಐದು ಗ್ಯಾರಂಟಿ ಜೊತೆಗೆ ಭೂ ಗ್ಯಾರಂಟಿ ನೀಡಿದೆ, ಈಗ ಬೆಂಗಳೂರು ನಗರದ ಎಲ್ಲಾ ಆಸ್ತಿ ಖಾತಾ ದಾಖಲೆ ಮನೆ ಬಾಗಿಲಿಗೆ ತಲುಪಿಸುವ ಕಾರ್ಯಕ್ರಮ ರೂಪಿಸಲಾಗಿದೆ, ಅನೇಕ ಆಸ್ತಿ ಮಾಲೀಕರಿಗೆ ತಮ್ಮ ಆಸ್ತಿ ಯಾರ ಹೆಸರಿನಲ್ಲಿದೆ ಎಂಬುದೇ ಗೊತ್ತಿಲ್ಲ, ಅಪ್ಪ ತಾತ, ಮುತ್ತಾತನ ಹೆಸರಿನಲ್ಲಿ ಖಾತೆಗಳಿವೆ. ಇದನ್ನು ಸರಿಪಡಿಸಿ ದಾಖಲೆ ನೀಡಲು ಮುಂದಾಗಿದ್ದೇವೆ. ಕಾಲೇಜುಗಳಲ್ಲಿ ವಿದ್ಯಾರ್ಥಿ ಮಟ್ಟದ ಚುನಾವಣೆ ನಡೆಸಲು ಚರ್ಚಿಸುತ್ತಿದ್ದೇವೆ, ಕಾರ್ಯಕರ್ತರು ಶಕ್ತಿಶಾಲಿಯಾಗಿದ್ದರೆ, ಪಕ್ಷ ಬಲಿಷ್ಠವಾಗಲು ಸಾಧ್ಯ ಎಂದರು.



ಡಿ.ಕೆ.ಶಿವಕುಮಾರ್

> ಪ್ರತಿ ವಾರ್ಡ್, ಪಂಚಾಯತ್ ಮಟ್ಟದಲ್ಲಿ ಗ್ಯಾರಂಟಿ ಸಮಾವೇಶ ಮಾಡುವ ಬಗ್ಗೆ ಚರ್ಚಿಸುತ್ತಿದ್ದೇವೆ. ಸರ್ಕಾರ ವಾರ್ಡ್, ಮೀಸಲಾತಿ ತೀರ್ಮಾನ ಮಾಡಲಿದೆ. ಜನರ ಮಧ್ಯೆ ಇರುವವರು ಮಾತ್ರ ಗೆಲ್ಲಲು ಸಾಧ್ಯ, ಬೂತ್ ಮಟ್ಟದಲ್ಲಿ ಜನ ಸಂಪರ್ಕ, ಪ್ರೀತಿ ಇಟ್ಟುಕೊಳ್ಳಿ, ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿ ಗ್ಯಾರಂಟಿ ಸಮಿತಿ ಗುರುತಿನ ಚೀಟಿ ಕೊಡಿಸುತ್ತೇವೆ. ಕಾರ್ಯಕರ್ತನಾಗಿ ಬಂದ ನಾನು, ಇಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷನಾಗಿದ್ದೇನೆ. ನಿಮ್ಮ ನೋವು ಅರಿವಾಗುತ್ತದೆ, ಅವಕಾಶ ಸಿಕ್ಕಾಗ ಸೂಕ್ತ ಅಧಿಕಾರ ನೀಡುತ್ತೇವೆ.

ಇತರೆಡೆ ಇಲ್ಲದ ವಿರೋಧ ಇಲ್ಲೇಕೆ: ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಟನಲ್ ರಸ್ತೆ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಿದೆ ಎಂಬ ಸಂಸದ ತೇಜಸ್ವಿ ಸೂರ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, ದೆಹಲಿ, ಮುಂಬೈ ಸೇರಿದಂತೆ ದೇಶದ ಇತರೆಡೆ ಟನಲ್ ರಸ್ತೆ ಮಾಡಲಾಗುತ್ತಿದೆ. ಅಲ್ಲಿ ವ್ಯಕ್ತವಾಗದ ವಿರೋಧ ಇಲ್ಲಿ ಏಕೆ, ಅವರಿಗೆ ನಂತರ ಉತ್ತರಿಸುತ್ತೇನೆ ಎಂದರು.

ನಾವು ಏನೇ ಮಾಡಿದರು ಟೀಕೆ ಮಾಡುತ್ತಾರೆ. ಬಿಜೆಪಿ ಅಭಿವೃದ್ಧಿಗೆ ವಿರುದ್ಧವಾಗಿರುವ ಪಕ್ಷ. ಬೆಂಗಳೂರಿಗೆ ಅದರ ಕೊಡುಗೆ ಶೂನ್ಯ ಎಂದರು.

ಮಹಿಳೆಯರಿಗೆ ಶೇ.33 ಮೀಸಲಾತಿ

> ಮಹಿಳಾ ಕಾರ್ಯಕರ್ತರು ಪಕ್ಷಕ್ಕಾಗಿ ದುಡಿಯುತ್ತಾರೆ, ಅವರಿಗಾಗಿ ರಾಜಕೀಯದಲ್ಲಿ ಶೇ.33 ಮೀಸಲಾತಿ ತರಲು ಪ್ರಯತ್ನ ಮಾಡಿದೆವು. ಇದು ಜಾರಿಯಾಗುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ, ಮುಂಬರುವ ವಿಧಾನಸಭೆ, ಲೋಕಸಭೆ ಚುನಾವಣೆಗೆ ಜಾರಿಗೆ ತರಲು ಸಿದ್ಧತೆ ನಡೆಯುತ್ತಿದೆ. ಜಾರಿಯಾದರೆ, ನಮ್ಮ ಜೊತೆಗೆ 75 ಜನ ಮಹಿಳಾ ಶಾಸಕಿಯರೂ ಇರುತ್ತಾರೆ. ಸ್ಥಳೀಯ ಸಂಸ್ಥೆಗಳಲ್ಲಿ ಈಗಾಗಲೇ ಶೇ.50 ಮೀಸಲಾತಿ ನೀಡಿದ್ದೇವೆ.
>
> –ಡಿ.ಕೆ.ಶಿವಕುಮಾರ್, ಡಿಸಿಎಂ

ಪ.ಜಾತಿ, ಪಂಗಡದ ಅಧಿಕಾರಿಗಳ ಮುಂಬಡ್ತಿ ತಾರತಮ್ಯ ಸರಿಪಡಿಸಲು ಖರ್ಗೆ ಸಲಹೆ

ಬೆಂಗಳೂರು, ಜು. 15(ಕೆಎಂಶಿ)– ಪರಿಶಿಷ್ಟ ಜಾತಿ ಪಟ್ಟಿಗೆ ಬೇಡಜಂಗಮ ಸಮುದಾಯ ಸೇರ್ಪಡೆಯನ್ನು ಬಹಿರಂಗವಾಗಿ ವಿರೋಧಿಸಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಇದೀಗ ಪರಿಶಿಷ್ಟ ಜಾತಿ ಹಾಗೂ ಪಂಗಡದ ಅಧಿಕಾರಿಗಳ ಮುಂಬಡ್ತಿಯಲ್ಲಿ ತಾರತಮ್ಯ ಆಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಖರ್ಗೆ, ಪರಿಶಿಷ್ಟ ಸಮುದಾಯದ ಅಧಿಕಾರಿಗಳಿಗೆ ಬಡ್ತಿ ವೇಳೆ ಎಲ್ಲಿ ಅನ್ಯಾಯವಾಗಿದೆ ಎಂಬುದನ್ನು ದಾಖಲೆಸಹಿತ ಒದಗಿಸಿ ಸರಿಪಡಿಸುವಂತೆ ಸಲಹೆ ನೀಡಿದ್ದಾರೆ.


ಪರಿಶಿಷ್ಟ ಜಾತಿ ಹಾಗೂ ಪಂಗಡದ ನೌಕರರ ಮುಂಬಡ್ತಿಯಲ್ಲಿ ನಿಯಮ ಪಾಲನೆಯಾಗುತ್ತಿಲ್ಲ, ಈ ಕುರಿತು ಗಮನಹರಿಸಿ ತಕ್ಷಣವೇ ಕ್ರಮ ಕೈಗೊಳ್ಳಿ.

ಪರಿಶಿಷ್ಟ ಜಾತಿ ಹಾಗೂ ಪಂಗಡದ ನೌಕರರಿಗೆ ಮುಂಬಡ್ತಿಯಲ್ಲಿ ಸರ್ಕಾರವೇ ಹೊರಡಿಸಿರುವ ಆದೇಶ ಹಾಗೂ ಸುತ್ತೋಲೆಗಳ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸ್ಪಷ್ಟ ಆದೇಶ ನೀಡಿ. ತಪ್ಪಿದಲ್ಲಿ ಅಧಿಕಾರಿಗಳ ಮಟ್ಟದಲ್ಲಿ ಅಸಮಾಧಾನ ಉಂಟಾಗಿ ಸರ್ಕಾರದ ಕೆಲಸಗಳು ಕಷ್ಟವಾಗುತ್ತದೆ, ಎದುರಾಗಿರುವ ತೊಡಕುಗಳ ನಿವಾರಣೆಗೆ ಗಮನಹರಿಸಲು ಸೂಚಿಸಬಯಸುತ್ತೇನೆ ಎಂದಿದ್ದಾರೆ.

ಜು.18ರಂದು ಲೇಖಕರು, ಪ್ರಕಾಶಕರ ಸಭೆ

ಮೈಸೂರು, ಜು.15– ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘದ ವತಿಯಿಂದ ಜು.18ರ ಶುಕ್ರವಾರ ಸಂಜೆ 4.30 ಗಂಟೆಗೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಹೋಟೆಲ್ ಗುರು ರೆಸಿಡೆನ್ಸಿಯಲ್ಲಿ ಸಭೆ ನಡೆಯಲಿದೆ. ಕನ್ನಡ ಪುಸ್ತಕೋದ್ಯಮ ಮತ್ತು ಗ್ರಂಥಾಲಯ ಇಲಾಖೆಯ ಪುಸ್ತಕ ಖರೀದಿ ನೀತಿ ಮತ್ತು ಇತರೆ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ತಪ್ಪದೆ ಸಭೆಗೆ ಆಗಮಿಸಿ ಸಲಹೆ, ಸೂಚನೆ ನೀಡುವಂತೆ ಸಂಘದ ಅಧ್ಯಕ್ಷ ಡಿ.ಎನ್.ಲೋಕಪ್ಪ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ



ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.7ರ ಮೇಟಗಳ್ಳಿಯಲ್ಲಿ ಆಷಾಢ ಮಾಸದ ಪ್ರಯುಕ್ತ ಏರ್ಪಡಿಸಿದ್ದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವದಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಭಾಗವಹಿಸಿದ್ದರು. ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯ ದೇವರಾಜ್, ಮುಖಂಡರಾದ ಕೇಬಲ್ ಶಿವಣ್ಣ, ಸೂರಿ, ಕೇಬಲ್ ಮಂಜು, ಮುಕುಂದ, ರವಿ, ಕಾಂತ, ಶ್ರೀಮತಿ ನಾಗರತ್ನ, ಪರಮೇಶ್‌ಗೌಡ, ಪ್ರವೀಣ್, ಗಿರೀಶ್ ಹಾಗೂ ಮುಖಂಡರು ಉಪಸ್ಥಿತರಿದ್ದರು.

ರೋಟರಿ ಮೈಸೂರು ಅಂಬಾರಿ ಪದವಿ ಪ್ರದಾನ ಸಮಾರಂಭ




ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇತ್ತೀಚೆಗೆ ರೋಟರಿ ಮೈಸೂರು ಅಂಬಾರಿ ಪದವಿ ಪ್ರದಾನ ಸಮಾರಂಭ ನಡೆಯಿತು. ಈ ವೇಳೆ ನಿರ್ಗಮಿತ ರೋ. ಪ್ರಕಾಶ್ ಕಾರಂತ್, ನೂತನ ಅಧ್ಯಕ್ಷ ರೋ. ಹರೀಶ್ ಅವರಿಗೆ ಪದವಿ ಪ್ರದಾನ ಮಾಡಿದರು.

ಭಾರತಕ್ಕೆ ಬಹುದೊಡ್ಡ ಆಘಾತ ಕಾದಿದೆ!

ಮೈಸೂರಲ್ಲಿ ಕೋಡಿಮಠದ ಶ್ರೀಗಳ ಭವಿಷ್ಯ

ಮೈಸೂರು, ಜು.15(ಬಿಎಲ್‌ಯು)– ಭಾರತಕ್ಕೆ ಬಹು ದೊಡ್ಡ ಆಘಾತ ಕಾದಿದೆ. ಇಡೀ ವಿಶ್ವವೇ ದಿಟ್ಟಿಸಿ ನೋಡುವಂತಹ ಗಂಡಾಂತರ ನಮ್ಮ ದೇಶಕ್ಕೆ ಕಾದಿದೆ ಎಂದು ಕೋಡಿಮಠದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಇಂದಿಲ್ಲಿ ಭವಿಷ್ಯ ನುಡಿದಿದ್ದಾರೆ.



ಮೈಸೂರಿನ ಖಾಸಗಿ ಸಂಸ್ಥೆಯ ಧ್ಯಾನ ಕೇಂದ್ರಕ್ಕೆ ಭೇಟಿ ನೀಡಿದ್ದ ವೇಳೆ ಪತ್ರಕರ್ತರ ಜೊತೆ ಮಾತನಾಡಿದ ಅವರು, ರಾಜ್ಯ ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವವರಿಗೆ ಮುಂದಿನ ದಿನಗಳಲ್ಲಿ ತೊಂದರೆ ಕಟ್ಟಿಟ್ಟಬುತ್ತಿ ಎಂದು ಮತ್ತೊಮ್ಮೆ ಎಚ್ಚರಿಸಿದರು.

ಮುಂದಾಗುವ ಸಮಸ್ಯೆ ಅರಿತು ಈಗಲೇ ಅದಕ್ಕೆ ಪರಿಹಾರ ಸೂತ್ರ ಕಂಡುಕೊಳ್ಳಬೇಕು. ಇಲ್ಲದಿದ್ದರೆ ಯುದ್ಧ ಮುಂದುವರೆಯುತ್ತದೆ ಎಂದು ಆತಂಕ ವ್ಯಕ್ತಪಡಿಸಿದ ಶ್ರೀಗಳು, ಮನಸುಗಳ ವೈರತ್ವ ನಿಂತಾಗ ಮಾತ್ರ ಯುದ್ಧ ನಿಲ್ಲುತ್ತದೆ ಎಂದು ಅಭಿಪ್ರಾಯಪಟ್ಟರು.


ಮನುಷ್ಯ ಮೌನವಾಗಿದ್ದರೆ ಹೆಚ್ಚು ಜ್ಞಾನ ಸಂಪಾದನೆ ಮಾಡಬಹುದು. ಅದು ಬಿಟ್ಟು ಕೆಟ್ಟ ಆಲೋಚನೆ ಮಾಡಿದರೆ ಆಪತ್ತುಗಳನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದರು.

ಪ್ರಕೃತಿ ಮತ್ತು ವೃಕ್ಷಗಳಿಗೆ ತನ್ನದ ಆದ ಅಗಾಧ ಶಕ್ತಿ ಇದೆ. ಮರಣವನ್ನೆ ಮೆಟ್ಟಿ ನಿಲ್ಲುವ ಔಷಧದ ಶಕ್ತಿ ಗಿಡ ಮೂಲಿಕೆಗಳಿಗೆ ಇದೆ. ಈ ಹಿನ್ನೆಲೆಯಲ್ಲಿ ನಮ್ಮ ಪರಿಸರ ಸಂರಕ್ಷಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಂಚತಾರಾ ವೃಕ್ಷಗಳಲ್ಲಿ ಹೆಚ್ಚು ಆಮ್ಲಜನಕ ಉತ್ಪತ್ತಿ ಮಾಡುವ ಶಕ್ತಿ ಇದೆ. ಇವು ಮಾನವ ಕುಲಕ್ಕೆ ದೈವ ವೃಕ್ಷವೆಂದೇ ಹೇಳಬಹುದು. 84 ಲಕ್ಷ ಜೀವ ರಾಶಿಗಿಂತ ಮನುಷ್ಯನಿಗೆ ಜ್ಞಾನ ಮತ್ತು ವಿವೇಕವನ್ನು ದೇವರು ನೀಡಿದ್ದಾನೆ. ಆದರೆ ಇದನ್ನು ಸದ್ಬಳಕೆ ಮಾಡಿಕೊಂಡು ಸನ್ಮಾರ್ಗದಲ್ಲಿ ನಡೆಸಬೇಕು. ಆಗ ಮಾತ್ರ ಮೋಕ್ಷ ಪ್ರಾಪ್ತಿಯಾಗುತ್ತದೆ ಎಂದು ಹೇಳಿದರು.

ಧ್ಯಾನ ಕೇಂದ್ರಗಳು ಆಧ್ಯಾತ್ಮಿಕ ಮತ್ತು ಧಾರ್ಮಿಕ ಬೆಳವಣಿಗೆಗೆ ಹೆಚ್ಚು ಸಹಕಾರಿಯಾಗಲಿದೆ ಎಂದು ಕೋಡಿಮಠದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಅಭಿಪ್ರಾಯಪಟ್ಟರು.

ಜ್ಯೋತಿಷ್ಮತಿ–ದಿವ್ಯ ಪರಿಚಯ ಕಾರ್ಯಕ್ರಮ



ಭಾರತೀಯ ಜ್ಯೋತಿಷ್ಯ ವಿಜ್ಞಾನ ಮಂಡಳಿಯ ಮೈಸೂರು ವಿಭಾಗದ ವತಿಯಿಂದ "ಜ್ಯೋತಿಷ್ಮತಿ–ದಿವ್ಯ ಪರಿಚಯ" ಕಾರ್ಯಕ್ರಮ ನಡೆಯಿತು.

ಮೈಸೂರು,ಜು.15–ಗುರು ಪೌರ್ಣಿಮಾ ದಿನದ ಅಂಗವಾಗಿ ಭಾರತೀಯ ಜ್ಯೋತಿಷ್ಯ ವಿಜ್ಞಾನ ಮಂಡಳಿ, ಮೈಸೂರು ವಿಭಾಗವು "ಜ್ಯೋತಿಷ್ಮತಿ–ದಿವ್ಯ ಪರಿಚಯ" ಎಂಬ ಶೀರ್ಷಿಕೆಯಡಿ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮವು ಜ್ಯೋತಿಷ್ಯ ಹಾಗೂ ಪರಿಹಾರ ವಿಧಾನಗಳು ಎಂಬ ವಿಷಯಗಳ ಸುತ್ತ ಆಳವಾದ ಚರ್ಚೆ ನಡೆಸಿತು. ಎ.ಬಿ. ಶುಕ್ಲಾ ಜೀ ಅವರು ಆಧ್ಯಾತ್ಮಿಕ ಹಾಗೂ ಜ್ಯೋತಿಷ್ಯ ಯಾತ್ರೆಯಲ್ಲಿ ಗುರುವಿನ ಮಹತ್ವದ ಕುರಿತು ಉಪನ್ಯಾಸ ನೀಡಿದರು. ಅವರು ಗುರುವಿನಿಂದ ದತ್ತವಾಗುವ ಮಂತ್ರಗಳ ಶಕ್ತಿಯನ್ನು ವಿವರಿಸಿದರೆ, ಪರಿಹಾರ ವಿಭಾಗದ ಭಾಗವಾಗಿ, ಚಕ್ರಗಳು ಹಾಗೂ ಗ್ರಹಗಳ ಪ್ರಭಾವಗಳಿಗೆ ಹೊಂದಿರುವ ಬೀಜ ಮಂತ್ರಗಳನ್ನು ತಿಳಿಸಿ, ಸಿದ್ಧಾಂತ ಮತ್ತು ಅರ್ಥಪೂರ್ಣ ಅನುಷ್ಠಾನದ ನಡುವಿನ ಸಂಪರ್ಕವನ್ನು ಸ್ಪಷ್ಟವಾಗಿ ತೋರಿಸಿದರು.

ವೇದಿಕೆಯಲ್ಲಿ ಐಸಿಎಎಸ್ ಪರೀಕ್ಷಾ ಮುಖ್ಯಸ್ಥರಾದ ಡಾ. ಸೌಮ್ಯ ಕುಮಾರ್, ಸಹಾಯಕ ರಾಷ್ಟ್ರೀಯ ಅಧ್ಯಕ್ಷ ಸುಬ್ರಹ್ಮಣ್ಯ ತಂತ್ರಿ, ಮೈಸೂರು ವಿಭಾಗದ ರವೀಂದ್ರ ಭಟ್, ಮೋಹನ್ ಬಾಬು, ರಘೋತ್ತಮ ಸವನೂರು, ಗುರುಪ್ರಸಾದ್, ಸರ್ವ ಮಂಗಳಾ, ಸುಜಾತಾ ಜೋಷಿ, ಶ್ರೀದೇವಿದಾಸ್, ನಿರ್ಮಲಾ ಮತ್ತಿತರರು ಉಪಸ್ಥಿತರಿದ್ದರು.

ಕಂದಕಕ್ಕೆ ಉರುಳಿದ ಟೆಂಪೊ ಟ್ರಾವೆಲರ್; ಐವರು ಸಾವು



ಶ್ರೀನಗರ: ಮಂಗಳವಾರ ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಟೆಂಪೋ ಟ್ರಾವೆಲರ್ ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ ಕನಿಷ್ಠ ಐದು ಜನರು ಸಾವನ್ನಪ್ಪಿದ್ದು, ಕನಿಷ್ಠ 17 ಜನರು ಗಾಯಗೊಂಡಿದ್ದಾರೆ. ವಾಹನವು ಗುಡ್ಡಗಾಡು ಪ್ರದೇಶದಲ್ಲಿ ಚಲಿಸುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯಿಂದ ಕೆಳಗಿಳಿದು ಕಡಿದಾದ ಇಳಿಜಾರಿನಲ್ಲಿ ಉರುಳಿದೆ ಎಂದು ವರದಿಯಾಗಿದೆ. ವಾಹನದಲ್ಲಿ ಎಷ್ಟು ಪ್ರಯಾಣಿಕರಿದ್ದಾರೆ ಎಂಬುದು ಇನ್ನೂ ನಿಖರವಾಗಿ ತಿಳಿದುಬಂದಿಲ್ಲ. ಘಟನೆ ನಡೆದ ಕೂಡಲೇ ಸ್ಥಳೀಯ ಪೊಲೀಸರು ಮತ್ತು ರಕ್ಷಣಾ ಕಾರ್ಯಕರ್ತರು ಕಾರ್ಯಾಚರಣೆ ಆರಂಭಿಸಿದರು. ಅಪಘಾತದಲ್ಲಿ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯಾಳುಗಳನ್ನು ದೋಡಾದ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಕರೆದೊಯ್ಯಲಾಯಿತು. ಅಲ್ಲಿ ಇಬ್ಬರು ಸಾವನ್ನಪ್ಪಿದರು, ಹೀಗಾಗಿ ಮೃತರ ಸಂಖ್ಯೆ ಐದಕ್ಕೆ ತಲುಪಿದೆ ಎಂದು ದೋಡಾದ ಮುಖ್ಯ ವೈದ್ಯಾಧಿಕಾರಿ ತಿಳಿಸಿದರು. ಮೃತರಲ್ಲಿ ಒಬ್ಬ ಮಹಿಳೆಯೂ ಸೇರಿದ್ದಾರೆ ಎಂದು ಅವರು ಹೇಳಿದರು.

ಇಂದು ಕೆ.ಹೆಚ್.ರಾಮಯ್ಯ ಜಯಂತಿ ಕಾರ್ಯಕ್ರಮ

ಮೈಸೂರು, ಜು.15(ಬಿಎಲ್‌ಯು)– ರಾಜ್ಯ ಒಕ್ಕಲಿಗ ಸಂಘದ ಸಂಸ್ಥಾಪಕ ಕೆ.ಹೆಚ್.ರಾಮಯ್ಯರವರ ಜಯಂತಿ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಕೆ.ಹೆಚ್. ರಾಮಯ್ಯ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ನಾಳೆ (ಜುಲೈ 16) ನಡೆಯಲಿದೆ.



ವಿಜಯನಗರದ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಉದ್ಘಾಟಿಸುವರು. ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್‌ಗೌಡ, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಜಿ. ಗಂಗಾಧರ್, ಗೌರವಾಧ್ಯಕ್ಷ ಡಾ.ಸಿ.ವೈ.ಶಿವೇಗೌಡ, ರಾಜ್ಯ ಒಕ್ಕಲಿಗರ ಸಂಘದ ಮಾಜಿ ಗೌರವಾಧ್ಯಕ್ಷ ಕೆ.ವಿ.ಶ್ರೀಧರ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ. ಇದೇ ವೇಳೆ ಕೆ.ಹೆಚ್.ರಾಮಯ್ಯ ಸೇವಾ ರತ್ನ ಪ್ರಶಸ್ತಿಯನ್ನು ಸಿ.ರಮೇಶ್, ಕೆ.ಎನ್.ಧನ್ಯಕುಮಾರ್, ಡಾ.ಲಕ್ಷ್ಮೀಗೌಡ, ಎಸ್.ಜಯಪ್ರಕಾಶ್, ಪ್ರೊ.ಸಿ.ಹೆಚ್.ಪ್ರಕಾಶ್, ಪಾಂಡುರಂಗ ಸತೀಶ್ ಗೌಡ, ನಟರಾಜು, ಶೋಭಾ ರಾಣಿ ಗೌಡ, ರವಿಚಂದ್ರ ಹಂಚ್ಯಾ ಅವರಿಗೆ ನೀಡಲಾಗುವುದು.

ಇಂದು ಕೃಷಿ ಜಂಟಿ ನಿರ್ದೇಶಕರ ಜೊತೆ ನೇರ ಫೋನ್–ಇನ್



ಮೈಸೂರು, ಜು. 15–ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್. ರವಿ ಅವರ ಜೊತೆ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ಜು.16ರಂದು ಬೆಳಗ್ಗೆ 11:30ರಿಂದ 12:30ರವರೆಗೆ ಆಯೋಜಿಸಲಾಗಿದೆ. ರೈತರು ಹಾಗೂ ಸಾರ್ವಜನಿಕರು ಕೃಷಿ ಇಲಾಖೆಯಲ್ಲಿ ರೈತರಿಗಾಗಿ ಅಥವಾ ಕೃಷಿಗಾಗಿ ಇರುವ ಸೇವಾ ಸೌಲಭ್ಯಗಳು, ಉತ್ತೇಜನಗಳ ಕುರಿತಂತೆ ಯಾವುದೇ ಪ್ರಶ್ನೆಗಳು ಅಥವಾ ಸಲಹೆಗಳು ಇದ್ದಲ್ಲಿ ಕರೆಮಾಡಿ ಜಂಟಿ ನಿರ್ದೇಶಕರ ಜೊತೆ ನೇರವಾಗಿ ಮಾತನಾಡಬಹುದು. ಅದಕ್ಕಾಗಿ ನೀವು ಕರೆಮಾಡಬೇಕಾದ ನಿಲಯದ ದೂರವಾಣಿ ಸಂಖ್ಯೆ: 8296725912/0821–2546563 ಸಂಪರ್ಕಿಸಬಹುದು. ಜೆಎಸ್‌ಎಸ್ ರೇಡಿಯೋವನ್ನು ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ.

ಸಂಗೀತ ಆಲಿಸುವುದರಿಂದ ಏಕಾಗ್ರತೆ, ಜ್ಞಾಪಕಶಕ್ತಿ ವೃದ್ಧಿಸುತ್ತದೆ

ಸ್ವರಾಲಯ ಸಾಂಸ್ಕೃತಿಕ ವೈಭವದಲ್ಲಿ ವಿದುಷಿ ಹೆಚ್.ವಿ.ವಾಸವಾಂಬ ಅಭಿಮತ



ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸ್ವರಾಲಯ ಸಂಗೀತ ಸಂಸ್ಥೆಯು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಸ್ವರಾಲಯ ಸಾಂಸ್ಕೃತಿಕ ವೈಭವ ಆಯೋಜಿಸಲಾಗಿತ್ತು.

ಮೈಸೂರು, ಜು.15–ರಾಮಕೃಷ್ಣನಗರದಲ್ಲಿರುವ ಸ್ವರಾಲಯ ಸಂಗೀತ ಸಂಸ್ಥೆಯು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಇತ್ತೀಚೆಗೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಆಯೋಜಿಸಿದ್ದ ಸ್ವರಾಲಯ ಸಾಂಸ್ಕೃತಿಕ ವೈಭವ ಇದರ ಮುಂದುವರೆದ ಭಾಗವನ್ನು ಸಂಗೀತ ಶಿಕ್ಷಕಿ ವಿದುಷಿ ಹೆಚ್.ವಿ.ವಾಸವಾಂಬ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಸಂಗೀತವನ್ನು ಆಲಿಸುವುದರಿಂದ ಮನಸ್ಸಿನಲ್ಲಿರುವ ದುಗುಡ, ದುಮ್ಮಾನ ದೂರವಾಗಿ ನೆಮ್ಮದಿ, ಉಲ್ಲಾಸ ನೀಡುತ್ತದೆ. ದಿನನಿತ್ಯ ಒತ್ತಡದ ಜಂಜಾಟದಲ್ಲಿರುವ ನಾವು ಕರ್ನಾಟಕ ಶಾಸ್ತ್ರೀಯ ಸಂಗೀತ ಅಥವಾ ಇನ್ನಾವುದೇ ಸಂಗೀತವನ್ನು ಕೇಳುವುದರಿಂದ ಮನಸ್ಸು ಹಗುರವಾಗಿ ಪ್ರಫುಲ್ಲಗೊಳ್ಳುತ್ತದೆ. ಸಂಗೀತಕ್ಕೆ ಅಂತಹ ಶಕ್ತಿ ಇದೆ ಎಂದು ಅಭಿಪ್ರಾಯಪಟ್ಟರು.

ಗಾಯನ ಹಾಗೂ ವೀಣಾವಾದನ ಸಂಗೀತ ಶಿಕ್ಷಕಿ ವಿದುಷಿ ಸುಕನ್ಯಾ ಮಾತನಾಡಿ, ಮೈಸೂರು ನಗರ ಕಲೆ, ಸಂಸ್ಕೃತಿ, ಪರಂಪರೆಗೆ ಹೆಸರುವಾಸಿಯಾಗಿದೆ. ವಿಶ್ವ ಸಂಗೀತ ದಿನ ಆಚರಣೆಗೆ ಬಂದ ಮೇಲೆ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಸಂಗೀತ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ. ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಶಾಸ್ತ್ರೀಯವನ್ನು ವಿದೇಶಿಯರು ಬಹಳ ಆಸಕ್ತಿಯಿಂದ ಕಲಿತುಕೊಳ್ಳುತ್ತಿದ್ದಾರೆ. ಆದರೆ ನಮ್ಮವರು ಇದನ್ನು ಕಲಿತುಕೊಳ್ಳಲು ಮೂಗುಮುರಿಯುತ್ತಿರುವುದು ಬೇಸರದ ಸಂಗತಿ. ಹಾಗಾಗಿ ಸಂಗೀತ, ನೃತ್ಯ, ಚಿತ್ರಕಲೆ, ವಾದ್ಯಪರಿಕರ ಕಲಿಕೆಗೆ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಕಲಾ ಪೋಷಕಿ ಡಾ.ಸ್ವರ್ಣಾಂಭ ಲೋಕೇಶ್ ಮಾತನಾಡಿ, ನಾನು ವೃತ್ತಿಯಲ್ಲಿ ವೈದ್ಯೆ ಆದ್ದರಿಂದ ಚಿಕ್ಕ ವಯಸ್ಸಿನಿಂದ ಕಲೆಯಲ್ಲಿ ತುಂಬಾ ಆಸಕ್ತಿ. ವೇದಿಕೆಯಲ್ಲಿರುವ ವಿದುಷಿಯರು, ಸಾಧಕಿಯರ ಮುಂದೆ ನಾನು ಏನೂ ಇಲ್ಲ. ಎಷ್ಟೋ ಜನರಿಗೆ ಸಂಗೀತ ಕಲಿಯಬೇಕೆಂಬ ಆಸಕ್ತಿ ಇರುತ್ತದೆ. ಆದರೆ ಅವರ ವೃತ್ತಿ ಜೀವನದ ನಡುವೆ ಅವಕಾಶ ವಂಚಿತರಾಗಿರುತ್ತಾರೆ. ಅವರಿಗೆ ನಾನು ಒಂದು ಸಲಹೆ ಕೊಡುವುದೇನೆಂದರೆ ನೀವು ದಿನದ 24 ಗಂಟೆಗಳಲ್ಲಿ ಕೇವಲ ಒಂದು ಗಂಟೆ ಸಂಗೀತಕ್ಕೆ ಮೀಸಲಿಡಿ. ಸಮಯಕ್ಕೆ ನಾವು ಹೊಂದಿಕೊಳ್ಳಬೇಕೆ ಹೊರತು ಸಮಯ ನಮ್ಮನ್ನು ಹೊಂದುಕೊಳ್ಳುವುದಿಲ್ಲ ಎಂದು ಕಿವಿಮಾತು ಹೇಳಿದರು. ಗಾಯಕಿ ಕೆ.ಸವಿತಾ ಮಾತನಾಡಿದರು.

ವೇದಿಕೆ ಕಾರ್ಯಕ್ರಮದ ನಂತರ ಸೋಮಶೇಖರ್ ತಂಡದವರಿಂದ ಜಾನಪದ ಗಾಯನ, ವಿದುಷಿ ಸುಮ ಹರಿನಾಥ್ ನಿರ್ದೇಶಿಸಿದ 'ಸ್ವದೇಶಿ ಸಂಗೀತ ವಿದೇಶಿ ವಿದ್ಯಾರ್ಥಿ' ನಾಟಕ ಪ್ರದರ್ಶನ, ಕು.ಜಿ.ಅನಘಾರವರಿಂದ ಮನಮೋಹಕ ಭರತನಾಟ್ಯ ಏರ್ಪಡಿಸಲಾಗಿತ್ತು. ಸ್ವರಾಲಯ ತಂಡದಿಂದ ಶೀರ್ಷಿಕೆ ಗೀತೆ ಆಲಯ ಸ್ವರಾಲಯ ಪ್ರಸ್ತುತ ಪಡಿಸಲಾಯಿತು. ಸ್ವರಾಲಯ ಅಧ್ಯಕ್ಷೆ ವಿದುಷಿ ಸುಮ ಹರಿನಾಥ್ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಕಾರ್ಯಕ್ರಮಕ್ಕೆ ಶ್ರೀಮತಿ ಗೀತ ಶ್ರೀಹರಿ ಪ್ರಾರ್ಥಿಸಿದರೆ, ಸ್ವರಾಲಯ ಕಾರ್ಯದರ್ಶಿ ಹೆಚ್.ಎಸ್.ಶ್ರೀಕಾಂತಾಮಣಿ ಸ್ವಾಗತಿಸಿ, ನಿರೂಪಿಸಿದರು.

ಮೈಸೂರು ಮಿತ್ರ ಬುಧವಾರ 16 ಜುಲೈ 2025

ಹಿರಿಯ ಪತ್ರಕರ್ತ ಡಾ.ಕೆಬಿಜಿ, ನಟಿ ಬಿ.ಸರೋಜಾದೇವಿಗೆ ಶ್ರದ್ಧಾಂಜಲಿ



ಹಿರಿಯ ಪತ್ರಿಕೋದ್ಯಮಿ ಡಾ.ಕೆ.ಬಿ.ಗಣಪತಿ ಮತ್ತು ಹಿರಿಯ ಬಹುಭಾಷಾ ನಟಿ ಬಿ.ಸರೋಜಾದೇವಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕೆ.ಆರ್.ಪೇಟೆ, ಜು.15– ಹಿರಿಯ ಪತ್ರಕರ್ತರೂ ಆದ 'ಮೈಸೂರು ಮಿತ್ರ ಹಾಗೂ ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಮೂಡಿಸಿರುವ ಹೆಜ್ಜೆ ಗುರುತುಗಳು ಯುವ ಪತ್ರಕರ್ತರಿಗೆ ದಾರಿದೀಪವಾಗಿದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಆರ್.ಪೂರ್ಣಚಂದ್ರ ತೇಜಸ್ವಿ ಹೆಮ್ಮೆಯಿಂದ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದ ಆವರಣದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ತಾಲೂಕು ಕಸಾಪ, ತಾಲೂಕು ಜಾನಪದ ಪರಿಷತ್, ಕರವೇ, ಕರ್ನಾಟಕ ಯುವ ರಕ್ಷಣಾ ವೇದಿಕೆ ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಹಿರಿಯ ಪತ್ರಿಕೋದ್ಯಮಿ ಡಾ.ಕೆ.ಬಿ. ಗಣಪತಿ ಮತ್ತು ಹಿರಿಯ ಬಹುಭಾಷಾ ನಟಿ ಬಿ.ಸರೋಜಾದೇವಿ ಅವರಿಗೆ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಎರಡೂ ಚೇತನಗಳಿಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಸುಮಾರು 5 ದಶಕಗಳ ಕಾಲ ಪತ್ರಿಕೆ ಮುನ್ನಡೆಸುವುದು ಸವಾಲಿನ ಕೆಲಸ. ಆದರೂ 'ಮೈಸೂರು ಮಿತ್ರ' ಕನ್ನಡ ದಿನಪತ್ರಿಕೆ, 'ಸ್ಟಾರ್ ಆಫ್ ಮೈಸೂರ್' ಆಂಗ್ಲ ಸಂಜೆ ದಿನಪತ್ರಿಕೆಯನ್ನು ಯಶಸ್ವಿಯಾಗಿ ಮುನ್ನಡೆಸುವ ಮೂಲಕ ಪತ್ರಿಕೋದ್ಯಮದಲ್ಲಿ ತಾವು ಹೊಂದಿದ್ದ ಆಸಕ್ತಿಯನ್ನು ತೋರಿಸಿಕೊಟ್ಟಿದ್ದಾರೆ. ನೂರಾರು ಯುವ ಪತ್ರಕರ್ತರನ್ನು ಹುಟ್ಟು ಹಾಕಿ, ವಸ್ತುನಿಷ್ಠ ವರದಿ ಪ್ರಕಟಿಸುವ ಮೂಲಕ ಪತ್ರಿಕೋದ್ಯಮದ ಘನತೆ ಹೆಚ್ಚಿಸಿದ್ದಾರೆ. ಸ್ವತಃ ತಾವೇ ಪ್ರಚಲಿತ ವಿದ್ಯಮಾನ ಕುರಿತು ವಿಶೇಷ ವರದಿ ಬರೆಯುವ ಮೂಲಕ ಓದುಗರ ಮನ ಗೆದ್ದಿದ್ದರು. ಅಲ್ಲದೇ ಹತ್ತಾರು ಕೃತಿಗಳನ್ನು ಬರೆಯುವ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿಯೂ ತಮ್ಮ ಹೆಜ್ಜೆ ಗುರುತನ್ನು ಉಳಿಸಿ ನಮ್ಮನ್ನು ಅಗಲಿದ್ದಾರೆ. ಅವರು ಭೌತಿಕವಾಗಿ ನಮ್ಮನ್ನು ಅಗಲಿದ್ದರೂ ಪತ್ರಿಕೆಯೊಂದಿಗೆ ಕೆ.ಬಿ.ಗಣಪತಿ ಅವರು ನಿತ್ಯ ನಮ್ಮೊಟ್ಟಿಗೆ ಇರುತ್ತಾರೆ ಎಂದರು.

ಬಹುಭಾಷಾ ನಟಿ ಬಿ.ಸರೋಜಾದೇವಿ ಅವರು ಕನ್ನಡ, ಹಿಂದಿ, ತಮಿಳು, ತೆಲುಗು ಸೇರಿದಂತೆ ಹಲವು ಭಾಷೆಗಳಲ್ಲಿ ನಟಿಸುವ ಮೂಲಕ ಅಭಿನಯ ಸರಸ್ವತಿಯಾಗಿ ಸಿನಿಪ್ರಿಯರನ್ನು ಸುಮಾರು 6 ದಶಕಗಳ ಕಾಲ ರಂಜಿಸಿದ್ದಾರೆ. ಇಂತಹ ಪ್ರತಿಭಾವಂತ ಮೇರುನಟಿ ಕಳೆದುಕೊಂಡಿದ್ದು ಭಾರತೀಯ ಚಿತ್ರರಂಗಕ್ಕೆ ತುಂಬಲಾರದ ನಷ್ಟ ಎಂದರು.

ತಾಲೂಕು ಕಸಾಪ ಮಾಜಿ ಅಧ್ಯಕ್ಷ ಕೆ.ಆರ್. ನೀಲಕಂಠ, ಮಂಜುನಾಥ್, ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್ ಮಾತನಾಡಿದರು. ಈ ವೇಳೆ ನಿವೃತ್ತ ಪ್ರಾಂಶುಪಾಲ ಕೆ.ಕಾಳೇಗೌಡ, ತಾಲೂಕು ಜಾನಪದ ಪರಿಷತ್ ಅಧ್ಯಕ್ಷ ಕೆ.ಎಸ್.ಸೋಮಶೇಖರ್, ಕಾರ್ಯದರ್ಶಿ ವಾಸು, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅರುಣ್‌ಕುಮಾರ್, ತಾಲೂಕು ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ. ಶಿವಪ್ಪ, ಕಸಾಪ ಕಾರ್ಯದರ್ಶಿ ಮಹೇಶ್, ವಕೀಲ ನಯಾಜ್ ಪಾಷಾ, ಕರ್ನಾಟಕ ಯುವ ರಕ್ಷಣಾ ವೇದಿಕೆ ಅಧ್ಯಕ್ಷ ಜಾವೀದ್, ನಿಸಾರ್, ಭಾಸ್ಕರ್, ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ವಿ.ಸತೀಶ್, ಪತ್ರಕರ್ತರಾದ ಹೆಚ್.ಬಿ.ಮಂಜುನಾಥ್, ವಿ.ಲೋಕೇಶ್, ಎಸ್.ರವಿ, ಮಂಜುನಾಥ್, ಗೋವಿಂದರಾಜು, ರಂಗನಾಥ್, ಶಿಕ್ಷಕರಾದ ಆರ್.ಕೆ.ರಮೇಶ್, ನಾಗೇಶ್, ಎಸ್.ಎನ್.ಮಂಜೇಗೌಡ, ಆರ್.ಕೆಮಹೇಶ್, ಗೋಪಿ, ವಿದ್ಯುತ್ ಚೇತನ್, ತಾಲೂಕು 'ಮೈಸೂರು ಮಿತ್ರ' ವರದಿಗಾರ ಆರ್.ಶ್ರೀನಿವಾಸ್ ಮತ್ತಿತರರಿದ್ದರು.

ಮನ್‌ಮುಲ್ ಒಕ್ಕೂಟದ 2 ಲಕ್ಷ ಲೀಟರ್ ಹಾಲನ್ನು

ಉತ್ತರ ಭಾರತದ ಮಾರುಕಟ್ಟೆಗಳಲ್ಲಿ ಮಾರಲು ಚಿಂತನೆ

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾಹಿತಿ



ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿದರು.

ಪಾಂಡವಪುರ, ಜು.15– ಮನ್‌ಮುಲ್ ಒಕ್ಕೂಟದ ಹಾಲನ್ನು ಉತ್ತರ ಪ್ರದೇಶ, ಛತ್ತೀಸ್‌ಗಡ ಹಾಗೂ ಜಾರ್ಖಂಡ್ ಮಾರುಕಟ್ಟೆಯಲ್ಲಿ 2 ಲಕ್ಷ ಲೀಟರ್‌ವರೆಗೆ ಮಾರಾಟ ಮಾಡಲು ಆಡಳಿತ ಮಂಡಿಸಿ ಚಿಂತನೆ ನಡೆಸಿದೆ ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ತಾಲೂಕಿನ ಬನ್ನಂಗಾಡಿ ಹಾಲು ಉತ್ಪಾದಕರ ಸಹಕಾರ ಸಂಘದಿಂದ ನಡೆದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ದೆಹಲಿ ಮಾರುಕಟ್ಟೆಯಲ್ಲಿ ನಿತ್ಯ 50 ಸಾವಿರ ಲೀಟರ್ ಹಾಲು ಮಾರಾಟವಾಗುತ್ತಿದೆ. ಇದರ ಜೊತೆಗೆ ಮಾರುಕಟ್ಟೆಯನ್ನು ಮತ್ತಷ್ಟು ವಿಸ್ತರಣೆ ಮಾಡಲು ಒಕ್ಕೂಟದ ಆಡಳಿತ ಚಿಂತನೆ ನಡೆಸಿದ್ದು, ದೆಹಲಿ ಅಕ್ಕಪಕ್ಕದ ರಾಜ್ಯಗಳಾದ ಉತ್ತರ ಪ್ರದೇಶ, ಛತ್ತೀಸ್‌ಗಡ ಹಾಗೂ ಜಾರ್ಖಂಡ್ ರಾಜ್ಯಗಳಲ್ಲಿ ಸುಮಾರು 2 ಲಕ್ಷ ಲೀಟರ್‌ವರೆಗೆ ಹಾಲು ಮಾರಾಟ ಮಾಡುವ ಸಂಬಂಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಲು ಒಕ್ಕೂಟದ ಆಡಳಿತ ಮಂಡಳಿಯವರು ದೆಹಲಿಗೆ ತೆರಳುತ್ತಿದ್ದೇವೆ ಎಂದರು.

ರೈತರಿಗೆ ಹಾಲಿನ ಫ್ಯಾಟ್ ಆಧಾರದ ಮೇಲೆ ದರ ನಿಗದಿಪಡಿಸಬೇಕು. ಅದಕ್ಕಾಗಿ ಡೇರಿಗಳಲ್ಲಿ ಕಾಮನ್ ಸಾಫ್ಟ್‌ವೇರ್ ಯಂತ್ರಗಳನ್ನು ಅಳವಡಿಸಿಕೊಳ್ಳಬೇಕು. ತಾಲೂಕಿನ ಹಲವು ಸಂಘಗಳಲ್ಲಿ ಈಗಾಗಲೇ ಕಾಮನ್ ಸಾಫ್ಟ್‌ವೇರ್ ಅಳವಡಿಕೆ ಮಾಡಿಕೊಂಡಿದ್ದಾರೆ. ಅಧಿಕಾರಿಗಳೊಂದಿಗೆ ರೈತರು ಹಾಗೂ ಆಡಳಿತ ಮಂಡಳಿಯವರು ಸಹಕಾರ ನೀಡಬೇಕು ಎಂದರು.

ಬನ್ನಂಗಾಡಿಗೆ 5 ಸಾವಿರ ಲೀ. ಸಾಮರ್ಥ್ಯದ ಬಿಎಂಸಿ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ಮಂಜೂರು ಮಾಡಿಕೊಡುವಂತೆ ಗ್ರಾಮಸ್ಥರು, ಯಜಮಾನರು ಒತ್ತಾಯಿಸಿದ್ದು, ಎರಡನ್ನು ಮಂಜೂರು ಮಾಡಲು ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ತಾಪಂ ಮಾಜಿ ಸದಸ್ಯ ಬಿ.ಪಿ.ಶ್ರೀನಿವಾಸ್ ಮಾತನಾಡಿ, ನಿಮ್ಮ ಚಿಕ್ಕಪ್ಪ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಶಾಸಕರಾಗಿದ್ದಾಗ ಬನ್ನಂಗಾಡಿ ಗ್ರಾಮಕ್ಕೆ ಸಾಕಷ್ಟು ಅನುದಾನ ಕೊಟ್ಟು ಅಭಿವೃದ್ಧಿಪಡಿಸಿದ್ದಾರೆ. ಇದೀಗ ನೀವು ಹೊಸದಾಗಿ ಮನ್‌ಮುಲ್ ನಿರ್ದೇಶಕರಾಗಿ ಆಯ್ಕೆಯಾಗಿದ್ದೀರಿ, ನಮ್ಮ ಡೇರಿಯಲ್ಲಿ ಹಾಲು ಉತ್ಪಾದನೆ ಹೆಚ್ಚಾಗಿರುವುದರಿಂದ ಒಕ್ಕೂಟದಿಂದ ಡೇರಿಗೆ 5 ಸಾವಿರ ಲೀಟರ್ ಸಾಮರ್ಥ್ಯದ ಬಿಎಂಸಿ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ಮಂಜೂರು ಮಾಡಿಸಿಕೊಡಬೇಕೆಂದು ಮನವಿ ಮಾಡಿದರು.

ಈ ವೇಳೆ ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗ ವಿಸ್ತರಣಾಧಿಕಾರಿ ಉಷಾ, ತಾಪಂ ಮಾಜಿ ಅಧ್ಯಕ್ಷ ಬಿ.ಡಿ.ಹುಚ್ಚೇಗೌಡ, ಡೇರಿ ಪ್ರ.ಅಧ್ಯಕ್ಷ ಕರೀಗೌಡ, ನಿರ್ದೇಶಕರಾದ ನಾಗೇಶ್, ಧನಂಜಯ್, ಸ್ವಾಮಿ, ರವಿಕಿರಣ, ರವಿ, ಮಂಜು, ರೇಖಾ, ಸೌಮ್ಯ, ನಾಗೇಗೌಡ ಬಿ.ಪಿ., ಸುರೇಶ್, ಗ್ರಾಪಂ ಅಧ್ಯಕ್ಷ ಬಲರಾಮಶೆಟ್ಟಿ, ಮಾಜಿ ಅಧ್ಯಕ್ಷ ಯೋಗಣ್ಣ, ಬಿ.ಜಿ.ಪ್ರಕಾಶ್, ಮೇಸ್ತ್ರು ಶಿವಪ್ಪ, ವಿಶ್ವ, ಪ್ರಸನ್ನ, ಚಲುವೇಗೌಡ, ಬೋವಿಸ್ವಾಮಿಯಿನಾಗಣ್ಣ, ಕಾರ್ಯದರ್ಶಿ ಪ್ರಸನ್ನ ಸೇರಿದಂತೆ ಗ್ರಾಮಸ್ಥರು, ಯಜಮಾನರು, ಸಿಬ್ಬಂದಿಗಳು ಇದ್ದರು.

ಸಹಕಾರ ಕ್ಷೇತ್ರ ಅಜರಾಮರಗೊಳಿಸಿದವರು ಕೆವಿಎಸ್

ಆರ್‌ಎಪಿಸಿಎಂಎಸ್ ಅಧ್ಯಕ್ಷ ಯು.ಸಿ.ಶೇಖರ್



ನಿತ್ಯ ಸಚಿವ ಕೆ.ವಿ.ಶಂಕರಗೌಡರ ಜನ್ಮದಿನ ಆಚರಿಸಲಾಯಿತು.

ಮಂಡ್ಯ, ಜು.15– ಸಹಕಾರ ಕ್ಷೇತ್ರವನ್ನು ಅಜರಾಮರಗೊಳಿಸಿದ ಕೀರ್ತಿ ಅಜಾತಶತ್ರು ಕೆ.ವಿ.ಶಂಕರಗೌಡರಿಗೆ ಸಲ್ಲುತ್ತದೆ ಎಂದು ಆರ್‌ಎಪಿಸಿಎಂಎಸ್ ಅಧ್ಯಕ್ಷ ಯು.ಸಿ.ಶೇಖರ್ ಹೇಳಿದರು.

ನಗರದ ರೈತ ಸಭಾಂಗಣದ ಆವರಣದಲ್ಲಿರುವ ನಿತ್ಯ ಸಚಿವ ಕೆ.ವಿ.ಶಂಕರಗೌಡ ಪ್ರತಿಮೆ ಬಳಿ ಆರ್‌ಎಪಿಸಿಎಂಎಸ್ ಆಡಳಿತ ಮಂಡಳಿ ಆಯೋಜಿಸಿದ್ದ ನಿತ್ಯ ಸಚಿವ ಕೆ.ವಿ.ಶಂಕರಗೌಡರ 110ನೇ ಜನ್ಮದಿನ ಆಚರಣೆ ಮತ್ತು ಮಾಲಾರ್ಪಣೆ, ಸಿಹಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಂಡ್ಯ ನೆಲದಲ್ಲಿ ಶಿಕ್ಷಣ, ಸಹಕಾರ, ರಾಜಕೀಯ, ರಂಗಭೂಮಿ, ಸಾಮಾಜಿಕ ಕಳಕಳಿ, ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಾತಃಸ್ಮರಣೆ ಮಾಡುವ ರೀತಿ ಅಪಾರ ಕೊಡುಗೆ ನೀಡಿದ್ದಾರೆ. ಇಂತಹವರು ಹಾಕಿಕೊಟ್ಟ ಮಾರ್ಗದಲ್ಲಿ ಇಂದಿನ ರಾಜಕಾರಣಿಗಳು, ಸಹಕಾರಿಗಳು ನಡೆದುಕೊಂಡು ಸಾಗಿದರೆ ಸಾಕು, ಕೆವಿಎಸ್ ಅವರ ನೆರಳಿನಲ್ಲಿ ನಾವು ಸಾಧನೆ ಮಾಡೋಣ ಎಂದರು.

ಎಲ್ಲಾ ಸಹಕಾರ ಸಂಘ ಸಂಸ್ಥೆಗಳಲ್ಲಿ ಕೆ.ವಿ.ಶಂಕರಗೌಡರ ಜನ್ಮದಿನ ಆಚರಣೆ ಮಾಡುವುದು ಸೂಕ್ತ. ನಿರ್ದೇಶಕರಾದ ಬೇಲೂರು ಸೋಮಶೇಖರ್ ಅವರು ಪ್ರಸ್ತಾಪ ಮಾಡಿದ ರೀತಿ ಸಹಕಾರ ಸಂಸ್ಥೆಗಳು ಕೆವಿಎಸ್ ಅವರನ್ನು ಸ್ಮರಿಸಲಿ, ಗೌರವ ಸಮರ್ಪಿಸಲಿ ಎಂದರು.

ಕಾರ್ಯಕ್ರಮದಲ್ಲಿ ಆರ್‌ಎಪಿಸಿ ಎಂಎಸ್ ತಾಲೂಕು ಆಡಳಿತ ಮಂಡಳಿ ನಿರ್ದೇಶಕರಾದ ಬೇಲೂರು ಸೋಮಶೇಖರ್, ಉದಯಕುಮಾರ್ ಗೊರವಾಲೆ, ಕಲ್ಲಹಳ್ಳಿ ರವೀಂದ್ರ, ಪಾಪಣ್ಣ, ವ್ಯವಸ್ಥಾಪಕ ಶಂಕರ್ ಮತ್ತು ಸಿಬ್ಬಂದಿಗಳಿದ್ದರು.

ಚಂಚಲ ಮನಸ್ಸು ಬದಿಗಿಟ್ಟು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ



ಹಿರಿಯ ವಿದ್ಯಾರ್ಥಿಗಳು ಮತ್ತು ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಭಾರತೀನಗರ, ಜು.15– ವಿದ್ಯಾಭ್ಯಾಸದ ದಿನಗಳಲ್ಲಿ ಚಂಚಲ ಮನಸ್ಸನ್ನು ಬದಿಗಿಟ್ಟು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಜಿ.ಕೆ.ಕೃಷ್ಣ ತಿಳಿಸಿದರು.

ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಬಿಇಟಿ ಪಾಲಿಟೆಕ್ನಿಕ್‌ನಿಂದ ಆಯೋಜಿಸಿದ್ದ ಹಿರಿಯ ವಿದ್ಯಾರ್ಥಿಗಳಿಂದ ಅನುಭವ ಹಂಚಿಕೆ ಕಾರ್ಯಕ್ರಮ ಹಾಗೂ ಹೊಸ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಉನ್ನತ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳು ಶ್ರದ್ಧೆಯಿಂದ ಓದುವ ಮೂಲಕ ತಮ್ಮ ಗುರಿ ಸಾಧಿಸಬೇಕು. ಸ್ಪರ್ಧಾತ್ಮಕ ಜಗತ್ತಿನಲ್ಲಿ ಶಿಕ್ಷಣಕ್ಕೆ ಬಹಳ ಮಹತ್ವವಿದೆ. ಹಾಗಾಗಿ ವಿದ್ಯಾರ್ಥಿಗಳು ಡಿಪ್ಲೋಮೊ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಮ್ಮ ಸಂಸ್ಥೆಯಿಂದ ತರಬೇತಿ ನೀಡಲಾಗುವುದು. ಇದರಿಂದ ಉನ್ನತ ವಿದ್ಯಾಭ್ಯಾಸದಲ್ಲಿ ತೊಡಗುವ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ವಿವಿಧ ಕಂಪನಿಗಳು ನಮ್ಮ ಸಂಸ್ಥೆಗೆ ಭೇಟಿ ನೀಡಿ ಪರೀಕ್ಷೆಗೆ ಒಳಪಡಿಸಿ ನುರಿತ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶ ನೀಡಲಿದೆ ಎಂದರು.

ಹೆಲ್ತ್ ಸೈನ್ಸ್ ನಿರ್ದೇಶಕ ತಮಿಜ್‌ಮಣಿ ಮಾತನಾಡಿ, ದಿ.ಜಿ.ಮಾದೇಗೌಡರು ಕಟ್ಟಿದ್ದಂತಹ ಸಂಸ್ಥೆಯನ್ನು ನಾನು ಪೋಷಣೆ ಮಾಡುತ್ತಿದ್ದೇನೆ. ಗ್ರಾಮೀಣ ಜನರಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕೆಂಬುವುದು ನಮ್ಮ ವಿದ್ಯಾಸಂಸ್ಥೆ ಗುರಿಯಾಗಿದೆ. ಇಲ್ಲಿ ಓದಿದ ವಿದ್ಯಾರ್ಥಿಗಳು ಉನ್ನತ ಹುದ್ದೆ ಅಲಂಕರಿಸಿದ್ದಾರೆ ಎಂದರು.

ಈ ವೇಳೆ ಬಿಇಟಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಉನ್ನತ ಉದ್ಯೋಗ ಪಡೆದ ಹಿರಿಯ ವಿದ್ಯಾರ್ಥಿಗಳು ಮತ್ತು ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಬಿ.ಎಂ.ಮಹೇಶ್, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಬಿ.ಮಹದೇವ, ಸಿವಿಲ್ ವಿಭಾಗದ ಮುಖ್ಯಸ್ಥ ಜಿ.ಪಿ.ಶಶಿಧರ್, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಬಿ.ಎನ್.ರಾಜು, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥೆ ಕೆ.ಎಸ್.ನವ್ಯಶ್ರೀ, ಆಟೋಮೊಬೈಲ್ ವಿಭಾಗದ ಮುಖ್ಯಸ್ಥ ಎಸ್.ಎ.ಬೋರೇಗೌಡ, ವಿಜ್ಞಾನ ವಿಭಾಗದ ಮುಖ್ಯಸ್ಥ ಹೆಚ್.ಸಿ.ಪ್ರಕಾಶ್ ಹಾಗೂ ಎಲ್ಲಾ ವಿಭಾಗಗಳ ಅಧ್ಯಾಪಕರು ಹಾಜರಿದ್ದರು.

ಮೂರನೇ ಪುಟದಿಂದ

ಪಾಲಿಕೆಗಳ ನೌಕರರ ಬೇಡಿಕೆಗಳಿಗೆ ಅಸ್ತು

ಕಾನೂನು ಪರಿಮಿತಿಯೊಳಗೆ ವಲಯ ಆಯುಕ್ತರ ಹುದ್ದೆ ಸೃಜಿಸುವ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ. ಈ ಬಗ್ಗೆ ಆರ್ಥಿಕ ಇಲಾಖೆ ಅಭಿಪ್ರಾಯ ಬಂದ ತಕ್ಷಣ ಕ್ರಮ ವಹಿಸಲಾಗುವುದು. ಮಹಾನಗರ ಪಾಲಿಕೆಗಳಲ್ಲಿ ಪರಿಸರ ಇಂಜಿನಿಯರ್ ಹುದ್ದೆಗಳು ಸಾಕಷ್ಟು ಖಾಲಿ ಇವೆ ಇದರಿಂದ ದೈನಂದಿನ ಕೆಲಸ ಕಾರ್ಯಕ್ಕೆ ಅಡ್ಡಿಯಾಗುತ್ತಿದೆ ಎಂಬ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದು, ಮಂಜೂರಾಗಿರುವ ಪರಿಸರ ಇಂಜಿನಿಯರ್ ಹುದ್ದೆಗಳ ಭರ್ತಿಗೆ ಅನುಮೋದನೆ ನೀಡುವಂತೆ ಆರ್ಥಿಕ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದು ಹೇಳಿದರು.

ಪಾಲಿಕೆ ನೌಕರರಿಗೆ ಗುಂಪು ವಿಮೆ: ಸರ್ಕಾರಿ ನೌಕರರ ಮಾದರಿಯಲ್ಲಿ ಪಾಲಿಕೆ ನೌಕರರಿಗೂ ಗುಂಪು ವಿಮೆ ಯೋಜನೆ (ಜಿಐಎಸ್) ಜಾರಿಗೆ ತರುವ ಬಗ್ಗೆ ಸರ್ಕಾರ ಮುಕ್ತ ಮನಸು ಹೊಂದಿದೆ. ವಿಮಾ ಕಂತಿನ ಮೊತ್ತದಲ್ಲಿ ನೌಕರರು ತಮ್ಮ ಪಾಲಿನ ಮೊತ್ತವನ್ನು ಪಾವತಿಸಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ ಎಂದು ಹೇಳಿದ ಸಚಿವರು, ಈ ಹಿನ್ನೆಲೆಯಲ್ಲಿ ಪಾಲಿಕೆಗಳು ನೌಕರರ ಗುಂಪು ವಿಮೆ ಯೋಜನೆಗೆ ಉಳಿದ ಮೊತ್ತವನ್ನು ಭರಿಸುವುದಾದರೆ, ಆಗಬಹುದಾದ ಆರ್ಥಿಕ ಹೊರೆಯನ್ನು ಗಮನಿಸಿ ಅಂತಿಮ ನಿರ್ಧಾರ ಕೈಗೊಳ್ಳುವಂತೆ ಉನ್ನತಾಧಿಕಾರಿಗಳಿಗೆ ಆದೇಶಿಸಲಾಗುವುದು ಎಂದು ತಿಳಿಸಿದರು. ಪ್ರತಿವರ್ಷ ಪಾಲಿಕೆಗಳ ನೌಕರರಿಗೆ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಆರ್ಥಿಕ ಹೊರೆಯಾಗದ ರೀತಿಯಲ್ಲಿ ಪಾಲಿಕೆಗಳಿಂದಲೇ ವೆಚ್ಚ ಭರಿಸಲು ಸೂಚನೆ ನೀಡಲಾಗಿದ್ದು, ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ ನೌಕರರ ಇನ್ನಿತರ ಬೇಡಿಕೆಗಳನ್ನು ಹಂತ–ಹಂತವಾಗಿ ಈಡೇರಿಸುವುದಾಗಿ ಭರವಸೆ ನೀಡಲಾಗಿದೆ ಎಂದು ಹೇಳಿದರು.

ಜ್ಯೋತಿ ಸಂಜೀವಿನಿ: ಸರ್ಕಾರಿ ನೌಕರರಿಗೆ ಜಾರಿಗೆ ತಂದಿರುವ ಜ್ಯೋತಿ ಸಂಜೀವಿನಿ ಆರೋಗ್ಯ ವಿಮೆಯನ್ನು ಪಾಲಿಕೆ ನೌಕರರಿಗೂ ವಿಸ್ತರಣೆ ಮಾಡುವ ಬಗ್ಗೆ ಸಹಮತ ವ್ಯಕ್ತಪಡಿಸಲಾಗಿದೆ. ಈ ಯೋಜನೆಯಡಿ ನೌಕರರು ತಮ್ಮ ಪಾಲಿನ ವಿಮಾ ಮೊತ್ತ ಮತ್ತು ಅದಕ್ಕೆ ಸಮಾನವಾದ ಮೊತ್ತವನ್ನು ಪಾಲಿಕೆಗಳು ಭರಿಸುವ ಸಾಧಕ–ಬಾಧಕಗಳ ಬಗ್ಗೆ ಪರಿಶೀಲಿಸಲಾಗುತ್ತದೆ. ಇದಲ್ಲದೇ, ನೌಕರರ ಚಿಕಿತ್ಸಾ ವೆಚ್ಚವನ್ನು ಮಂಜೂರು ಮಾಡುವ ಅಧಿಕಾರವನ್ನು ಆಯಾ ಪಾಲಿಕೆಗಳ ಆಯುಕ್ತರಿಗೆ ನೀಡುವ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಮತ್ತು ಪೌರಾಡಳಿತ ನಿರ್ದೇಶಕ ಪ್ರಭುಲಿಂಗ ಕವಳಿಕಟ್ಟಿ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಟಿಕೆಟ್ ದರ 200 ರೂ. ಫಿಕ್ಸ್

ಆದ್ದರಿಂದ ಟಿಕೆಟ್ ಬೆಲೆ ಕಡಿಮೆ ಆಗಬೇಕು ಎಂಬುದು ಬಹುದಿನಗಳ ಬೇಡಿಕೆ ಆಗಿತ್ತು. ಏಕಪರದೆ ಚಿತ್ರಮಂದಿರಗಳಿಗೆ ಹೋಲಿಸಿದರೆ ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾಗಳ ಟಿಕೆಟ್ ಬೆಲೆ ದುಬಾರಿ ಆಗಿರುತ್ತದೆ. ಆ ಕಾರಣದಿಂದಲೇ ಜನರು ಚಿತ್ರಮಂದಿರಗಳಿಂದ ದೂರ ಉಳಿದುಕೊಂಡಿದ್ದಾರೆ ಎಂಬುದು ಅನೇಕರ ಅಭಿಪ್ರಾಯ ಆಗಿತ್ತು. ಹಾಗಾಗಿ ಸಿನಿಮಾಗಳ ಟಿಕೆಟ್ ಬೆಲೆ ತಗ್ಗಿಸಬೇಕು ಎಂದು ಹೇಳಲಾಗುತ್ತಿತ್ತು. ಅದಕ್ಕೆ ರಾಜ್ಯ ಸರ್ಕಾರ ಸ್ಪಂದಿಸಿದೆ. 2025–26ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಸರ್ಕಾರ ಈ ಬಗ್ಗೆ ಪ್ರಕಟಿಸಿತ್ತು. ಮಲ್ಟಿಪ್ಲೆಕ್ಸ್‌ಗಳಲ್ಲಿ ಎಗ್ಗಿಲ್ಲದೇ ಏರಿಕೆ ಆಗುತ್ತಿದ್ದ ಟಿಕೆಟ್ ಬೆಲೆಗೆ ಕಡಿವಾಣ ಹಾಕಲು ಸರ್ಕಾರ ಮುಂದಾಗಿತ್ತು. ಈಗ ಅಧಿಕೃತವಾಗಿ ಆದೇಶ ಹೊರಡಿಸಿದ್ದು, ಇನ್ನು ಮುಂದೆ ಪ್ರೇಕ್ಷಕರಿಗೆ ಟಿಕೆಟ್ ಬೆಲೆಯ ಹೊರೆ ಕಡಿಮೆ ಆಗಲಿದೆ. ಇದರಿಂದ ಚಿತ್ರಮಂದಿರ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರೇಕ್ಷಕರ ಸಂಖ್ಯೆ ಹೆಚ್ಚುವ ನಿರೀಕ್ಷೆ ಇದೆ. ಕೋವಿಡ್ ಬಳಿಕ ಒಟಿಟಿ ಪ್ರಭಾವ ಹೆಚ್ಚಾಯಿತು. ಮನೆಯಲ್ಲೇ ಹೊಸ ಸಿನಿಮಾಗಳನ್ನು ವೀಕ್ಷಿಸಲು ಜನರು ಆರಂಭಿಸಿದರು. ಒಟಿಟಿ ವ್ಯವಹಾರ ಕೂಡ ಹೆಚ್ಚಿತು. ಚಿತ್ರಮಂದಿರದಲ್ಲಿ ಬಿಡುಗಡೆ ಆದ ಕೆಲವೇ ವಾರಗಳಲ್ಲಿ ಹೊಸ ಸಿನಿಮಾಗಳು ಒಟಿಟಿಗೆ ಬರಲು ಆರಂಭಿಸಿದವು. ಇದು ಕೂಡ ಚಿತ್ರಮಂದಿರಗಳ ವ್ಯವಹಾರಕ್ಕೆ ಪೆಟ್ಟು ನೀಡಿತ್ತು.

ಕೋಟ್ಯಾಂತರ ಕನಸುಗಳಿಗೆ ಸ್ಫೂರ್ತಿ

ಭೂಮಿಗೆ ಮರಳಿದ ಭಾರತದ ಗಗನಯಾತ್ರಿ ಶುಭಾಂಶು ಶುಕ್ಲ ಅವರನ್ನು ಸ್ವಾಗತಿಸಲು ನಾನು ದೇಶದೊಂದಿಗೆ ಸೇರುತ್ತೇನೆ. ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪ್ರಯಾಣಿಸಿದ ಮೊದಲ ಭಾರತೀಯ ಗಗನಯಾತ್ರಿಯಾಗಿ, ಅವರು ತಮ್ಮ ಸಮರ್ಪಣೆ, ಧೈರ್ಯ ಮತ್ತು ಪ್ರವರ್ತಕ ಮನೋಭಾವದಿಂದ ಕೋಟ್ಯಾಂತರ ಕನಸುಗಳಿಗೆ ಸ್ಫೂರ್ತಿ ನೀಡಿದ್ದಾರೆ ಎಂದು ಪ್ರಧಾನಿ ಮೋದಿ ಅವರು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ. ಇದು ನಮ್ಮದೇ ಆದ ಮಾನವ ಬಾಹ್ಯಾಕಾಶ ಯಾನ ಮಿಷನ್ ಗಗನಯಾನದತ್ತ ಮತ್ತೊಂದು ಮೈಲಿಗಲ್ಲನ್ನು ಸೂಚಿಸುತ್ತದೆ ಎಂದು ಮೋದಿ ಹೇಳಿದ್ದಾರೆ. 18 ದಿನಗಳ ನಂತರ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಹೊತ್ತ ಡ್ರ್ಯಾಗನ್ ಬಾಹ್ಯಾಕಾಶ ನೌಕೆಯು ಇಂದು ಮಧ್ಯಾಹ್ನ 3 ಗಂಟೆ 2 ನಿಮಿಷಕ್ಕೆ ಕ್ಯಾಲಿಫೋರ್ನಿಯಾದ ಕರಾವಳಿ ಪ್ರದೇಶಕ್ಕೆ ಬಂದಿಳಿದಿದೆ.

ಸಂಘರ್ಷ ತಡೆಗೆ 'ಆನೆಪಥ'

ಭವಿಷ್ಯದ ಸಂಘರ್ಷ ಪ್ರದೇಶ ಗುರುತಿಸಲೂ ಈ ಅಧ್ಯಯನ ನೆರವಾಗಲಿದೆ ಎಂದಿದ್ದಾರೆ.

ಹಳೆ ಮೈಸೂರು ಭಾಗದಲ್ಲಿ ಹೆಚ್ಚಿನ ಅಧ್ಯಯನ: ಮೈಸೂರು ಆನೆ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಪ್ರಮುಖ ಅರಣ್ಯ ವಿಭಾಗಗಳು ಹಾಗೂ ಸಂರಕ್ಷಿತ ಪ್ರದೇಶಗಳು ಅಂದರೆ ಹುಲಿ ಸಂರಕ್ಷಿತ ಪ್ರದೇಶಗಳು, ರಾಷ್ಟ್ರೀಯ ಉದ್ಯಾನವನಗಳು, ವನ್ಯಜೀವಿ ಅಭಯಾರಣ್ಯಗಳು ಹಾಗೂ ಮಾನವ ವಾಸವಿರುವ ಕೃಷಿ ಪ್ರದೇಶಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಸಂಶೋಧನಾ ಚಟುವಟಿಕೆಗಳನ್ನು ಭಾರತೀಯ ವಿಜ್ಞಾನ ಮಂದಿರದ ಪರಿಸರ ಶಾಸ್ತ್ರ ಕೇಂದ್ರ ಹಾಗೂ ಏಷಿಯನ್ ನೇಚರ್ ಕನ್ಸರ್ವೇಷನ್ ಫೌಂಡೇಶನ್, ಫೌಂಡೇಶನ್ ಫಾರ್ ಇಕಲಾಜಿಕಲ್ ರಿಸರ್ಚ್, ಅಡ್ವಕಸಿ ಅಂಡ್ ಲರ್ನಿಂಗ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಸಹಯೋಗದಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ವಿವರಿಸಿದ್ದಾರೆ. ಸ್ಥಳಾಂತರಗೊಂಡ ಆನೆಗಳಿಗಾಗಿ ಮೃದು ಬಿಡುಗಡೆ ಶಿಷ್ಟಾಚಾರ, ರ್‍ಯಾಪ್ ಕಾಲರ್‌ಗಳು, ಬಜರ್‌ಗಳು ಮತ್ತು ಸಮುದಾಯ ಬೆಂಬಲಿತ ಬೇಲಿಗಳಂತಹ ನವೀನ ಉಪಕರಣಗಳ ಅಭಿವೃದ್ಧಿಗೂ ಈ ಯೋಜನೆ ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

ಪ್ರೊ.ರಮನ್ ಸುಕುಮಾರ್ ಮಾತನಾಡಿ, ಕರ್ನಾಟಕ ಸೇರಿದಂತೆ ದೇಶಾದ್ಯಂತ ಮಾನವ ಹಾಗೂ ವನ್ಯಜೀವಿಗಳ ನಡುವಿನ ಸಂಘರ್ಷ ಹೆಚ್ಚಾಗುತ್ತಿದ್ದು, ನಾವು ಕಾರಣಗಳನ್ನು ತಿಳಿಯುವುದು ಇಂದಿನ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಈ ಒಡಂಬಡಿಕೆ ಮಹತ್ವಪೂರ್ಣವಾದುದ್ದಾಗಿದೆ. ಈ ಅಧ್ಯಯನದಿಂದ ಅಥವಾ ಯೋಜನೆಯ ಅನುಷ್ಠಾನದಿಂದ ಸಂಪೂರ್ಣವಾಗಿ ಮಾನವ–ಆನೆ ಸಂಘರ್ಷ ನಿರ್ಮೂಲನೆ ಮಾಡಲು ಸಾಧ್ಯವಾಗುವುದಿಲ್ಲ. ಆದರೆ ಪರಿಣಾಮಕಾರಿಯಾಗಿ ಸಂಘರ್ಷ ತಗ್ಗಿಸಬಹುದಾಗಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈ ವೇಳೆ ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ ಸೇರಿ ಹಲವರು ಉಪಸ್ಥಿತರಿದ್ದರು.

ವಾಪಸ್ಸಾದ ಶುಭಾಂಶು ಶುಕ್ಲ ತಂಡ

ವಾಣಿಜ್ಯ ಬಾಹ್ಯಾಕಾಶ ಕಾರ್ಯಾಚರಣೆಯ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಕಳೆದ 21 ದಿನಗಳ ನಂತರ, ಮಿಷನ್ ಪೈಲಟ್ ಆಗಿದ್ದ ಗ್ರೂಪ್ ಕ್ಯಾಪ್ಟನ್ ಮತ್ತು ಮಿಷನ್ ಪೈಲಟ್ ಶುಭಾಂಶು ಶುಕ್ಲಾ ಅವರು ಮಂಜಿನ ಆಕಾಶದಲ್ಲಿ ಸುರಕ್ಷಿತ ಲ್ಯಾಂಡಿಂಗ್ ಮಾಡಿದರು.

ಶುಭಾಂಶು ಶುಕ್ಲಾ ಆ.17ರೊಳಗೆ ಭಾರತಕ್ಕೆ ಆಗಮಿಸುವ ಸಾಧ್ಯತೆ

ನವದೆಹಲಿ: ಆಕ್ಸಿಯೋಂ–4 ಮಿಷನ್ ಭಾಗವಾಗಿ ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 18 ದಿನಗಳ ವಾಸ್ತವ್ಯದ ನಂತರ ಮಂಗಳವಾರ ಭೂಮಿಗೆ ಮರಳಿರುವ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರು ಆಗಸ್ಟ್ 17 ರೊಳಗೆ ಭಾರತಕ್ಕೆ ಆಗಮಿಸುವ ನಿರೀಕ್ಷೆಯಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಹೇಳಿದ್ದಾರೆ.

ಸ್ಪ್ಲಾಶ್ ಡೌನ್ ಘೋಷಿಸಿದ ಕೂಡಲೇ, ನೆಟಿಜನ್‌ಗಳು ಮತ್ತು ವಿಜ್ಞಾನ ಉತ್ಸಾಹಿಗಳು ಸಾಮಾಜಿಕ ಮಾಧ್ಯಮದಲ್ಲಿ ನಾಲ್ಕು ಸದಸ್ಯರ ತಂಡವು ಭೂಮಿಗೆ ಸುರಕ್ಷಿತವಾಗಿ ಮರಳಿದ್ದಕ್ಕಾಗಿ ಅಭಿನಂದಿಸಿದರು. ಆಕ್ಸಿಯಮ್–4 ಬಾಹ್ಯಾಕಾಶ ಯಾನ ಜೂನ್ 25 ರಂದು ಪ್ರಾರಂಭವಾಯಿತು ಮತ್ತು ಜೂನ್ 26 ರಂದು ISSನಲ್ಲಿ ಕೈಯಿಂದ ಡಾಕ್ ಮಾಡಲ್ಪಟ್ಟಿತು. ಸಿಬ್ಬಂದಿ ಜುಲೈ 14 ರಂದು ಅನ್‌ಡಾಕ್ ಮಾಡಿದ್ದರು.

ಸ್ಪ್ಲಾಶ್ ಡೌನ್ ಆದ ಕೂಡಲೇ ಐದು ದೋಣಿಗಳು ಗಗನಯಾತ್ರಿಗಳು ಮತ್ತು ಬಾಹ್ಯಾಕಾಶ ನೌಕೆಯ ಸುರಕ್ಷಿತ ನಿರ್ಗಮನವನ್ನು ಖಚಿತಪಡಿಸಿಕೊಳ್ಳಲು ಬಾಹ್ಯಾಕಾಶ ನೌಕೆಗೆ ಧಾವಿಸಿದವು. ಕಮಾಂಡ್ ಸೆಂಟರ್ ಮತ್ತು ಪ್ರಧಾನ ಕಚೇರಿಯಲ್ಲಿರುವ ಎಲ್ಲಾ ವಿಜ್ಞಾನಿಗಳು ಮತ್ತು ತಜ್ಞರು ಸ್ಪ್ಲಾಶ್ ಡೌನ್ ಮಾಡುವ ಮೊದಲು 6–7 ನಿಮಿಷಗಳ ಕಾಲ ತಮ್ಮ ಬೆರಳುಗಳನ್ನು ಅಡ್ಡಲಾಗಿ ಇಟ್ಟುಕೊಂಡಿದ್ದರು, ಏಕೆಂದರೆ ಅದು ಬ್ಲ್ಯಾಕ್–ಔಟ್ ಅವಧಿಯಾಗಿತ್ತು, ಈ ಸಮಯದಲ್ಲಿ ಸ್ಪ್ಲಾಶ್ ಡೌನ್ ಪ್ರಾರಂಭವಾಗುವ ಮೊದಲು ಶಾಖದ ಗುರಾಣಿಗಳು ಹೆಚ್ಚಿನ ತಾಪಮಾನದಲ್ಲಿ ಉರಿಯುತ್ತಿದ್ದವು. ಬ್ಲ್ಯಾಕ್–ಔಟ್ ಅವಧಿ ಸ್ಪ್ಲಾಶ್ ಡೌನ್ ಪ್ರಾರಂಭವಾಗುವ ಮೊದಲು 2.18 ನಿಮಿಷಗಳಾಗಿತ್ತು. ಸ್ಪ್ಲಾಶ್ ಡೌನ್ ಮಾಡುವ ಮೊದಲು ಬಾಹ್ಯಾಕಾಶ ನೌಕೆಯು ಅಂತಿಮ ವೇಗವನ್ನು ಗಂಟೆಗೆ 350 ಮೈಲುಗಳಿಂದ ಗಂಟೆಗೆ 15 ಮೈಲುಗಳಿಗೆ ಇಳಿಸಲಾಯಿತು. ಸ್ಪ್ಲಾಶ್ ಡೌನ್ ಮಾಡುವ ಮೊದಲು ಎರಡು ಡ್ರೋಗ್ ಚ್ಯೂಟ್‌ಗಳು 2.55 ನಿಮಿಷಗಳ ಮೊದಲು ತೆರೆದವು, ನಂತರ ಸ್ಪ್ಲಾಶ್ ಡೌನ್ ಮಾಡುವ ಮೊದಲು 2.30 ನಿಮಿಷಗಳ ಮೊದಲು ನಾಲ್ಕು ಮುಖ್ಯ ಪ್ಯಾರಾಚೂಟ್‌ಗಳನ್ನು ತೆರೆಯಲಾಯಿತು.

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ಹತ್ತಿದ ಮೊದಲ ಭಾರತೀಯ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ, ಬಾಹ್ಯಾಕಾಶ ನೌಕೆಯಿಂದ ನಿರ್ಗಮಿಸುವಾಗ ಕೈ ಬೀಸಿದ್ದಾರೆ. 18 ದಿನಗಳ ಕಾರ್ಯಾಚರಣೆಯ ಸಮಯದಲ್ಲಿ ಅವರು ಸೂಕ್ಷ್ಮ ಗುರುತ್ವಾಕರ್ಷಣೆಯ ಪ್ರಯೋಗಗಳ ಶ್ರೇಣಿಯನ್ನು ನಡೆಸಿದರು.

ಭಟ್ಕಳ ಬಾಂಬ್ ಬೆದರಿಕೆ ಪ್ರಕರಣ: ಇ–ಮೇಲ್ ಕಳಿಸಿದ್ದ ಆರೋಪಿ ಮೈಸೂರು ಜೈಲಿನಲ್ಲಿ ಪತ್ತೆ



ಭಟ್ಕಳದಲ್ಲಿ ತಪಾಸಣೆ ನಡೆಸಿದ ಬಾಂಬ್ ಪತ್ತೆ ದಳ ಸಿಬ್ಬಂದಿ

ಭಟ್ಕಳ, ಜು.15– ಭಟ್ಕಳ ಪಟ್ಟಣವನ್ನು 24 ಗಂಟೆಗಳ ಒಳಗೆ ಸ್ಫೋಟಿಸುವುದಾಗಿ ಬೆದರಿಕೆ ಇ–ಮೇಲ್ ಕಳುಹಿಸಿದ ಪ್ರಕರಣ ವನ್ನು ಉತ್ತರ ಕನ್ನಡ ಪೊಲೀಸರು ಭೇದಿಸಿದ್ದಾರೆ. ಮೇಲ್ ಕಳುಹಿಸಿದ ವ್ಯಕ್ತಿ ಒಬ್ಬ ಸಾಮಾನ್ಯ ಅಪರಾಧಿಯಾಗಿದ್ದು, ದೇಶಾದ್ಯಂತ ಪೊಲೀಸ್ ಠಾಣೆಗಳನ್ನು ಸ್ಫೋಟಿಸುವುದಾಗಿಯೂ ಬೆದರಿಕೆ ಹಾಕಿದ್ದ ಎಂದು ತಿಳಿದು ಬಂದಿದೆ.

ಮೇಲ್ ಕಳುಹಿಸಿದ ಆರೋಪಿಯನ್ನು ಉತ್ತರ ಪ್ರದೇಶದ ನೋಯ್ಡಾ ಮೂಲದ ಜತಿನ್ ಶರ್ಮಾ ಎಂದು ಗುರುತಿಸಲಾಗಿದೆ. ಈತ ಹಾಲಿ ಮೈಸೂರು ಜೈಲಿನಲ್ಲಿರುವುದು ಪತ್ತೆಯಾಗಿದೆ.

ಭಟ್ಕಳದ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಜತಿನ್ ಶರ್ಮಾಗೆ ತನ್ನ ಲಿವ್–ಇನ್ ಪಾರ್ಟ್ನರ್ ಜೊತೆ ಸಮಸ್ಯೆಗಳಿದ್ದವು. ನೋಯ್ಡಾ ಪೊಲೀಸರು ಆತನನ್ನು ಬಂಧಿಸಿದ್ದರು. ನ್ಯಾಯಾಲಯವು ಶಿಕ್ಷೆ ವಿಧಿಸಿತು. ಈ ಘಟನೆಯ ನಂತರ ಅವನು ಪೊಲೀಸರ ಮೇಲಿನ ದ್ವೇಷದಿಂದ ಇ–ಮೇಲ್ ಮೂಲಕ ಬೆದರಿಕೆ ಹಾಕುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬಂದಿದ್ದು, ದೇಶಾದ್ಯಂತ ಬಾಂಬ್ ಬೆದರಿಕೆ ಹಾಕಿದ ಕನಿಷ್ಠ 20 ಪ್ರಕರಣಗಳನ್ನು ಎದುರಿಸುತ್ತಿದ್ದಾನೆ. ಅದೇ ರೀತಿ ಈತ ಮೈಸೂರಿನ ನಜರ್‌ಬಾದ್ ಠಾಣೆಯನ್ನು ಸ್ಫೋಟಿಸುವುದಾಗಿ ಇ–ಮೇಲ್ ರವಾನಿಸಿ ಬೆದರಿಕೆ ಹಾಕಿದ ಪ್ರಕರಣದಲ್ಲಿ ಬಂಧಿತನಾಗಿ ಮೈಸೂರು ಜೈಲಿನಲ್ಲಿದ್ದಾನೆ ಎಂದು ಎಸ್‌ಪಿ ನಾರಾಯಣ್ ತಿಳಿಸಿದರು.

ನಮಗೆ ಅಂದು ಬೆಳಿಗ್ಗೆ 7.22ಕ್ಕೆ ಮೇಲ್ ಕಳುಹಿಸಿದ್ದ ಆರೋಪಿ 'ನಾವು ಪಟ್ಟಣದಲ್ಲಿ ಬಾಂಬ್ ಇಟ್ಟಿದ್ದೇವೆ' ಎಂದು ಒಂದು ಲೈನರ್‌ನಲ್ಲಿ ಬರೆದಿದ್ದ, ಎರಡನೇ ಇ–ಮೇಲ್ ಬೆಳಿಗ್ಗೆ 7.23ಕ್ಕೆ ಬಂದಿತ್ತು. 'ಬಾಂಬ್ 24 ಗಂಟೆಗಳಲ್ಲಿ ಸ್ಫೋಟಗೊಳ್ಳುತ್ತದೆ' ಎಂದು ಬರೆದಿತ್ತು. ಈ ಪ್ರಕರಣದ ತನಿಖೆ ನಡೆಸುತ್ತಿದ್ದ ಪೊಲೀಸರು ಮುನ್ನಾರ್ ಜೈಲಿನಲ್ಲಿ ಕಣ್ಣನ್ ಗುರುಸ್ವಾಮಿ ಎಂಬಾತನಿಂದ ಮೇಲ್ ಕಳುಹಿಸಿದ್ದ ಮೊಬೈಲ್ ಪತ್ತೆ ಮಾಡಿದ್ದರು. ಆತನನ್ನು ವಿಚಾರಣೆಗೆ ಒಳಪಡಿಸಿದಾಗ, ಕೆಲ ದಿನಗಳ ಹಿಂದೆ ಮುನ್ನಾರ್ ಜೈಲಿನಲ್ಲಿದ್ದ ಜತಿನ್ ಶರ್ಮಾ, ತನ್ನ ಪತ್ನಿಯೊಂದಿಗೆ ಮಾತನಾಡಬೇಕೆಂದು ಕಣ್ಣನ್ ಗುರುಸ್ವಾಮಿಯ ಮೊಬೈಲ್ ಪಡೆದಿದ್ದ. ಆದರೆ ಆತ ಭಟ್ಕಳ ಠಾಣೆಗೆ ಬೆದರಿಕೆ ಇ–ಮೇಲ್ ಮಾಡಿದ್ದಾನೆ ಎಂದು ಉತ್ತರ ಕನ್ನಡ ಎಸ್ಪಿ ಎಂ ನಾರಾಯಣ್ ತಿಳಿಸಿದ್ದಾರೆ.

ಯಾರದ್ದೋ ಮೊಬೈಲ್ ಫೋನ್ ತೆಗೆದುಕೊಳ್ಳುವುದು, ಅಥವಾ ಕಸಿದುಕೊಳ್ಳುವುದು ಇಲ್ಲವೇ ಕದಿಯುವುದು ನಂತರ ಅದರ ಮೂಲಕ ಸಂದೇಶ ಕಳುಹಿಸುವುದು ಅವನ ಕಾರ್ಯವಿಧಾನವಾಗಿತ್ತು. ಅವನು ಯಾರ ಫೋನ್ ಬಳಸುತ್ತಾನೋ ಆ ವ್ಯಕ್ತಿಗೆ ಅದು ತಿಳಿದಿರುತ್ತಿರಲಿಲ್ಲ ಎಂದು ಎಸ್‌ಪಿ ವಿವರಿಸಿದರು.

ಮುನ್ನಾರ್ ಪೊಲೀಸರು ಜತಿನ್ ಶರ್ಮಾನ ವಿಚಾರಣೆಗಾಗಿ ಬಾಡಿ ವಾರಂಟ್ ಪಡೆದಿದ್ದರು. ನಾವು ಅವನನ್ನು ವಿಚಾರಣೆಗಾಗಿ ಕಾರವಾರಕ್ಕೆ ಕರೆತರುತ್ತೇವೆ ಎಂದು ಅವರು ಹೇಳಿದರು.

ಜು.19ರಿಂದ 21ರವರೆಗೆ ಪ್ರವಚನ

ಮೈಸೂರು, ಜು.15(ಜಿಎ)–ಗೋಕುಲಂನಲ್ಲಿರುವ ಗುರುದೇವ ದತ್ತ ಸನ್ನಿಧಿಯ ಚಿನ್ಮಯ ಮಿಷನ್ ವತಿಯಿಂದ ಫೋರ್ಟ್ ಮೊಹಲ್ಲಾ ಶೃಂಗೇರಿ ಶಂಕರ ಮಠದಲ್ಲಿ ಜು. 19ರಿಂದ 21ರವರೆಗೆ ನಿತ್ಯ ಜೀವನಕ್ಕೆ ಗೀತೆಯ ಸಂದೇಶ ವಿಷಯ ಕುರಿತು ಸ್ವಾಮಿ ಬ್ರಹ್ಮಾನಂದರಿಂದ ಪ್ರವಚನ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸ್ವಾಮಿನಿ ಕಾಶಿಕಾನಂದಜೀ ಈ ವಿಷಯ ತಿಳಿಸಿ, ಇದು ಸಂಪೂರ್ಣ ಕನ್ನಡದಲ್ಲಿಯೇ ನಡೆಯುವ ಪ್ರವಚನ ಕಾರ್ಯಕ್ರಮವಾಗಿದ್ದು, ಎಲ್ಲರಿಗೂ ಈ ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕೆ.ಎಸ್.ಎನ್. ಪ್ರಸಾದ್, ಹೆಚ್.ಕೆ.ಅಶೋಕ್‌ಕುಮಾರ್ ಇದ್ದರು.

ದಸರಾದಿಂದ 'ಹಿರಣ್ಯ' ಔಟ್; 'ಲಕ್ಷ್ಮೀ' ಡೌಟ್

ಗಜಪಡೆಯಲ್ಲಿ ಸ್ಥಾನ ಪಡೆಯುವುದು ಅನುಮಾನ. ಆರೋಗ್ಯ ತಪಾಸಣೆ ವೇಳೆ ಲಕ್ಷ್ಮಿಯೂ ಗರ್ಭಿಣಿ ಎಂಬುದು ಗೊತ್ತಾಗಿದೆ. ಆದರೂ, ಖಚಿತಪಡಿಸಿಕೊಳ್ಳಲು ಫಿಕಲ್ ಪ್ರೆಗ್ನೆನ್ಸಿ ಪರೀಕ್ಷೆಯ ವರದಿಗಾಗಿ ಕಾಯಲಾಗುತ್ತಿದೆ. ಗಜಗರ್ಭವು 18ರಿಂದ 22 ತಿಂಗಳಾಗಿದ್ದು, ಒಂದು ವೇಳೆ 10 ತಿಂಗಳಾಗಿದ್ದರೆ ದಸರಾ ಗಜಪಡೆಯಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವ ಸಾಧ್ಯತೆ ಇದೆ. 12 ತಿಂಗಳು ಮೇಲ್ಪಟ್ಟಿದ್ದು, ಆಯ್ಕೆ ಮಾಡಿ ಗಜಪಡೆಯೊಂದಿಗೆ ಕರೆತಂದು ಪೌಷ್ಟಿಕ ಆಹಾರ ಹಾಗೂ ತಾಲೀಮಿನಿಂದ ಅವಧಿ ಪೂರ್ವ ಹೆರಿಗೆ ಆಗುವ ಸಾಧ್ಯತೆ ಇರುತ್ತದೆ. ಆ ಕಾರಣದಿಂದ ಅರಣ್ಯಾಧಿಕಾರಿಗಳು ಎಚ್ಚರಿಕೆಯಿಂದ ಹೆಜ್ಜೆ ಇಡಲು ನಿರ್ಧರಿಸಿದ್ದಾರೆ.

2019ರಲ್ಲಿ ಮೊದಲ ಬಾರಿ ಆಯ್ಕೆಯಾದರೂ ಸಿಡಿಮದ್ದು ಶಬ್ದಕ್ಕೆ ಹೆದರಿತ್ತು. ಈ ಹಿನ್ನೆಲೆಯಲ್ಲಿ ಜಂಬೂಸವಾರಿ ಮೆರವಣಿಗೆಯಿಂದ ಅದಕ್ಕೆ ವಿನಾಯಿತಿ ನೀಡಿ, ಅರಮನೆ ಆವರಣದಲ್ಲೇ ಕಟ್ಟಿಹಾಕಲಾಗಿತ್ತು. 2022ರಲ್ಲಿ ಎರಡನೇ ಬಾರಿ ದಸರಾದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಲಕ್ಷ್ಮಿ ಅರಮನೆ ಆವರಣದಲ್ಲೇ ಗಂಡು ಮರಿಗೆ ಜನ್ಮ ನೀಡಿತ್ತು. ಆ ಮರಿಗೆ ರಾಜವಂಸ್ಥರು 'ದತ್ತಾತ್ರೇಯ' ಎಂದು ನಾಮಕರಣ ಮಾಡಿದ್ದರು. ಕಳೆದ ವರ್ಷ ಕುಮ್ಕಿ ಆನೆಯಾಗಿ ಸಾಗುವ ಮೂಲಕ ಸೈ ಎನಿಸಿಕೊಂಡಿತ್ತು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಮಂಗಲ ರಸ್ತೆಯಲ್ಲಿ ತಾಯಿಯಿಂದ ಬೇರ್ಪಟ್ಟಿದ್ದ 4 ತಿಂಗಳ ಮರಿಯನ್ನು 2002ರಲ್ಲಿ ರಕ್ಷಣೆ ಮಾಡಿದ್ದ ಅರಣ್ಯ ಸಿಬ್ಬಂದಿ, ಅದನ್ನು ಪಾಲನೆ ಮಾಡಲು ರಾಜವಂಶಸ್ಥರಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಸಹೋದರಿ ಶ್ರೀಮತಿ ವಿಶಾಲಾಕ್ಷೀ ದೇವಿ ಅವರ ಸುಪರ್ದಿಗೆ ಒಪ್ಪಿಸಿದ್ದರು. ಅವರು ಆ ಮರಿಗೆ ಪದ್ಮ ಎಂದು ನಾಮಕರಣ ಮಾಡಿದ್ದರು. ಅರಣ್ಯ ಇಲಾಖೆ ತನ್ನ ಸುಪರ್ದಿಗೆ ತೆಗೆದುಕೊಂಡ ನಂತರ ಲಕ್ಷ್ಮೀ ಎಂದು ಮರು ನಾಮಕರಣ ಮಾಡಲಾಗಿತ್ತು.

ವರದಿ ಸಲ್ಲಿಸಲು ಕೋರ್ಟ್ ಮಹತ್ವದ ಸೂಚನೆ

ಸಿದ್ದರಾಮಯ್ಯ ಅವರ ವಿರುದ್ಧ ಲೋಕಾಯುಕ್ತ ತನಿಖೆಗೆ ಹೈಕೋರ್ಟ್ ಏಕ ಸದಸ್ಯ ಪೀಠ ಆದೇಶ ನೀಡಿತ್ತು. ಹಗರಣದ ತನಿಖೆ ನಡೆಸುತ್ತಿರುವ ಮೈಸೂರು ಲೋಕಾಯುಕ್ತ, ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ, ಸಂಬಂಧಿ ಹಾಗೂ ಜಮೀನು ಮಾಲೀಕರು ಅಕ್ರಮ ಎಸಗಿರುವ ಬಗ್ಗೆ ಯಾವುದೇ ಸಾಕ್ಷ್ಯ ಸಿಕ್ಕಿಲ್ಲ ಎಂದು ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಿದ್ದರು. ಈ ರಿಪೋರ್ಟ್ ಅನ್ನು ಪ್ರಶ್ನಿಸಿ ದೂರುದಾರ ಸ್ನೇಹಮಯಿ ಕೃಷ್ಣ ಅವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಸಿಬಿಐಗೆ ನೀಡುವಂತೆ ದೂರುದಾರ ಮನವಿ: ಅಲ್ಲದೆ, ದೂರುದಾರ ಸ್ನೇಹಮಯಿ ಕೃಷ್ಣ ಅವರು ಪ್ರಕರಣದ ತನಿಖೆಯನ್ನು ಸಿಬಿಐಗೆ ನೀಡುವಂತೆ ಹೈಕೋರ್ಟ್‌ನ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಹಗರಣ ತನಿಖೆಯನ್ನು ಲೋಕಾಯುಕ್ತ ಪೊಲೀಸರು ಸರಿಯಾಗಿ ನಡೆಸಿಲ್ಲ ಎಂದು ಆರೋಪಿಸಿದ್ದರು. ಈ ಹಿನ್ನೆಲೆಯಲ್ಲಿ ಪ್ರಕರಣದ ತನಿಖೆಯನ್ನು ಸಿಬಿಐಗೆ ನೀಡುವಂತೆ ಮನವಿ ಮಾಡಿದ್ದಾರೆ.

ಮೈಸೂರು ಮಿತ್ರ

ಮೈಸೂರಲ್ಲಿ ಒಳಚರಂಡಿ ಸಮಸ್ಯೆ ನಿವಾರಣೆಗೆ ಜನರ ಸಹಕಾರ ಅಗತ್ಯ

ಮೈಸೂರು ಗ್ರಾಹಕ ಪರಿಷತ್ ಸಂವಾದದಲ್ಲಿ ಅಭಿಪ್ರಾಯ

ಮೈಸೂರು, ಜು.15(ಎಸ್‌ಪಿಎನ್)– ಮೈಸೂರಿನಲ್ಲಿ ಒಳ ಚರಂಡಿ ಸಮಸ್ಯೆ ಸಮಗ್ರವಾಗಿ ಬದಲಾಗಬೇಕಾದರೆ, ನಗರ ಪಾಲಿಕೆಯೊಂದಿಗೆ ಸಾರ್ವಜನಿಕರ ಸಹಕಾರವೂ ಅತ್ಯಗತ್ಯ ಎಂಬ ಅಭಿಪ್ರಾಯ ಮೈಸೂರು ಗ್ರಾಹಕ ಪರಿಷತ್‌ನಲ್ಲಿ ಸಂವಾದದಲ್ಲಿ ವ್ಯಕ್ತವಾಯಿತು.

ಮೈಸೂರಿನ ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿ ಮೈಗ್ರಾಪ ಕಚೇರಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ 'ಯುಜಿಡಿ ಮತ್ತು ಇತರೆ ಸಮಸ್ಯೆಗಳ' ಕುರಿತು ಪಾಲಿಕೆ ಎಇಇ ನಾಗರಾಜೇಗೌಡ ಮತ್ತು ಗಿರೀಶ್ ಮೈಗ್ರಾಪ ಸದಸ್ಯರೊಂದಿಗಿನ ಸಂವಾದದಲ್ಲಿ ಪಾಲ್ಗೊಂಡು ಮಾಹಿತಿ ನೀಡಿದರು.

ಸಾರ್ವಜನಿಕರು ತಮ್ಮ ಮನೆ ಚಾವಣಿ ಮೇಲಿನ ಮಳೆ ನೀರು, ಬಚ್ಚಲು ನೀರನ್ನು ಮನೆ ಮುಂದಿನ ಯುಜಿಡಿಗೆ ಸಂಪರ್ಕ ಕಲ್ಪಿಸಬಾರದು ಎಂದು ಪಾಲಿಕೆ ಆದೇಶ ಹೊರಡಿಸಿದೆ. ಆದರೆ, ಈ ಆದೇಶವನ್ನು ಹೆಚ್ಚಿನ ಜನರು ಪಾಲಿಸುತ್ತಿಲ್ಲ ಎಂದು ಎಂಜಿಪಿ ಸದಸ್ಯ ವಿಶ್ವನಾಥ್ ಅವರ ಪ್ರಶ್ನೆಗೆ, ಅಧಿಕಾರಿಗಳು ಉತ್ತರಿಸಿದರು.

ಆಗ ಸಭೆಯಲ್ಲಿ ಮೈಸೂರಿನ ಯಾವುದೇ ಬಡಾವಣೆಯ ಮನೆಗಳ ಮುಂದಿನ ಚರಂಡಿಗಳಲ್ಲಿ ಹೂಳು ತುಂಬಿಕೊಂಡು ನೀರು ಸರಾಗವಾಗಿ ಹರಿಯುವುದಿಲ್ಲ. ಇದರ ಬಗ್ಗೆ ಅಧಿಕಾರಿಗಳಲ್ಲಿ ಗೊಂದಲವಿದೆ ಎಂದು ಸದಸ್ಯರು ತಮ್ಮ ವಾದ ಮಂಡಿಸಿದರು.

ಸದಸ್ಯ ವಿಶ್ವನಾಥ್ ತಮ್ಮ ಅಭಿಪ್ರಾಯ ಮುಂದುವರೆಸಿ, ಸರ್ಕಾರದ ದಾಖಲಾತಿ ಪ್ರಕಾರ ಮೈಸೂರಿನಲ್ಲಿ 15 ಲಕ್ಷ ಜನ ಸಂಖ್ಯೆಯಿದ್ದು, ನದಿ ಮೂಲ ದಿಂದ 320 ಎಂಎಲ್‌ಡಿ ನೀರನ್ನು ಕಾವೇರಿ, ಕಬಿನಿ ನದಿಗಳಿಂದ ಗುರುತ್ವಾ ಕರ್ಷಣೆ ಮೂಲಕ ಪಂಪ್ ಮಾಡ ಲಾಗುತ್ತಿದೆ. ಇದರಲ್ಲಿ ಶೇ.20ರಷ್ಟು ನೀರು ವ್ಯರ್ಥವಾಗುತ್ತಿದೆ. ಇಲ್ಲವೇ ಅನಧಿಕೃತ ವ್ಯಕ್ತಿಗಳು ಅಕ್ರಮ ಸಂಪರ್ಕ ಪಡೆದು ಬಳಸುತ್ತಿದ್ದಾರೆ ಎಂದು ಭಾಗವಹಿಸಬಹುದು. ಇದಕ್ಕೆ ಹಣ ಪಾವತಿಯಾಗದೇ ತೆರಿಗೆದಾರರ ಹಣ ಪೋಲಾಗುತ್ತಿದೆ ಎಂದರ್ಥ. ಅಕ್ರಮ ಸಂಪರ್ಕ ಹೊಂದಿರುವ ವ್ಯಕ್ತಿಗಳ ವಿರುದ್ಧ ಸರ್ಕಾರ ಕ್ರಮವಹಿಸಿದರೆ, ಕೋಟ್ಯಾಂತರ ರೂ.ಗಳು ಪಾಲಿಕೆ ಬೊಕ್ಕಸಕ್ಕೆ ಉಳಿತಾಯವಾಗುತ್ತದೆ ಎಂದು ಸಲಹೆ ನೀಡಿದರಲ್ಲದೆ, ಸಾರ್ವಜನಿಕರಿಂದ ಪ್ರತಿ ವಾಟರ್ ಬಿಲ್‌ನಿಂದ ಸಂಗ್ರಹಿಸುವ 36 ರೂ.ಗಳ ಸೆಸ್ ಅನ್ನು ಯುಜಿಡಿ ಸಮಸ್ಯೆ ಪರಿಹಾರಕ್ಕೆ ಬಳಸಿಕೊಳ್ಳಬೇಕು ಎಂದು ಮನವಿ ಮಾಡಿದರು.

110 ಎಂಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣೆ: ಕೆಸರೆ ಭಾಗದಲ್ಲಿ ಉತ್ಪತ್ತಿಯಾಗುವ 110 ಎಂಎಲ್‌ಡಿ ಮಲಿನ ತ್ಯಾಜ್ಯ ನೀರು ಸಂಸ್ಕರಿಸಿ ಕೆ.ಆರ್.ಮಿಲ್ ಬಳಿಯಿರುವ ಮಿರ್ಜಾ ಕಾಲುವೆಗೆ ಹರಿಸುವ ಕಾರ್ಯ(ಅಂದಾಜು 500 ಕೋಟಿ ರೂ.) ಆರಂಭವಾಗಿದೆ. ಉಳಿದ ವಿಭಾಗದಲ್ಲಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಸಂಸ್ಕರಣೆ ಕಾರ್ಯ ಆರಂಭವಾಗಲಿದೆ ಎಂದು ಎಇಇ ನಾಗರಾಜೇಗೌಡ ಮಾಹಿತಿ ನೀಡಿದರು.

ಮ್ಯಾನ್‌ಹೋಲ್ ನಿರ್ಮಾಣ ಅವೈಜ್ಞಾನಿಕ: ಮ್ಯಾನ್‌ಹೋಲ್ ಕುಸಿದಾಗ ಇಲ್ಲವೇ ರಿಪೇರಿಗೆ ಬಂದಾಗ ರಿಪೇರಿ ಕಾರ್ಯ ಕೈಗೊಳ್ಳಲು ಪೌರಕಾರ್ಮಿಕರು ವೈಜ್ಞಾನಿಕ ಕ್ರಮ ವಹಿಸುತ್ತಿಲ್ಲ. ಮ್ಯಾನ್‌ಹೋಲ್ ಸುತ್ತಮುತ್ತ ತೇವಾಂಶದಿಂದ ಕೂಡಿದ ಮಣ್ಣನ್ನು ತೆಗೆದು ಹೊಸ ಮಣ್ಣಿನಿಂದ ನಿರ್ಮಿಸಬೇಕು. ಆದರೆ, ಸಿಬ್ಬಂದಿ ಆ ರೀತಿ ಮಾಡುತ್ತಿಲ್ಲ. ಹಾಗಾಗಿ ಪದೇಪದೇ ಮ್ಯಾನ್‌ಹೋಲ್ ಕುಸಿಯುತ್ತಿವೆ. ಅಲ್ಲದೆ, ಒಳಭಾಗದಲ್ಲಿ ಕಾಂಕ್ರೀಟ್ ಸರಿಯಾಗಿ ಮೆತ್ತುವುದಿಲ್ಲ. ಇದರಿಂದ ಮ್ಯಾನ್‌ಹೋಲ್ ಸರಿಯಾಗಿ ನಿರ್ಮಾಣವಾಗದೇ ಪದೇ ಪದೆ ರಿಪೇರಿಗೆ ಬರುತ್ತಿವೆ ಎಂದು ಆಕ್ಷೇಪ ವ್ಯಕ್ತಪಡಿಸಿದಕ್ಕೆ, ಮುಂದೆ ವೈಜ್ಞಾನಿಕ ಮ್ಯಾನ್‌ಹೋಲ್ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಮೈಸೂರು ಬೋಗಾದಿಯ ಹೆಚ್.ಪಿ. ಶಂಕರ ಮಾತನಾಡಿ, ಕಳೆದ 5 ವರ್ಷಗಳಿಂದ ಐಶ್ವರ್ಯ ರಾಯಲ್ ಲೇ ಔಟ್‌ನ ನಿವಾಸಿಯಾಗಿದ್ದು, 3 ತಿಂಗಳ ಹಿಂದೆ ಯುಜಿಡಿ ಲೈನ್‌ಅನ್ನು ಸರಿಪಡಿಸಲು ಬೋಗಾದಿ ಪಟ್ಟಣ ಪಂಚಾಯ್ತಿಯಿಂದ ಬಂದಿರುವುದಾಗಿ ಹೇಳಿ ಗುತ್ತಿಗೆದಾರರೊಬ್ಬರು ಯುಜಿಡಿ ಪೈಪ್‌ಲೈನ್ ಅವೈಜ್ಞಾನಿಕ ಕಾಮಗಾರಿ ಹಮ್ಮಿಕೊಂಡು ನಮ್ಮ ಮನೆಯ ಹಿಂದಿರುವ ಎಲ್ಲಾ ಲೇಔಟ್‌ಗಳ ಯುಜಿಡಿ ಪೈಪ್‌ಗಳನ್ನು ಅಳವಡಿಸಿದ್ದಾರೆ. ಈ ಜೋಡಣೆ ಕಾರ್ಯ ಅವೈಜ್ಞಾನಿಕವಾಗಿದೆ. ಅಂದಿನಿಂದ ಯುಜಿಡಿಯಿಂದ ಮಲಿನ ನೀರು ಉಕ್ಕುತ್ತಿದೆ. ಈ ನೀರು ಖಾಲಿ ನಿವೇಶನಕ್ಕೆ ಹರಿದು ಕೆರೆಯಂತಾಗಿದೆ. ಈ ರೀತಿ ನಿಂತ ನೀರಿನಿಂದ ಕೆಟ್ಟವಾಸನೆ ಬರುತ್ತಿದೆ. ಸಾಂಕ್ರಮಿಕ ರೋಗಗಳು ಹರಡುತ್ತಿವೆ. ಈ ಸಮಸ್ಯೆಗೆ ಬಗೆಹರಿಸುವಂತೆ ಅಧಿಕಾರಿಗಳಲ್ಲಿ ಮನವಿ ಮಾಡಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರ ಮುಂದಿನ 30 ವರ್ಷಗಳ ಮೈಸೂರಿನ ಜನತೆಯ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ನಗರಕ್ಕೆ ಹೊಸ ಯುಜಿಡಿ ಪೈಪ್‌ಲೈನ್ ಅಳವಡಿಸಲಾಗುತ್ತಿದೆ. ನಗರದಲ್ಲಿ ಯುಜಿಡಿ ಸಮಗ್ರ ವ್ಯವಸ್ಥೆಗಾಗಿ 2017ರಲ್ಲಿ ಯೋಜನೆ ಸಿದ್ಧಪಡಿಸಲಾಗಿತ್ತು. ಈ ಯೋಜನೆ 2020ರಲ್ಲಿ ಪ್ರಾರಂಭವಾಗಬೇಕಿತ್ತು ಆದರೆ, ಆ ಕಾಮಗಾರಿ ಆರಂಭವಾಗಿಲ್ಲ. ಅದು ಏಕೆ ಕಾರ್ಯರೂಪಕ್ಕೆ ಬರಲಿಲ್ಲ ಎಂದು ಅಧಿಕಾರಿಗಳನ್ನು ಪ್ರಶ್ನಿಸಲು ಯತ್ನಿಸಿದರು. ಇದಕ್ಕೆ ದಾಖಲೆಯೊಂದಿಗೆ ಉತ್ತರಿಸಬೇಕು ಎಂದು ಸದಸ್ಯ ನಟರಾಜ್, ಅಧಿಕಾರಿಗಳಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಎಂಜಿಪಿ ಸದಸ್ಯರಾದ ಅರುಣ್‌ಕುಮಾರ್ ಶೆಟ್ಟರ್, ಭಾನು ಪ್ರಶಾಂತ್, ವಿಶ್ವನಾಥ್, ಲೀಲಾ ವೆಂಕಟೇಶ್, ವಸಂತಕುಮಾರ್ ಮಠ್, ಆರ್.ಎ.ರಾಮನಾಥ್, ಡಿ.ವಿ.ದಯಾನಂದ್ ಸಾಗರ್, ಸಿ.ಎನ್.ಸುದೀಂದ್ರ, ಕೆ.ಜಿ. ಶಶಿಧರ್, ವೆಂಕಟೇಶ್ ಖಾದ್ರಿ, ವಿ.ಎಸ್. ಸೀತಾರಾವ್, ಹೆಚ್.ಪ್ರಭಶಂಕರ್, ಎಲ್.ರವೀಂದ್ರ, ಪ್ರಭುಸ್ವಾಮಿ, ಗೋವರ್ಧನ್‌ರಾವ್, ಕೆ.ವಿ.ರಾಮನಾಥ್, ಹೆಚ್.ಟಿ.ರವಿಪ್ರಕಾಶ್, ಎಸ್.ವಿ.ಶಂಕರ್, ಎಂ.ಆರ್.ವಿಜಯೇಂದ್ರ, ಎಂ.ಎಸ್. ರಾಕೇಶ್ ಸೇರಿದಂತೆ ಇತರರಿದ್ದರು.

ಕುಡಿಯುವ ನೀರಿನ ಸಂಸ್ಕರಣೆ ಆಗುತ್ತಿಲ್ಲ

ಮೈಸೂರು ನಗರಕ್ಕೆ ಪೂರೈಕೆಯಾಗುವ ನೀರಿಗೆ ಮೊದಲು ಕ್ಲೋರಿನ್ ಪೌಡರ್ ಹಾಕಿ ನಂತರ ಮನೆಗಳಿಗೆ ನೀರು ಸರಬರಾಜು ಮಾಡುತ್ತಿದ್ದರು. ಆ ವಾಸನೆ ಮನೆಗಳಿಗೆ ಪೂರೈಕೆಯಾದ ನೀರಲ್ಲಿ ಬರುತ್ತಿತ್ತು. ಈಗ ಅ ತರಹದ ವಾಸನೆ ಬರುತ್ತಿಲ್ಲ. ಅಂದರೆ, ಮನೆಗಳಿಗೆ ಪೂರೈಕೆಯಾಗುವ ನೀರು ಸುರಕ್ಷಿತವಲ್ಲ ಎಂಬ ನಿಲುವು ಸದಸ್ಯರಿಂದ ವ್ಯಕ್ತವಾಯಿತು. ಪಡುವಾರಹಳ್ಳಿ ಕಡೆಯಿಂದ ಕುಕ್ಕರಹಳ್ಳಿ ಕೆರೆಗೆ ಮಲಿನ ನೀರು ಸೇರುತ್ತಿದ್ದು, ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಮೈಸೂರು ನಗರಪಾಲಿಕೆಯಿಂದ ಯಾವುದೇ ಕ್ರಮವಾಗುತ್ತಿಲ್ಲ ಎಂದು ಅಧಿಕಾರಿಗಳ ಗಮನ ಸೆಳೆದರು.



ಮೈಗ್ರಾಪ ಸಭೆಯಲ್ಲಿ ಮೈಸೂರು ನಗರಪಾಲಿಕೆ ಅಧಿಕಾರಿಗಳೊಂದಿಗೆ ಯುಜಿಡಿ ಸಮಸ್ಯೆ ಕುರಿತು ಎಂಜಿಪಿ ಸದಸ್ಯರು ಚರ್ಚಿಸಿದರು.

ಕೆಬಿಜಿ ನಿಧನಕ್ಕೆ ಶ್ರದ್ಧಾಂಜಲಿ

ಎಂಜಿಪಿ ಸಭೆ ಪ್ರಾರಂಭದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರ ನಿಧನಕ್ಕೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿ, ಮೈಸೂರಿನ ಅಭಿವೃದ್ಧಿಗೆ ಹಾಗೂ ಎಂಜಿಪಿ ಸಂಸ್ಥೆಯಲ್ಲಿನ ಕಾರ್ಯ ಚಟುವಟಿಕೆಗಳಿಗೆ ತಮ್ಮ ಪತ್ರಿಕೆ ಮೂಲಕ ದನಿಯಾಗಿದ್ದ ಪ್ರಸಂಗಗಳನ್ನು ಸ್ಮರಿಸಲಾಯಿತು.

ಕಾಮಗಾರಿ ಆರಂಭಿಸುವ ಇಲಾಖೆಯೇ ರಸ್ತೆ ಸರಿಪಡಿಸುವ ಹೊಣೆ

ಯುಜಿಡಿ, ಸೆಸ್ಕ್ ಸೇರಿದಂತೆ ಯಾವುದೇ ಇಲಾಖೆಯೂ ರಸ್ತೆಗಳನ್ನು ಅಗೆದು ಕಾಮಗಾರಿ ನಡೆಸಿದರೆ, ಆ ಕಾಮಗಾರಿ ಮುಗಿದ ನಂತರ ರಸ್ತೆ ಸರಿಪಡಿಸುವ ಜವಾಬ್ದಾರಿ ಆ ಇಲಾಖೆಯದ್ದೇ ಆಗಿದೆ ಎಂದು ಈಗಿನ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರು ಆದೇಶ ಹೊರಡಿಸಿದ್ದಾರೆ. ಇನ್ನು ಮುಂದೆ ನಗರದಲ್ಲಿ ಯಾವುದೇ ಕಾಮಗಾರಿ ಆರಂಭಿಸುವ ಮುನ್ನ ಪಾಲಿಕೆಯಿಂದ ಷರತ್ತುಬದ್ಧ ಅನುಮತಿ ಕಡ್ಡಾಯ. ಅಲ್ಲದೆ, ನಗರಪಾಲಿಕೆಯು ಬೇರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ, ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಮುಂದಾಗಿದೆ.

ಹೊಸ ಕಂಟ್ರೋಲ್ ರೂಂ ಸ್ಥಾಪನೆ

ವಾಟರ್ ಬಿಲ್‌ನಲ್ಲಿ ಯುಜಿಡಿ ಸೆಸ್ ಹಾಕಿ, ಒಂದು ಬಿಲ್‌ಗೆ 36 ರೂ. ಸಂಗ್ರಹಿಸುತ್ತಿದೆ. ಈ ಹಣ ಯುಜಿಡಿ ಸಮಸ್ಯೆಗೆ ಬಗೆಹರಿಸಲಾಗುತ್ತಿದೆಯೇ, ಇಲ್ಲವೆ ಎಂಬ ಸದಸ್ಯರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಅನುದಾನವನ್ನು ಬೇರೆ ಸಮಸ್ಯೆಗಳಿಗೆ ಬಳಸಲು ಸಾಧ್ಯವಿಲ್ಲ. ಈ ಸಮಸ್ಯೆಗೆ ಬಳಸಲಾಗುತ್ತಿದೆ ಎಂದು ಅಧಿಕಾರಿಗಳು ಉತ್ತರಿಸಿದರು. ಅಲ್ಲದೆ, ಯುಜಿಡಿ ಸಮಸ್ಯೆಗಳಿಗೆ ತೆರಿದಿರುವ ಕಂಟ್ರೋಲ್ ರೂಂ ಸಿಬ್ಬಂದಿ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ದೂರಿಗೆ ಉತ್ತರಿಸಿದ ಅಧಿಕಾರಿಗಳಿಗೆ ಮೊ.ಸಂಖ್ಯೆ: 9449841195/96ಗೆ ಕರೆ ಮಾಡಿದರೆ, ಸಿಬ್ಬಂದಿ ದಿನದ 24 ಗಂಟೆಯೂ ಸಾರ್ವಜನಿಕರಿಂದ ದೂರು ಸ್ವೀಕರಿಸುತ್ತಾರೆ ಎಂದರು.

ಸ್ನೇಕ್ ಶ್ಯಾಮ್‌ಗೆ ಇಂದು ಅಭಿನಂದನೆ



ಮೈಸೂರು, ಜು. 15– ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ವಿಶ್ವ ಹಾವುಗಳ ದಿನಾಚರಣೆ ಅಂಗವಾಗಿ ಹಾವುಗಳ ಬಗ್ಗೆ ಮಕ್ಕಳಿಗೆ ಜಾಗೃತಿ ಹಾಗೂ 85,000ಕ್ಕೂ ಹೆಚ್ಚು ಹಾವುಗಳನ್ನು ಸಂರಕ್ಷಿಸಿದ ಉರುಗ ತಜ್ಞ ಸ್ನೇಕ್ ಶ್ಯಾಮ್ ಅವರಿಗೆ ಅಭಿನಂದನಾ ಸಮಾರಂಭವನ್ನು ಅಕ್ಕನ ಬಳಗ ಶಾಲೆಯಲ್ಲಿ ಜು.16ರಂದು ಮಧ್ಯಾಹ್ನ 4 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಶಾಲೆ ಮುಖ್ಯ ಉಪಾಧ್ಯಾಯಿನಿ ಸುಗುಣಾವತಿ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.

ಜು.20, ಚಾಮುಂಡಿಬೆಟ್ಟದ ಮೆಟ್ಟಿಲುಗಳ ಸ್ವಚ್ಛತೆ

ಮೈಸೂರು, ಜು.15(ಜಿಎ)–ಮೈಸೂರಿನ ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಪಾದ ಯಾತ್ರೆ ಸೇವಾ ಟ್ರಸ್ಟ್ ವತಿಯಿಂದ ಜು.20ರಂದು ಬೆಳಗ್ಗೆ 8ಗಂಟೆಗೆ ಚಾಮುಂಡಿ ಬೆಟ್ಟದ ಮೆಟ್ಟಿಲುಗಳ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಎಂ.ಕೆ. ಮಹದೇವ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಹಿರಿಯ ವಕೀಲರಾದ ಓಂ ಶ್ಯಾಮ್ ಭಟ್, ಶಿಲ್ಪಿ ಅರುಣ್ ಯೋಗಿರಾಜ್, ಪ್ರಸಾದ ಮಿತ್ರ ಚೈತನ್ಯ ಸ್ವಾಮೀಜಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಚಾಮುಂಡಿಬೆಟ್ಟದ ಮೆಟ್ಟಿಲುಗಳಿಗೆ ಭಕ್ತರು ಅಪಾರ ಪ್ರಮಾಣದಲ್ಲಿ ಕುಂಕುಮ ಹಚ್ಚಿರುವುದನ್ನು ತೊಳೆದು ಹಾಕಲಾಗುತ್ತದೆ. ಭಕ್ತರು ರಾಸಾಯನಿಕ ಕುಂಕುಮ ಬಳಸುವುದರಿಂದರಿಂದ ಬೆಟ್ಟದ ಮೆಟ್ಟಿಲುಗಳಿಗೆ ಹಾನಿಯಾಗುತ್ತಿದೆ ಅದನ್ನು ತೆರವುಗೊಳಿಸುವವರಿಗೂ ಅನಾರೋಗ್ಯ ಕಾಡುವ ಭೀತಿ ಇದೆ. ಹೀಗಾಗಿ ಸಂಬಂಧಿಸಿದ ಇಲಾಖೆಗಳು ಕೇವಲ ನೈಸರ್ಗಿಕ ಕುಂಕುಮ ಮಾತ್ರ ಮಾರುಕಟ್ಟೆಯಲ್ಲಿ ದೊರೆಯುವಂತೆ ನೋಡಿಕೊಳ್ಳಬೇಕು. ಭಕ್ತರು ಬೆಟ್ಟದಲ್ಲಿ ಪ್ಲಾಸ್ಟಿಕ್ ಚೀಲಗಳನ್ನು ಎಸೆದು ಪರಿಸರ ಮಾಲಿನ್ಯ ಮಾಡುವುದು ಬೇಡ, ಬಟ್ಟೆಯ ಬ್ಯಾಗ್ ಬಳಸಿ ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಅಶೋಕ್‌ಕುಮಾರ್, ಚಿನ್ನಸ್ವಾಮಿ, ದೊರೆಸ್ವಾಮಿ, ಕೌಶಲ್ಯ, ಮಣಿರಾಜ್ ಮತ್ತಿತರರು ಉಪಸ್ಥಿತರಿದ್ದರು.

ಸಿಎ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ತೇರ್ಗಡೆ

ಮೈಸೂರು, ಜು. 15– ಮೇಲುಕೋಟೆ ಪ್ರಥಮ ಸ್ಥಾನೀಕರು ದಿವಂಗತ ಕರಗಂ ಶೇಷ ಅಯ್ಯಂಗಾರ್‌ರವರ ಮೊಮ್ಮಗ ಹಾಗೂ ಪ್ರಥಮ ಸ್ಥಾನೀಕರು ದಿವಂಗತ ಕೆ.ಎಸ್.ಭಾಷ್ಯಂ ಹಾಗೂ ಜಯಂತಿ ಭಾಷ್ಯಂರವರ ಪುತ್ರ ಕೆ.ಬಿ.ಯೋಗಪ್ರಿಯ ಇವರು ಸಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.



ಯೋಗಪ್ರಿಯ



ಶ್ರೀಹರಿ

ದಿವಂಗತ ಯಮುನಾ ಚಾರ್ಯರವರ ಮೊಮ್ಮಗ ಹಾಗೂ ಜಯಕುಮಾರ್ ಮತ್ತು ಅನುರಾಧ ಜಯಕುಮಾರ್‌ರವರ ಮಗ ಎನ್.ಶ್ರೀಹರಿ ಇವರು ಸಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರುಗಳು ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಯದುಗಿರಿ ಯತಿರಾಜ ಮಠ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಸಿಇಓ ಕೆ.ಆರ್. ಯೋಗಾನರಸಿಂಹನ್ (ಮುರುಳಿ) ಇವರ ಅಕ್ಕನ ಮಕ್ಕಳಾಗಿದ್ದಾರೆ.

ಇಂದು, ನಾಳೆ, ಜು.20, ವಿದ್ಯುತ್ ವ್ಯತ್ಯಯ



ಮೈಸೂರು,ಜು.15–ಜುಲೈ 16, 17 ಮತ್ತು ಜುಲೈ 20ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ರಸ್ತೆ ಅಗಲೀಕರಣ ಮತ್ತು ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕಾಮಗಾರಿ ನಿಮಿತ್ತ ಹುಲ್ಲಹಳ್ಳಿ ಟೌನ್ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬಾಲಿವುಡ್ ನಟ ಗುರುಪಾಲ್ ಸಿಂಗ್ ಮೈಸೂರಿಗೆ ಭೇಟಿ



ಮೈಸೂರಿನ ಅಣುವ್ರತ ಸಮಿತಿ ತಂಡದ ಸದಸ್ಯರು ಗುರುಪಾಲ್‌ಸಿಂಗ್ ಅವರೊಂದಿಗೆ ಮೈಸೂರಿನ ಜೆಎಸ್‌ಎಸ್ ಸಹಾನಾ ಶಾಲೆ, ನಿರೀಕ್ಷೆ ಸ್ಪೆಷಲ್ ಶಾಲೆ, ಗ್ರೇಸ್ ಸ್ಪೆಷಲ್ ಶಾಲೆ, ವಿಸ್ಡಮ್ ಸ್ಪೆಷಲ್ ಶಾಲೆ ಹಾಗೂ ಎಂಜೆ ಸೂಫಿ ಶಾಲೆಗಳಿಗೆ ಭೇಟಿ ನೀಡಿದರು. ಪ್ರತಿಯೊಂದು ಶಾಲೆಯಲ್ಲಿಯೂ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಉತ್ಸಾಹಭರಿತವಾಗಿ ಸ್ವಾಗತಿಸಿದರು. ಈ ವೇಳೆ ಅಧ್ಯಕ್ಷ ಮಸ್ಕಾನ್ ನೋಲ್ಕಾ, ಕಾರ್ಯದರ್ಶಿ ಪ್ರೇಕ್ಷಾ ದೇರಸಾರಿಯಾ, ಉಪಾಧ್ಯಕ್ಷ ಮೋನಾ ಭಂಟೇವಾರ, ಪ್ರಾಜೆಕ್ಟ್ ಡೈರೆಕ್ಟರ್ ಕರೀನಾ ಮೇಹರ್, ಖಾಮೋಸ್ ಮೇಹರ್, ಸೋನಾಲ್ ಕೊಠಾರಿ, ಮೀನಾಕ್ಷಿ ಕೊಠಾರಿ, ನೀತು ಭಂಡಾರಿ, ಸೀಮಾ ಚಾವತ್, ಗೌರಂಶಿ ಜೈನ್, ಮಾನ್ಸಿ ದಕ್ ಮತ್ತು ಸೇಜಲ್ ಬುರಾದ್ ಮತ್ತಿತರರು ಉಪಸ್ಥಿತರಿದ್ದರು.

ಜು.19, 20ರಂದು ಮೈಸೂರಲ್ಲಿ ಟಿಬೆಟ್ ಉತ್ಸವ

ಮೈಸೂರು, ಜು.15(ಜಿಎ)–ಟಿಬೆಟ್ ಧರ್ಮಗುರು ದಲೈಲಾಮಾ ಅವರ 90ನೇ ಜನ್ಮದಿನೋತ್ಸವ ಪ್ರಯುಕ್ತ ಈ ಭಾಗದ ವಿವಿಧ ಟಿಬೆಟಿಯನ್ ಸಂಘಟನೆಗಳ ವತಿಯಿಂದ ಟಿಬೆಟಿಯನ್ ಸಂಸ್ಕೃತಿ ಪರಿಚಯಿಸಲು ಜು.19 ಮತ್ತು 20ರಂದು ಕಲಾಮಂದಿರದಲ್ಲಿ ಟಿಬೆಟ್ ಉತ್ಸವ ಆಯೋಜಿಸಲಾಗಿದೆ ಎಂದು ಬೈಲಕುಪ್ಪೆ ಸೆಟ್ಲ್‌ಮೆಂಟ್ ಅಧಿಕಾರಿ ಗೆಲೆಕ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.19ರಂದು ಬೆಳಗ್ಗೆ 9 ಗಂಟೆಗೆ ನಿರ್ಮಲಾನಂದನಾಥ ಶ್ರೀಗಳ ಸಮ್ಮುಖದಲ್ಲಿ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. ಈ ವೇಳೆ ಟಿಬೆಟಿಯನ್ ಆಧ್ಯಾತ್ಮಕತೆ, ಕಲೆ, ಸಾಂಸ್ಕೃತಿಕ ಪರಂಪರೆಯ ವೈಭೋಗ ಪ್ರದರ್ಶನ ನಡೆಯಲಿದೆ. ಬೌದ್ಧ ಧಾರ್ಮಿಕ ಆಚರಣೆ, ಧಾರ್ಮಿಕ ವಾದ್ಯೋಪಕರಣಗಳು, ಥಾಂಗ್ಕಾ ಚಿತ್ರಕಲೆ ಪ್ರದರ್ಶನ, ಟಿಬೆಟ್ಟಿಯನ್ ನೃತ್ಯ ಮೊದಲಾದವು ಇರಲಿವೆ. ಸಂಜೆ 6.30ರಿಂದ 8ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಲಿದ್ದಾರೆ ಎಂದರು.

20ರಂದು ಸಂಜೆ 6ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆಗಮಿಸಲಿದ್ದಾರೆ. ಉತ್ಸವದಲ್ಲಿ ಬೈಲಕುಪ್ಪೆ, ಹುಣಸೂರು, ಕೊಳ್ಳೇಗಾಲಗಳ ಟಿಬೆಟಿಯನ್ ಶಿಬಿರಗಳಿಂದ ಸುಮಾರು 400 ಮಂದಿ ಟಿಬೆಟಿಯನ್ನರು ಪಾಲ್ಗೊಳ್ಳಲಿದ್ದಾರೆ. ಮೈಸೂರು ನಾಗರೀಕರು ಆಗಮಿಸಿ, ವೀಕ್ಷಿಸಿ, ಟಿಬೆಟಿಯನ್ ಸಂಸ್ಕೃತಿಯ ಅರಿವು ಮೂಡಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸೆಟ್ಲ್‌ಮೆಂಟ್ ಅಧಿಕಾರಿ ಚಿಮೆ ಉಪಸ್ಥಿತರಿದ್ದರು.

ಬಿಜೆಪಿಯಿಂದ ಅಸೂಯೆ ರಾಜಕಾರಣ



ಬಿ.ಸುಬ್ರಹ್ಮಣ್ಯ

ಮೈಸೂರು: ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕಿನಲ್ಲಿ ಹಮ್ಮಿಕೊಂಡಿರುವ ಸೇತುವೆ ಉದ್ಘಾಟನಾ ಕಾರ್ಯಕ್ರಮಕ್ಕೆ ಸಿಎಂಗೆ ತಡವಾಗಿ ಆಹ್ವಾನ ನೀಡಲಾಗಿದೆ. ಶಿಷ್ಟಾಚಾರ ಪಾಲನೆ ಮಾಡದೇ ಇರೋದು ಬಿಜೆಪಿಯ ಅಸೂಯೆ ರಾಜಕಾರಣವನ್ನು ತೋರಿಸಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ. ಸುಬ್ರಹ್ಮಣ್ಯ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಿದ್ದರಾಮಯ್ಯ ಅವರು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದಿದ್ದರು. ಕೇಂದ್ರ ಸಚಿವರು ಕಾರ್ಯಕ್ರಮ ಮುಂದೂಡಲು ಸಮ್ಮತಿಸಿದ್ದರು. ಆದರೆ ಇಲ್ಲಿನ ಸ್ಥಳೀಯ ಬಿಜೆಪಿ ನಾಯಕರ ಒತ್ತಡಕ್ಕೆ ಮಣಿದು, ಸಿಎಂ ಗಮನಕ್ಕೆ ತಾರದೇ ಕಾರ್ಯಕ್ರಮ ಆಯೋಜಿಸಿದ್ದಾರೆ. ಮೊದಲ ಕೇಬಲ್ ಸೇತುವೆ ನಿರ್ಮಾಣಕ್ಕೆ ಎಲ್ಲ ಸರ್ಕಾರದ ಕೊಡುಗೆಯೂ ಇದೆ. ಆದರೆ ರಾಜ್ಯ ಬಿಜೆಪಿ ನಾಯಕರು ಕ್ರೆಡಿಟ್ ಉದ್ದೇಶದಿಂದ ಸಿದ್ದರಾಮಯ್ಯರನ್ನ ತಡವಾಗಿ ಆಹ್ವಾನಿಸಲಾಗಿದೆ ರಾಜ್ಯದ ಮುಖ್ಯಮಂತ್ರಿ ಇಲ್ಲದೇ ಸರ್ಕಾರಿ ಕಾರ್ಯಕ್ರಮ ಮಾಡುವುದು ಅಕ್ಷಮ್ಯ ಎಂದು ಕಿಡಿಕಾರಿದ್ದಾರೆ.


ಕೇಂದ್ರದ ಯಾವುದೇ ಯೋಜನೆ ಅನುಷ್ಠಾನ ಆಗಬೇಕಾದರೆ ಅದಕ್ಕೆ ರಾಜ್ಯ ಸರ್ಕಾರದ ಸಹಕಾರ ಬಹಳ ಮುಖ್ಯ. ಸಿದ್ದರಾಮಯ್ಯರೂ ಕೇಂದ್ರದ ಎಲ್ಲ ಯೋಜನೆಗಳಿಗೆ ಸಹಕಾರ ನೀಡುತ್ತಲೇ ಇದ್ದಾರೆ. ಆದರೆ ಕೇಂದ್ರ ತಿಕ್ಕಾಟ ಸಾಧಿಸುವಂತಹ ಕೆಲಸ ಮಾಡುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ದೂರಿದ್ದಾರೆ.

35 ಐಪಿಎಸ್ ಅಧಿಕಾರಿಗಳ ವರ್ಗಾವರ್ಗಿ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಗೆ ಮೇಜರ್ ಸರ್ಜರಿ ಮಾಡಲಾಗಿದ್ದು, 35 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಆದೇಶ ಹೊರಡಿಸಲಾಗಿದೆ. ಬೆಂಗಳೂರು ಸಂಚಾರ ಪೊಲೀಸ್ ವಿಭಾಗದ ಡಿಐಜಿ ಎಂ.ಎನ್. ಅನುಚೇತ್, ದಕ್ಷಿಣ ಕನ್ನಡದ ಕಾನೂನು ಸುವ್ಯವಸ್ಥೆ ಡಿಸಿಪಿ ಜಿತೇಂದ್ರಕುಮಾರ್ ಸೇರಿದಂತೆ 35 ಐಪಿಎಸ್ ಅಧಿಕಾರಿಗಳನ್ನು ಸರ್ಕಾರ ವರ್ಗಾವಣೆ ಮಾಡಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಆದೇಶ ಹೊರಡಿಸಿದೆ.

ವರ್ಗಾವಣೆಗೊಂಡ ಅಧಿಕಾರಿಗಳ ವಿವರ: ಅಕ್ಷಯ್ ಮಚೀಂದ್ರ–ಡಿಸಿಪಿ, ಬೆಂಗಳೂರೂ ಕೇಂದ್ರ ವಿಭಾಗ, ಅಜಯ್ ಹಿಲೋರಿ–ಜಂಟಿ ಪೊಲೀಸ್ ಆಯುಕ್ತ, ಅಪರಾಧ ವಿಭಾಗ, ಪರಶುರಾಮ್–ಡಿಸಿಪಿ, ವೈಟ್ ಫೀಲ್ಡ್ ವಿಭಾಗ, ಕಾರ್ತಿಕ್ ರೆಡ್ಡಿ–ಜಂಟಿ ಪೊಲೀಸ್ ಆಯುಕ್ತ, ಸಂಚಾರ ವಿಭಾಗ' ಅನೂಪ್ ಶೆಟ್ಟಿ–ಬೆಂಗಳೂರು ಪಶ್ಚಿಮ ವಿಭಾಗ ಡಿಸಿಪಿ, ಸಂಚಾರ, ಶಿವಪ್ರಕಾಶ್ ದೇವರಾಜು–ಲೋಕಾಯುಕ್ತ ಎಸ್‌ಪಿ, ಬೆಂಗಳೂರು' ಜಯಪ್ರಕಾಶ್–ಬೆಂಗಳೂರು ಉತ್ತರ ಸಂಚಾರ ವಿಭಾಗ, ಡಿಸಿಪಿ, ಎಂ.ನಾರಾಯಣ್–ಎಲೆಕ್ಟ್ರಾನಿಕ್ ಸಿಟಿ ವಿಭಾಗ, ಡಿಸಿಪಿ, ಅನಿತಾ.ಬಿ ಹದ್ದಣ್ಣನವರ್–ಬೆಂಗಳೂರು ಆಗ್ನೇಯ ವಿಭಾಗ ಡಿಸಿಪಿ, ಸೈದುಲು ಅಡಾವತ್– ಸಿಐಡಿ, ಎಸ್‌ಪಿ, ಬಾಬಾ ಸಾಬ್ ನ್ಯಾಮಗೌಡ–ಬೆಂಗಳೂರು ಉತ್ತರ ವಿಭಾಗ, ಡಿಸಿಪಿ, ನಾಗೇಶ್–ಬೆಂಗಳೂರು ವಾಯುವ್ಯ ವಿಭಾಗ, ಡಿಸಿಪಿ, ಶ್ರೀಹರಿ ಬಾಬು–ಬೆಂಗಳೂರು ಸಿಸಿಬಿ ಡಿಸಿಪಿ, ಸೌಮ್ಯಲತಾ–ಸಿಎಆರ್ ಹೆಡ್ ಕ್ವಾರ್ಟರ್ಸ್, ಡಿಸಿಪಿ, ಎಂ.ಎನ್.ಅನುಚೇತ್–ಡಿಐಜಿ ನೇಮಕಾತಿ ವಿಭಾಗ, ವರ್ತಿಕಾ ಕಟೀಯಾರ್–ಬಳ್ಳಾರಿ ವಲಯ, ಡಿಐಜಿ, ಶಾಂತರಾಜು–ಎಸ್‌ಪಿ, ಗುಪ್ತಚರ ಇಲಾಖೆ, ಸಿರಿಗೌರಿ–ಎಸ್‌ಪಿ, ರಾಜ್ಯ ಅಪರಾಧ ದಾಖಲೆ ವಿಭಾಗ, ಸುಮನ್.ಡಿ ಪೆನ್ನೇಕರ್–ಡಿಸಿಪಿ, ಇಂಟಲಿಜೆನ್ಸ್, ಸಿಮಿ ಮರೀಯ ಜಾರ್ಜ್–ಡಿಸಿಪಿ, ದಕ್ಷಿಣ ವಿಭಾಗ ಸಂಚಾರ, ವೈ.ಅಮರನಾಥ್–ಕಮಾಂಡೆಂಟ್ ಫಸ್ಟ್ ಬೆಟಾಲಿಯನ್ ಕೆಎಸ್‌ಆರ್‌ಪಿ, ಯಶೋಧ ವಟ್ಟಗೋಡಿ–ಎಸ್‌ಪಿ, ಹಾವೇರಿ, ಗುಂಜನ್ ಆರ್ಯಾ–ಎಸ್‌ಪಿ, ಧಾರವಾಡ, ಎಂ.ಗೋಪಾಲ್–ಜಂಟಿ ನಿರ್ದೇಶಕ, ಎಫ್‌ಎಸ್‌ಎಲ್ ಬೆಂಗಳೂರು, ಸಿದ್ಧಾರ್ಥ ಗೋಯಲ್–ಎಸ್‌ಪಿ, ಬಾಗಲಕೋಟೆ, ರೋಹನ್ ಜಗದೀಶ್–ಎಸ್‌ಪಿ, ಗದಗ, ಶಿವಾಂಶು ರಜಪೂತ–ಎಸ್‌ಪಿ, ಕೆಜಿಎಫ್, ಜಿತೇಂದ್ರ ಕುಮಾರ್–ಡಿಸಿಪಿ ಕಾನೂನು ಸುವ್ಯವಸ್ಥೆ, ಮಂಗಳೂರು ನಗರ, ಎಂ.ಎನ್.ದೀಪನ್–ಎಸ್‌ಪಿ, ಉತ್ತರ ಕನ್ನಡ, ಎಸ್.ಜಾನವಿ–ಎಸ್‌ಪಿ, ವಿಜಯನಗರ, ಚಂದ್ರಗುಪ್ತ–ಐಜಿಪಿ, ಈಶಾನ್ಯ ಕಲಬುರಗಿ, ಇಡಾ ಮಾರ್ಟಿನ್ ಮಾರ್ಬಾನಿಯಾಂಗ್–ಡಿಐಜಿ, ಬೆಂಗಳೂರು ಪೊಲೀಸ್ ಹೆಡ್‌ಕ್ವಾರ್ಟರ್ಸ್, ಕಾರ್ತಿಕ್ ರೆಡ್ಡಿ–ಡಿಐಜಿ, ಜಂಟಿ ಆಯುಕ್ತರು, ಬೆಂಗಳೂರು ಸಂಚಾರ ಪೊಲೀಸ್.


ಕುಂಬಾರಕೊಪ್ಪಲಿನ ಬಾಬುಗೆ ಅಭಿನಂದನೆ...



ವಿಕ್ರಾಂತ್ ಟೈರ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘಕ್ಕೆ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಕುಂಬಾರಕೊಪ್ಪಲಿನ ಬಾಬು(ಕುಮಾರ್) ಅವರನ್ನು ನಗರಪಾಲಿಕೆ ಮಾಜಿ ಸದಸ್ಯ ಮಾದೇಶ್ ಅಭಿನಂದಿಸಿದರು. ಈ ವೇಳೆ ವಿಕ್ರಾಂತ್ ಟೈರ್ ಉದ್ಯೋಗಿಗಳ ಸಹಕಾರ ಸಂಘದ ಮಾಜಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮಾಜಿ ಪದಾಧಿಕಾರಿಗಳಾದ ಎಸ್.ಲೋಕೇಶ್, ಜಯಚಂದ್ರ, ಟಿ.ರಾಜು, ಎಸ್.ನಾಗೇಶ್, ಚಿಕ್ಕೇಗೌಡ, ನಂಜಪ್ಪಗೌಡ, ದೀಪಕ್ ಇನ್ನಿತರರಿದ್ದರು.

ದೇಶ - ವಿದೇಶ

ರಷ್ಯಾ ಮೇಲೆ ಅಧಿಕ ಸುಂಕ: ಡೊನಾಲ್ಡ್ ಟ್ರಂಪ್ ಎಚ್ಚರಿಕೆ



ವಾಷಿಂಗ್ಟನ್: ಉಕ್ರೇನ್ ಜತೆಗಿನ ಯುದ್ಧವನ್ನು ಕೊನೆಗೊಳಿಸಲು 50 ದಿನಗಳಲ್ಲಿ ಒಪ್ಪಂದ ಮಾಡಿಕೊಳ್ಳದಿದ್ದರೆ ರಷ್ಯಾ ಸರಕುಗಳ ಮೇಲೆ ಅಧಿಕ ಸುಂಕ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಜತೆ ಓವಲ್ ಕಚೇರಿಯಲ್ಲಿ ನಡೆದ ಮಾತುಕತೆ ಬಳಿಕ ಅವರು ಈ ಘೋಷಣೆ ಮಾಡಿದ್ದಾರೆ.

ರಷ್ಯಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ.100ರಷ್ಟು ಸುಂಕ ಹಾಗೂ ರಷ್ಯಾದಿಂದ ತೈಲ ಖರೀದಿಸುವ ದೇಶಗಳ ಸರಕುಗಳ ಮೇಲೆ ಶೇ.50ರಷ್ಟು ಸುಂಕ ವಿಧಿಸಲು ಟ್ರಂಪ್ ಬಯಸಿದ್ದಾರೆ. ಉಕ್ರೇನ್‌ಗೆ ಪೇಟ್ರಿಯಟ್ ವಾಯುರಕ್ಷಣಾ ವ್ಯವಸ್ಥೆ ಮತ್ತು ಇತರ ಕ್ಷಿಪಣಿ ಮಾರಾಟ ಮಾಡುವುದಾಗಿ ಟ್ರಂಪ್ ಹಾಗೂ ರುಟ್ಟೆ ಜಂಟಿಯಾಗಿ ಹೇಳಿಕೆ ನೀಡಿದ್ದಾರೆ. ರಷ್ಯಾದ ದಾಳಿ ಎದುರಿಸಲು ಉಕ್ರೇನ್‌ಗೆ ಪೇಟ್ರಿಯಟ್ ವಾಯುರಕ್ಷಣಾ ವ್ಯವಸ್ಥೆ ಪೂರೈಕೆ ಮಾಡುವುದಾಗಿ ಟ್ರಂಪ್ ಹೇಳಿದ್ದರು. ಪುಟಿನ್ ಒಳ್ಳೆಯ ಮಾತುಗಳನ್ನಾಡುತ್ತಾರೆ. ಆ ಬಳಿಕ ಎಲ್ಲರ ಮೇಲೆ ಬಾಂಬ್ ಹಾಕುತ್ತಾರೆ ಎಂದು ರಷ್ಯಾದ ಅಧ್ಯಕ್ಷರನ್ನು ಟೀಕಿಸಿದ್ದರು.

ಕೇರಳದ ನರ್ಸ್ ನಿಮಿಷಾ ಪ್ರಿಯಾ ಮರಣದಂಡನೆ ಮುಂದೂಡಿಕೆ



ನವದೆಹಲಿ: ಕೇರಳದ ನರ್ಸ್ ನಿಮಿಷಾ ಪ್ರಿಯಾ ಅವರ ಮರಣದಂಡನೆಯನ್ನು ಯೆಮೆನ್ ಅಧಿಕಾರಿಗಳು ಮುಂದೂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಿಮಿಷಾ ಪ್ರಿಯಾ ಅವರನ್ನು ಜುಲೈ 16ರಂದು ಮರಣದಂಡನೆಗೆ ಗುರಿಪಡಿಸಲು ಯೆಮೆನ್ ಜೈಲು ಅಧಿಕಾರಿಗಳು ನಿರ್ಧರಿಸಿದ್ದರು. ಕೇರಳದ ಪಾಲಕ್ಕಾಡ್ ಜಿಲ್ಲೆಯ ನಿಮಿಷಾ ಅವರು ತನ್ನ ಕ್ಲಿನಿಕ್ ಪಾಲುದಾರನಾಗಿದ್ದ ಯೆಮೆನ್ ದೇಶದ ಪ್ರಜೆ ತಲಾಲ್ ಅಬ್ದು ಮಹ್ದಿ ಎಂಬವರನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದಾರೆ. 2017ರಲ್ಲಿ ಕೊಲೆ ಪ್ರಕರಣ ನಡೆದಿತ್ತು. ಯೆಮೆನ್‌ನ ವಿಚಾರಣಾ ನ್ಯಾಯಾಲಯ 2020ರಲ್ಲಿ ನಿಮಿಷಾ ಅವರಿಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶಿಸಿತ್ತು. ಯೆಮೆನ್‌ನ 'ಸುಪ್ರೀಂ ಜುಡಿಷಿಯಲ್ ಕೌನ್ಸಿಲ್' 2023ರ ನವೆಂಬರ್‌ನಲ್ಲಿ ಈ ಶಿಕ್ಷೆ ಎತ್ತಿ ಹಿಡಿದಿತ್ತು.

ಸದ್ಯ ಯೆಮೆನ್‌ನ ಸ್ಥಳೀಯ ಅಧಿಕಾರಿಗಳು ಜುಲೈ 16ರಂದು ನಿಗದಿಯಾಗಿದ್ದ ಮರಣದಂಡನೆಯನ್ನು ಮುಂದೂಡಿದ್ದಾರೆ. ನಿಮಿಷಾ ಅವರನ್ನು ರಕ್ಷಿಸುವ ನಿಟ್ಟಿನಲ್ಲಿ ಕೇರಳದ ಪ್ರಭಾವಿ ಸುನ್ನಿ ಮುಸ್ಲಿಂ ಧಾರ್ಮಿಕ ಗುರು ಕಾಂತಪುರಂ ಎ.ಪಿ. ಅಬೂಬಕ್ಕರ್ ಮುಸ್ಲಿಯಾರ್ ಮಧ್ಯಪ್ರವೇಶಿಸಿದ್ದಾರೆ.

ಮಂಗಳ ಗ್ರಹದ ಶಿಲೆ ಮಾರಾಟ; 34 ಕೋಟಿಗೆ ಹರಾಜು ಸಾಧ್ಯತೆ



ನ್ಯೂಯಾರ್ಕ್: 25 ಕೆ.ಜಿ ತೂಕದ (54 ಪೌಂಡ್) ಶಿಲೆಯೊಂದನ್ನು ನ್ಯೂಯಾರ್ಕ್‌ನಲ್ಲಿ ಇದೇ ಬುಧವಾರ ಹರಾಜು ಹಾಕಲಾಗುತ್ತದೆ. ಈ ಶಿಲೆಯ ಬೆಲೆ 17 ಕೋಟಿಯಿಂದ 34 ಕೋಟಿಯಷ್ಟು ಆಗಲಿದೆ (2ರಿಂದ 4 ಮಿಲಿಯನ್ ಡಾಲರ್) ಎಂದು ಅಂದಾಜಿಸಲಾಗಿದೆ. ಈ ಶಿಲೆಗೆ ಇಷ್ಟೊಂದು ಬೆಲೆ ಏಕೆ ಎಂದು ಅಚ್ಚರಿಯಾಗುತ್ತಿದೆಯೇ? ಇದು ಭೂಮಿ ಮೇಲೆ ಈವರೆಗೆ ಕಂಡುಬಂದಿರುವ ಮಂಗಳ ಗ್ರಹದ ಶಿಲೆಯ ಅತ್ಯಂತ ದೊಡ್ಡ ತುಣುಕಾಗಿದೆ. ಈ ಕಾರಣಕ್ಕೆ ಈ ಶಿಲೆಗೆ ಅಷ್ಟೊಂದು ಬೆಲೆ! ಇದನ್ನು ಉಲ್ಕಾಶಿಲೆ ಎಂದೂ ಕರೆಯಲಾಗುತ್ತದೆ. ವಿಶ್ವದ ದೊಡ್ಡ ಹರಾಜು ಸಂಸ್ಥೆ ಸೊದೆಬಿ, 'ಪ್ರಾಕೃತಿಕ ಇತಿಹಾಸ' ಧ್ಯೇಯವಾಕ್ಯದಡಿ ಈ ಶಿಲೆಯನ್ನು ಹರಾಜು ಹಾಕುತ್ತಿದೆ. ಮಂಗಳನ ಅಂಗಳದ ಈ ಶಿಲೆಗೆ 'ಎನ್‌ಡಬ್ಲುಎ 16788' ಎಂದು ಹೆಸರಿಲಾಗಿದೆ. ಜೊತೆಗೆ, ಡೈನೊಸಾರ್‌ನ ಮರಿ 'ಸೆರಾಟೊಸಾರಸ್'ನ ಅಸ್ಥಿಪಂಜರವನ್ನು ಕೂಡ ಹರಾಜು ಹಾಕಲಾಗುತ್ತದೆ. ಈ ಅಸ್ಥಿಪಂಜರವು 6 ಅಡಿಗಿಂತ ಎತ್ತರ ಇದ್ದು, 11 ಅಡಿಯಷ್ಟು ಉದ್ದ ಇದೆ. ಈ ಮೊದಲು, ರೋಮ್‌ನಲ್ಲಿರುವ ಇಟಲಿಯ ಬಾಹ್ಯಾಕಾಶ ಸಂಸ್ಥೆಯಲ್ಲಿ ಈ ಶಿಲೆಯನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ಸ್ಪೈಸ್ ಜೆಟ್ ವಿಮಾನದ ಕಾಕ್‌ಪಿಟ್‌ಗೆ ನುಗ್ಗಲು ಯತ್ನ; ಭಯಭೀತರಾದ ಪ್ರಯಾಣಿಕರು!



ನವದೆಹಲಿ: ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ಸ್ಪೈಸ್ ಜೆಟ್ ವಿಮಾನದ ಕಾಕ್ ಪಿಟ್‌ಗೆ ಬಲವಂತವಾಗಿ ಪ್ರವೇಶಿಸಲು ಪ್ರಯತ್ನಿಸಿದ ಇಬ್ಬರು ಪ್ರಯಾಣಿಕರನ್ನು ವಿಮಾನದಿಂದ ಕೆಳಗಿಳಿಸಲಾಯಿತು. ಟೇಕಾಫ್ ಮಾಡಲು ವಿಮಾನವು ಗೊತ್ತುಪಡಿಸಿದ ರನ್‌ವೇಗೆ ಹೋಗುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಇದರಿಂದ ವಿಮಾನದಲ್ಲಿದ್ದ ಇತರ ಪ್ರಯಾಣಿಕರು ಭಯಭೀತರಾಗಿದ್ದರು. ಎಸ್‌ಜಿ 9282 ವಿಮಾನದಲ್ಲಿದ್ದ ಇಬ್ಬರು ಪ್ರಯಾಣಿಕರು ಅಶಿಸ್ತಿನ ವರ್ತನೆ ತೋರಿದ್ದಾರೆ. ಬಲವಂತವಾಗಿ ಕಾಕ್‌ಪಿಟ್‌ಗೆ ಪ್ರವೇಶಿಸಲು ಯತ್ನಿಸಿದ್ದಾರೆ. ಕ್ಯಾಪ್ಟನ್, ಕ್ಯಾಬಿನ್ ಸಿಬ್ಬಂದಿ, ಸಹ ಪ್ರಯಾಣಿಕರು ಪದೇ ಪದೇ ಎಚ್ಚರಿಕೆ ನೀಡಿದ್ದರೂ ತಮ್ಮ ಆಸನಗಳಿಗೆ ಹಿಂತಿರುಗಲು ನಿರಾಕರಿಸಿದ್ದಾರೆ. ಇದರಿಂದ ಗೊಂದಲದ ಸೃಷ್ಟಿಯಾಗಿತ್ತು ಎಂದು ಸ್ಪೈಸ್‌ಜೆಟ್ ವಕ್ತಾರರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಸ್ಪೈಸ್ ಜೆಟ್ ವಿಮಾನವು ದೆಹಲಿ ವಿಮಾನ ನಿಲ್ದಾಣದಿಂದ ಮುಂಬೈಗೆ ಮಧ್ಯಾಹ್ನ 12:30ಕ್ಕೆ ಹೊರಡಬೇಕಿತ್ತು. ಈ ಘಟನೆಯಿಂದ ವಿಮಾನವು ರಾತ್ರಿ 7:21ಕ್ಕೆ ತನ್ನ ಗಮ್ಯಸ್ಥಾನಕ್ಕೆ ಹೊರಟಿತ್ತು ಎಂದು ಫ್ಲೈಟ್ ರೆಡಾರ್ 24. ಕಾಮ್ ವೆಬ್‌ಸೈಟ್ ವರದಿ ಮಾಡಿದೆ.

ಯುಎಇಯಲ್ಲಿ ಕೇರಳದ ಮಹಿಳೆ ಆತ್ಮಹತ್ಯೆ



ಶಾರ್ಜಾ: ಯುನೈಟೆಡ್ ಅರಬ್ ಎಮಿರೇಟ್ಸ್‌ನ ಶಾರ್ಜಾದಲ್ಲಿ ಮಗುವಿನೊಂದಿಗೆ ಕೇರಳದ ಮಹಿಳೆಯೊಬ್ಬರ ಮೃತದೇಹ ಪತ್ತೆಯಾಗಿದೆ. 32 ವರ್ಷದ ಕೇರಳ ಮಹಿಳೆಯ ಪತಿ ಮತ್ತು ಅತ್ತೆ ವಿರುದ್ಧ ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಲಾಗಿದೆ. ಕೇರಳದ ಕೊಲ್ಲಂ ಜಿಲ್ಲೆಯ ವಿಪಂಚಿಕಾ ಮಣಿಯನ್ ಜು.8ರಂದು ತನ್ನ ಶಾರ್ಜಾ ಅಪಾರ್ಟ್‌ಮೆಂಟ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಆಕೆಯ 1 ವರ್ಷದ ಮಗಳು ಕೂಡ ಸಾವನ್ನಪ್ಪಿದ್ದಾಳೆ. ಮಗುವನ್ನು ದಿಂಬಿನಿಂದ ಉಸಿರುಗಟ್ಟಿಸಿ ಹತ್ಯೆ ಮಾಡಿರುವುದು ವಿಧಿವಿಜ್ಞಾನ ವರದಿಯಿಂದ ಬಹಿರಂಗವಾಗಿದೆ. ಮೃತ ಮಹಿಳೆ ಬರೆದಿದ್ದಾರೆ ಎನ್ನಲಾದ ಮಲಯಾಳಂ ಭಾಷೆಯ ಕೈಬರಹದ ಪತ್ರವೊಂದು ಮನೆಯಲ್ಲಿ ಸಿಕ್ಕಿದೆ. ಮನೆಯಲ್ಲಿ ದೌರ್ಜನ್ಯ, ಚಿತ್ರಹಿಂಸೆ ನೀಡುತ್ತಿದ್ದರು ಎಂದು ಉಲ್ಲೇಖಿಸಲಾಗಿದೆ. ಪತಿ ನಿಧೀಶ್ ವಲಿಯವೀಟ್ಟಿಲ್ ಮತ್ತು ಅವರ ಕುಟುಂಬದವರು ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ. ನನ್ನ ಮಗಳಿಗೆ ಆಕೆ ಪತಿ, ಅತ್ತೆ–ಮಾವ ಕಿರುಕುಳ ನೀಡುತ್ತಿದ್ದರು ಎಂದು ಸಂತ್ರಸ್ತೆ ತಾಯಿ ಶ್ಯಾಮಲಾ ಆರೋಪಿಸಿದ್ದಾರೆ. ಸಂತ್ರಸ್ತೆಯ ಪತಿ ಮತ್ತು ಆಕೆಯ ಕುಟುಂಬದವರು ಕಪ್ಪು ವರ್ಣೀಯರಾಗಿದ್ದರು. ಬೆಳ್ಳಗಿದ್ದ ಆಕೆಯನ್ನು ಆಕರ್ಷಕವಾಗಿ ಕಾಣಬಾರದೆಂದು ತಲೆಗೂದಲನ್ನು ಕತ್ತರಿಸಿದ್ದರೆಂದು ದೂರಿನಲ್ಲಿ ತಿಳಿಸಲಾಗಿದೆ.

ಮೈಸೂರು ಮಿತ್ರ ಬುಧವಾರ 16 ಜುಲೈ 2025

ಕಂದಾಯ ಅಧಿಕಾರಿ, ಸಿಬ್ಬಂದಿ ವಿರುದ್ಧ ಇಡಿ ತನಿಖೆಗೆ ಆಗ್ರಹ



ಕಂದಾಯ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಇಡಿ ತನಿಖೆ ನಡೆಸುವಂತೆ ಕೊಡಗು ಏಕೀಕರಣ ರಂಗದ ಪ್ರಮುಖರು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಮಡಿಕೇರಿ,ಜು.15–ತಮ್ಮ ಅಧಿಕಾರದ ಅವಧಿಯಲ್ಲಿ ತಾಲೂಕಿನ ಕಂದಾಯ ಅಧಿಕಾರಿ ಮತ್ತು ಸಿಬ್ಬಂದಿಯೊಬ್ಬರು ಕಾನೂನು ಬಾಹಿರವಾದ ಕೆಲಸಗಳನ್ನು ನಡೆಸಿರುವ ಬಗ್ಗೆ ಇಡಿ ಮೂಲಕ ಸಮಗ್ರ ತನಿಖೆ ನಡೆಸುವಂತೆ ಕೊಡಗು ಏಕೀಕರಣ ರಂಗ ಸರ್ಕಾರವನ್ನು ಆಗ್ರಹಿಸಿದೆ.

ಭೂ ದಾಖಲೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ಗಾಳಿಗೆ ತೂರಿ ಕಾರ್ಯ ನಿರ್ವಹಿಸಿರುವ ಹಿಂದಿನ ತಾಲೂಕು ಕಂದಾಯ ಅಧಿಕಾರಿಗಳು ಇದೀಗ ಕೊಡಗು ಜಿಲ್ಲಾ ಉಪ ವಿಭಾಗಾಧಿಕಾರಿಗಳಾಗಿ ಬರಲು ಸಾಕಷ್ಟು ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಒಂದೊಮ್ಮೆ ಅವರು ಕಂದಾಯ ಇಲಾಖೆಯ ಪ್ರಮುಖ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾದ ಜವಾಬ್ದಾರಿಯುತ ಉಪ ವಿಭಾಗಾಧಿಕಾರಿಗಳಾಗಿ ಜಿಲ್ಲೆಗೆ ಬಂದಲ್ಲಿ ಕಂದಾಯ ಇಲಾಖೆಯ ಕೆಲಸ ಕಾರ್ಯಗಳು ಹದಗೆಡುವ ಹಾಗೂ ಸಾರ್ವಜನಿಕರು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆಗಳಿದೆ ಎಂದು ರಂಗದ ಖಜಾಂಚಿ ಎಂ.ಕೆ. ಅಪ್ಪಚ್ಚು (ಸತೀಶ್) ಸುದ್ದಿಗೋಷ್ಠಿಯಲ್ಲಿ ಕಳವಳ ವ್ಯಕ್ತಪಡಿಸಿದರು.

ಈಗಾಗಲೆ ಈ ಬಗ್ಗೆ ಜಿಲ್ಲೆಯ ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್ ಗೌಡ ಅವರಿಗೆ ಭೂ ದಾಖಲೆಗಳಲ್ಲಿನ ಹಗರಣಗಳ ಮಾಹಿತಿಯನ್ನು ದಾಖಲೆ ಸಹಿತ ನೀಡಲಾಗಿದೆ. ಇದನ್ನು ಪರಿಶೀಲಿಸಿ ಯಾವುದೇ ಕಾರಣಕ್ಕೂ ಆರೋಪ ಹೊತ್ತಿರುವವರನ್ನು ಜಿಲ್ಲೆಯ ಉಪವಿಭಾಗಾಧಿಕಾರಿ ಸ್ಥಾನಕ್ಕೆ ನಿಯುಕ್ತಿ ಮಾಡಕೂಡದು ಎಂದು ಒತ್ತಾಯಿಸಿದರು.

ತಮ್ಮ ಅಧಿಕಾರದ ಅವಧಿಯಲ್ಲಿ ಕುಶಾಲನಗರ ಸಮೀಪದ ಬಸವನಹಳ್ಳಿಯಲ್ಲಿ ಅಕ್ರಮ ಸಕ್ರಮದಡಿ ವ್ಯಕ್ತಿಯೊಬ್ಬರಿಗೆ ಮಂಜೂರಾದ ಜಾಗವನ್ನು ತಮ್ಮ ತಾಯಿಯ ಹೆಸರಿನಲ್ಲಿ ಖರೀದಿಸುತ್ತಾರೆ. ಆದರೆ ಕರಾರು ಪತ್ರದಲ್ಲಿ ಖರೀದಿಗೆ ನೀಡಿದ ಹಣವನ್ನು ನಮೂದಿಸಲಾಗಿದೆಯೇ ಹೊರತು ಅದರ ಯಾವುದೇ ದಾಖಲೆಗಳಿಲ್ಲ. ಯಾವುದೇ ಹಣದ ವ್ಯವಹಾರ ಬ್ಯಾಂಕ್ ಮೂಲಕ ನಡೆದು ದಾಖಲೆ ಗಳನ್ನು ನೀಡಬೇಕಾಗಿತ್ತಾದರೂ ಇದರಲ್ಲಿ ಅಂತಹ ದಾಖಲೆಗಳಿಲ್ಲ. ಇದರೊಂದಿಗೆ ಖರೀದಿಸಿದ ಈ ಜಾಗವನ್ನು ಕಂದಾಯ ಅಧಿಕಾರಿಯ ಮಕ್ಕಳಿಗೆ ಗಿಫ್ಟ್ ಡೀಡ್ ಮೂಲಕ ವರ್ಗಾಯಿಸಲಾಗಿದೆ ಎಂದು ಆರೋಪಿಸಿದರು. ಮತ್ತೊಂದು ಪ್ರಕರಣದಲ್ಲಿ ಕಂದಾಯಕ್ಕೆ ಬಾರದ ಜಾಗದಲ್ಲಿ ಕಾಫಿ ಕೃಷಿ ಇದೆ ಎಂದು ಕಂದಾಯ ನಿಗದಿ ಪಡಿಸಿ ಜಾಗವನ್ನು ಪಡೆದುಕೊಂಡ ಘಟನೆಗಳು ನಡೆಸಿರುವುದಾಗಿ ಎಂ.ಕೆ.ಅಪ್ಪಚ್ಚು ಮಾಹಿತಿ ನೀಡಿದರು.

ಕೊಡಗು ಏಕೀಕರಣ ರಂಗದ ಕಾರ್ಯದರ್ಶಿ ಟಿ.ಎಂ.ಸೋಮಯ್ಯ ಮಾತನಾಡಿ, ಜಿಲ್ಲೆಯಲ್ಲಿ ಈ ರೀತಿ ಕಂದಾಯ ಅಧಿಕಾರಿಗಳು ನಡೆಸಿರಬಹುದಾದ ಅಕ್ರಮಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಸಂಘಟನೆಯೊಂದಕ್ಕೆ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ಸಿಲುಕಿದವರು ಅಗತ್ಯ ಮಾಹಿತಿಯನ್ನು ಕೊಡಗು ಏಕೀಕರಣ ರಂಗ ಸಂಘಟನೆಗೆ ಒದಗಿಸುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಕೊಡಗು ಏಕೀಕರಣ ರಂಗದ ಸದಸ್ಯ ತಮ್ಮು ಪೂವಯ್ಯ ಉಪಸ್ಥಿತರಿದ್ದರು.

ರಾಜಾಸೀಟಲ್ಲಿ 'ಪುಟಾಣಿ ರೈಲು' ಆರಂಭಕ್ಕೆ ಕ್ರಮ

ಜಿಲ್ಲಾಧಿಕಾರಿ ವೆಂಕಟ್ ರಾಜಾ



ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಂಗಳವಾರ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆ ನಡೆಯಿತು

ಮಡಿಕೇರಿ ಜು.15–ರಾಜಾಸೀಟಿನಲ್ಲಿ 'ಮಕ್ಕಳ ಪುಟಾಣಿ ರೈಲು' ಆರಂಭಿಸುವ ಸಂಬಂಧ ದಕ್ಷಿಣ ವಲಯ ರೈಲ್ವೆ ವಿಭಾಗದ ಎಂಜಿನಿಯರ್‌ಗಳಿಂದ ವರದಿ ಬಂದ ನಂತರ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೈಲು ಬೋಗಿ ಅಳವಡಿಸುವುದು ಸೇರಿದಂತೆ ಪುಟಾಣಿ ರೈಲು ನಿರ್ಮಾಣಕ್ಕೆ ಕ್ರಮವಹಿಸಲಾಗುವುದು ಎಂದರು.

ರಾಜಾಸೀಟು ಮುಖ್ಯ ದ್ವಾರದ ಬಳಿ ಅಂಗಡಿಗಳು ತುಂಬಾ ಇದ್ದು, ಪ್ರವಾಸಿಗರಿಗೆ ಕಿರಿಕಿರಿ ಉಂಟಾಗುತ್ತಿದೆ. ಈ ಸಂಬಂಧ ಅಗತ್ಯ ಕ್ರಮಕೈಗೊಳ್ಳುವಂತೆ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸದಸ್ಯ ಮೋಂತಿ ಗಣೇಶ್ ತಿಳಿಸಿದರು.

ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ವಿಶೇಷ ಆಹ್ವಾನಿತ ಜಿ.ಚಿದ್ವಿಲಾಸ್ ಮಾತನಾಡಿ ರಾಜಾಸೀಟಿನಲ್ಲಿ ಮಕ್ಕಳ ರೈಲು ಸ್ಥಗಿತವಾಗಿ ಹಲವು ವರ್ಷಗಳಾಗಿದ್ದು, ಈ ಬಗ್ಗೆ ತುರ್ತು ಕ್ರಮವಹಿಸಬೇಕು ನಗರದ ಅಜ್ಜಮಾಡ ದೇವಯ್ಯ ವೃತ್ತದ ಬಳಿ 'ಮರ್ಕರ ಸ್ಕ್ವೇರ್' ಅನ್ನು ಆಕರ್ಷಣೀಯಗೊಳಿಸಿ ಅಭಿವೃದ್ಧಿಪಡಿಸುವಂತಾಗಬೇಕು. ನಗರದಲ್ಲಿ ವಾಹನ ದಟ್ಟಣೆ ಹೆಚ್ಚಾಗಿದ್ದು, ರಸ್ತೆಗಳು ಕಿರಿದಾಗಿರುವುದರಿಂದ ಕಾವೇರಿ ಕಲಾ ಕ್ಷೇತ್ರದಲ್ಲಿ ವಾಹನ ನಿಲುಗಡೆಗೆ ಅವಕಾಶ ಮಾಡಿಕೊಡುವ ಕಾರ್ಯವಾದರೆ ಎಲ್ಲರಿಗೂ ಅನುಕೂಲವಾಗಲಿದೆ ಎಂದು ಹೇಳಿದರು

ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ನಾಗೇಂದ್ರ ಪ್ರಸಾದ್ ಮಾತನಾಡಿ, ಕುಶಾಲನಗರ ಬಳಿಯ ತಾವರೆಕೆರೆ ಅಭಿವೃದ್ಧಿಪಡಿಸಿದರೆ ಅದನ್ನು ಪ್ರವಾಸಿ ತಾಣವನ್ನಾಗಿ ಮಾಡಬಹುದಾಗಿದೆ. ಇರ್ಪು ಜಲಪಾತವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಮುಂದಾಗಬೇಕು. ಪ್ರವಾಸಿಗರ ಅನುಕೂಲಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದರು.

ಹೋಟೆಲ್ ಅಸೋಷಿಯೇಷನ್‌ನ ದಿನೇಶ್ ಕಾರ್ಯಪ್ಪ ಮಾತನಾಡಿ, ಪ್ರವಾಸಿ ಸ್ಥಳಗಳ ಬಳಿ ಸೈನ್‌ಬೋರ್ಡ್ ಅಳವಡಿಸಲಾಗುತ್ತಿದೆ ಎಂದರು. ಹೋಂ ಸ್ಟೇ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷ ಕರುಂಬಯ್ಯ ಮಾತನಾಡಿ ಬಸ್ ನಿಲ್ದಾಣದ ಮುಂಭಾಗದ ರಸ್ತೆಯಲ್ಲಿ ಎಲ್ಲೆಂದರಲ್ಲಿ ವಾಹನಗಳು ಸಂಚಾರ ಮಾಡುತ್ತಿದ್ದು, ಈ ಸ್ಥಳದಲ್ಲಿ ಪೊಲೀಸರನ್ನು ನಿಯೋಜಿಸುವಂತಾಗಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾತನಾಡಿ ವಾಹನ ಪಾರ್ಕಿಂಗ್ ಸ್ಥಳವನ್ನು ಗುರುತು ಮಾಡಬೇಕು. ಹೋಟೆಲ್, ಹೋಂಸ್ಟೇ ರೆಸಾರ್ಟ್‌ಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮೆರಾ ಅಳವಡಿಸಬೇಕು. ಸಿಸಿಟಿವಿ ಫುಟೇಜ್‌ನಿಂದ ಮಾಹಿತಿ ಪಡೆಯಲು ಸಾಧ್ಯವಾಗಲಿದ್ದು, ಆ ನಿಟ್ಟಿನಲ್ಲಿ ಸಾಮೂಹಿಕ ಜವಾಬ್ದಾರಿ ಅಗತ್ಯ ಎಂದರು.

ಹಿರಿಯ ಪತ್ರಕರ್ತ ಅನಿಲ್ ಹೆಚ್. ಟಿ. ಮಾತನಾಡಿ, ಹೊರಜಿಲ್ಲೆಗಳಲ್ಲಿ' ಪ್ರವಾಸಿ ತಾಣಗಳ ಬಗ್ಗೆ ಹೆಚ್ಚು ಪ್ರಚಾರ ಆಗಬೇಕು. ಬಾನುಲಿ ಎಫ್.ಎಂ., ಮಲ್ಟಿ ಫ್ಲೆಕ್ಸ್‌ಗಳಲ್ಲಿ ಕೊಡಗಿನ ಬಗ್ಗೆ ಪ್ರಚಾರ ಆದಾಗ ಪ್ರವಾಸಿಗರಿಗೂ ಕೊಡಗಿನ ಬಗ್ಗೆ ಅಗತ್ಯ ಮಾಹಿತಿ ದೊರಕುತ್ತದೆ ಎಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ನೆಹರು, ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎನ್.ಎಸ್. ಫಣೀಂದ್ರ, ಪರಿಸರ ಅಧಿಕಾರಿ ರಘುರಾಮ್, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಸಚಿನ್, ಕೆಆರ್‌ಐಡಿಎಲ್ ಸಂಸ್ಥೆಯ ಎಂಜಿನಿಯರ್ ಪ್ರಮೋದ್, ಕೊಡಗು ಜಿಲ್ಲಾ ಟೂರ್ಸ್ ಅಂಡ್ ಟ್ರಾವೆಲ್ ಅಧ್ಯಕ್ಷ ವಸಂತ್, ಸೋಮವಾರಪೇಟೆ ತಾಲೂಕಿನ ಹೋಂ ಸ್ಟೇ ಅಸೋಷಿಯೇಷನ್ ಅಧ್ಯಕ್ಷ ರೋಹಿತ್, ದುಬಾರೆ ರಿವರ್ ರ‍್ಯಾಪ್ಟಿಂಗ್ ಅಸೋಸಿಯೇಷನ್ ಅಧ್ಯಕ್ಷ ಚಂಗಪ್ಪ, ಬರಪೊಳೆ ರಿವರ್ ರ‍್ಯಾಫ್ಟಿಂಗ್ ಅಧ್ಯಕ್ಷ ರತನ್ ಸಿ.ಎಸ್., ಜಿಲ್ಲಾ ಪ್ರವಾಸೋದ್ಯಮ ಸಮಾಲೋಚಕ ಜತಿನ್ ಇತರರಿದ್ದರು.

ಭಾಗಮಂಡಲ ನಾಡು ಗೌಡ ಸಮಾಜದ ನಿಯೋಗದಿಂದ ಮುಖ್ಯಮಂತ್ರಿಗಳಿಗೆ ಮನವಿ



ಭಾಗಮಂಡಲ ನಾಡು ಗೌಡ ಸಮಾಜದ ಪ್ರಮುಖರ ನಿಯೋಗ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಮನವಿ ಸಲ್ಲಿಸಿತು

ನಾಪೋಕ್ಲು, ಜು.15–ಭಾಗಮಂಡಲ ನಾಡುಗೌಡ ಸಮಾಜದ ಪ್ರಮುಖರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿಯಾಗಿ ಬೇಡಿಕೆಗಳಿಗೆ ಮನವಿ ಸಲ್ಲಿಸಿದರು.

ಶಾಸಕ ಎ.ಎಸ್ ಪೊನ್ನಣ್ಣ ನೇತೃತ್ವದಲ್ಲಿ ಭಾಗಮಂಡಲ ನಾಡು ಗೌಡ ಸಮಾಜದ ಅಧ್ಯಕ್ಷ ಕುದ್ಪಾಜೆ ಪಿ ಪಳಂಗಪ್ಪ ನಿಯೋಗ ಮನವಿ ಸಲ್ಲಿಸಿ, ಭಾಗಮಂಡಲದಲ್ಲಿ ಈಗಿರುವ ಗೌಡ ಸಮುದಾಯ ಭವನದಲ್ಲಿ ಮೂಲ ಸೌಲಭ್ಯಗಳ ಕೊರತೆ ಇರುವುದರಿಂದ ಗೌಡ ಸಮಾಜ ಮತ್ತು ಎಲ್ಲಾ ಜಾತಿ–ಧರ್ಮದವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನೂತನವಾಗಿ ಸಮುದಾಯ ಭವನದ ನಿರ್ಮಿಸಲು ಅನುದಾನ ಮಂಜೂರು ಮಾಡುವಂತೆ ಸಲ್ಲಿಸಿದ ಮನವಿಗೆ ಮುಖ್ಯಮಂತ್ರಿಗಳು ಅನುದಾನ ಮಂಜೂರು ಮಾಡುವ ಬಗ್ಗೆ ಭರವಸೆ ನೀಡಿದರು.

ನಿಯೋಗದಲ್ಲಿ ಗೌಡ ಸಮಾಜದ ಪ್ರಮುಖರಾದ ಹೊಸೂರು ಸತೀಶ್ ಜೋಯಪ್ಪ ಪ್ರಕಾಶ್ ಕುದ್ಪಾಜೆ, ದೇವಂಗೋಡಿ ಹರ್ಷ, ಕುಯ್ಯ ಮುಡಿ ರಂಜು, ನಿಡ್ಯಮಲೆ ರವಿ, ಕುದ್ಪಾಜೆ ಗಗನ್, ನಿಡ್ಯಮಲೆ ದಾಮೋದರ, ಅಮೆ ಹರೀಶ್ ಮತ್ತಿತರರಿದ್ದರು.

ನಾಪೋಕ್ಲುವಿನಲ್ಲಿ ಮನೆ ಮನೆಗೆ ಪೊಲೀಸ್‌ಗೆ ಚಾಲನೆ



'ಮನೆ ಮನೆಗೆ ಪೊಲೀಸ್' ಕಾರ್ಯಕ್ರಮಕ್ಕೆ ನಾಪೋಕ್ಲುವಿನಲ್ಲಿ ಇಂದು ಚಾಲನೆ ನೀಡಲಾಯಿತು.

ಮಡಿಕೇರಿ, ಜು.15– ಸಾರ್ವಜನಿಕರ ಸಮಸ್ಯೆ ಹಾಗೂ ದೂರುಗಳನ್ನು ಆಲಿಸಲು ವಿನೂತನ ಪರಿಕಲ್ಪನೆಯಾದ 'ಮನೆ ಮನೆಗೆ ಪೊಲೀಸ್' ಕಾರ್ಯಕ್ರಮಕ್ಕೆ ನಾಪೋಕ್ಲುವಿನಲ್ಲಿ ಇಂದು ಚಾಲನೆ ನೀಡಲಾಯಿತು.

ಪಟ್ಟಣದ ಪೊಲೀಸ್ ಠಾಣಾ ವ್ಯಾಪ್ತಿಯ ಇಂದಿರಾನಗರದಲ್ಲಿ ಮನೆ ಮನೆಗೆ ಪೊಲೀಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಠಾಣಾಧಿಕಾರಿ ಪಿ.ಜಿ. ರಾಘವೇಂದ್ರ ಮಾತನಾಡಿ, ಮನೆ ಮನೆಗೆ ಪೊಲೀಸರು ಎಂಬ ರಾಜ್ಯ ಸರ್ಕಾರದ ವಿನೂತನ ಪರಿಕಲ್ಪನೆಯ ಜನಸ್ನೇಹಿ ಕಾರ್ಯಕ್ರಮವಾಗಿದೆ. ಮುಂದಿನ ದಿನಗಳಲ್ಲಿ ನಾವು ಠಾಣಾ ವ್ಯಾಪ್ತಿಯ ಎಲ್ಲಾ ಮನೆ ಮನೆಗಳಿಗೆ ತೆರಳಿ ಸಾರ್ವಜನಿಕರ ಸಮಸ್ಯೆ ಹಾಗೂ ದೂರುಗಳನ್ನು ಪಡೆಯಲಿದ್ದೇವೆ ಎಂದರು.

ಕಾರ್ಯಕ್ರಮದ ಅಂಗವಾಗಿ ಠಾಣೆಯ ಸಿಬ್ಬಂದಿಗಳು ಇಂದಿರಾನಗರ ಹಾಗೂ ಹೊದವಾಡ, ಚೆರಿಯಪರಂಬು ಗ್ರಾಮದ ಮನೆ ಮನೆಗಳಿಗೆ ತೆರಳಿ ಸೈಬರ್ ಅಪರಾಧ, ಮಾದಕ ವಸ್ತುಗಳ ಬಳಕೆಯಿಂದ ಉಂಟಾಗುವ ದುಷ್ಪರಿಣಾಮ, ಬಾಲಾಪರಾಧ, ಪೋಕ್ಸೋ ಕಾಯ್ದೆ, ಕಳ್ಳತನ ಪ್ರಕರಣ, ರಸ್ತೆ ಸಂಚಾರ ನಿಯಮ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಅಭಿಯಾನದ ಮೂಲಕ ಜನರಿಗೆ ಜಾಗೃತಿ ಮೂಡಿಸಿದರು. ಮನೆಯ ಸದಸ್ಯರ ಮಾಹಿತಿಗಳನ್ನು ಕಲೆ ಹಾಕಿದರು. ನಾಪೋಕ್ಲು ಠಾಣೆಯ ಸಹಾಯಕ ಠಾಣಾಧಿಕಾರಿಗಳಾದ ಫ್ರಾನ್ಸಿಸ್, ಪ್ರಕಾಶ್, ಮುಖ್ಯಪೇದೆ ವಿಜಯಕುಮಾರ್, ಗ್ರಾಮ ಪಂಚಾಯಿತಿ ಸದಸ್ಯ ಮಹಮ್ಮದ್ ಖುರೇಶಿ, ಕಾಳೆಯಂಡ ಸಾಬ ತಿಮ್ಮಯ್ಯ, ಠಾಣೆಯ ಸಿಬ್ಬಂದಿಗಳು, ಗ್ರಾಮಸ್ಥರು ಹಾಜರಿದ್ದರು.

ಬಿಜೆಪಿ ಸದಸ್ಯೆ ಬೋವ್ವೆರಿಯಂಡ ಆಶಾ ಸುಬ್ಬಯ್ಯ ನಿಧನ



ವಿರಾಜಪೇಟೆ, ಜು.15– ಪುರಸಭೆ ವ್ಯಾಪಿಯ ಚಿಕ್ಕಪೇಟೆ ವಾರ್ಡ್‌ನ ಬಿಜೆಪಿ ಸದಸ್ಯೆ ಬೋವ್ವೆರಿಯಂಡ ಆಶಾ ಸುಬ್ಬಯ್ಯ (60) ಅವರು ಹೃದಯಾಘಾತದಿಂದ ನಿಧನ ಹೊಂದಿದ್ದಾರೆ.

ನಿನ್ನೆ ರಾತ್ರಿ ಆಶಾ ಸುಬ್ಬಯ್ಯ ಅವರಿಗೆ ಎದೆನೋವು ಕಾಣಿಸಿಕೊಂಡಾಗ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಆಸ್ಪತ್ರೆಗೆ ಸಾಗಿಸುವ ಸಂದರ್ಭ ರಾತ್ರಿ ಕೈಕೇರಿ ಬಳಿ ಹೃದಯಾಘಾತದಿಂದ ನಿಧನರಾಗಿದ್ದು, ಅವರ ಅಂತ್ಯಕ್ರಿಯೆ ಮಂಗಳವಾರ ವಿರಾಜಪೇಟೆ ಕೊಡವ ಸಮಾಜದ ರುದ್ರಭೂಮಿಯಲ್ಲಿ ನಡೆಯಿತು. ಮೃತರು ಪತಿ, ಹಾಗೂ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರು ಇಲ್ಲಿನ ಮಹಿಳಾ ಸಮಾಜದ ನಿರ್ದೇಶಕರು ಎ.ಪಿ.ಸಿ.ಎಂ.ಎಸ್ ನಿಯಮಿತ ನಿರ್ದೇಶಕ ಕೊಡವ ಸಮಾಜದ ಪೊಮ್ಮಕ್ಕಡ ಒಕ್ಕೂಟದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಲೋಕ್ ಅದಾಲತ್: ದಾಖಲೆ ಪ್ರಮಾಣದ ಪ್ರಕರಣಗಳ ಇತ್ಯರ್ಥ



ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಜಿ. ಪ್ರಭಾವತಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ ಇದ್ದರು

ಚಾಮರಾಜನಗರ, ಜು. 15– ಈ ಬಾರಿಯ ಲೋಕ್ ಅದಾಲತ್‌ನಲ್ಲಿ ಲಕ್ಷಕ್ಕೂ ಅಧಿಕ ಪ್ರಕರಣಗಳನ್ನು ದಾಖಲೆ ಪ್ರಮಾಣದಲ್ಲಿ ಇತ್ಯರ್ಥಪಡಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಹೇಳಿದರು.

ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದ ಮೇರೆಗೆ ಸರ್ವರಿಗೂ ನ್ಯಾಯ ಒದಗಿಸುವ ಪರಿ ಕಲ್ಪನೆಯಡಿ ಜನಸಾಮಾನ್ಯರ ಅನುಕೂಲಕ್ಕಾಗಿ, ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವ ಸಲುವಾಗಿ ಜುಲೈ 12ರಂದು ಜಿಲ್ಲೆಯಾದ್ಯಂತ ಮೆಗಾ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿತ್ತು ಎಂದು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ವ್ಯಾಜ್ಯಪೂರ್ವ ಪರಿಹಾರ ಕೇಂದ್ರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನ್ಯಾಯಾಲಯದ ಪ್ರಕರಣಗಳಲ್ಲಿ ತಾಲೂಕಿನ 435, ಯಳಂದೂರು 783, ಕೊಳ್ಳೇಗಾಲ 1678 ಹಾಗೂ ಗುಂಡ್ಲುಪೇಟೆ 375 ಸೇರಿದಂತೆ ಒಟ್ಟು 3271 ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳಲ್ಲಿ ಚಾಮರಾಜನಗರ ತಾಲೂಕಿನ 64908, ಯಳಂದೂರು 9524, ಕೊಳ್ಳೇಗಾಲ 15232 ಹಾಗೂ ಗುಂಡ್ಲುಪೇಟೆ ತಾಲೂಕಿನ 8496 ಪ್ರಕರಣಗಳು ಸೇರಿದಂತೆ ಒಟ್ಟು 1,01,431 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ದಂಡ ಹಾಗೂ ಪರಿಹಾರ ರೂಪದಲ್ಲಿ ನ್ಯಾಯಾಲಯದ ಪ್ರಕರಣಗಳಲ್ಲಿ ರೂ. 7,51,31,120 ರೂ. ಮತ್ತು ವ್ಯಾಜ್ಯಪೂರ್ವ ಪ್ರಕರಣ ಗಳಿಂದ 8,64,22,883 ರೂ. ಗಳು ಸೇರಿದಂತೆ ಒಟ್ಟು 16,15,54,003 ರೂ.ಗಳನ್ನು ಸಂಗ್ರಹಿಸಲಾಗಿದೆ ಎಂದರು.

ಈ ಹಿಂದಿನ ಅದಾಲತ್‌ಗಳಿಗಿಂತ ಈ ಬಾರಿ ದಾಖಲೆಯ ಪ್ರಮಾಣದಲ್ಲಿ ಪ್ರಕರಣಗಳು ಇತ್ಯರ್ಥವಾಗಿರುವುದು ಹೆಮ್ಮೆಯ ಸಂಗತಿ. ಲೋಕ್ ಅದಾಲತ್ ಯಶಸ್ಸಿಗೆ ಜಿಲ್ಲಾ ಹಾಗೂ ತಾಲೂಕು ಕಾನೂನು ಸೇವಾ ಪ್ರಾಧಿಕಾರದೊಂದಿಗೆ ಸಹಕರಿಸಿದ ವಕೀಲರು, ಕಕ್ಷಿದಾರರು, ಜಿಲ್ಲೆಯ ಎಲ್ಲಾ ನ್ಯಾಯಾಧೀಶರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಕಾರ್ಮಿಕ, ಕಂದಾಯ, ಅಬಕಾರಿ, ತಂಬಾಕು ನಿಯಂತ್ರಣ ಘಟಕ, ಬ್ಯಾಂಕ್ ಅಧಿಕಾರಿಗಳು ಸೇರಿ ದಂತೆ ಎಲ್ಲರಿಗೂ ಅಭಿನಂದನೆ ತಿಳಿಸಿದರು.

ನ್ಯಾಯಾಲಯದಲ್ಲಿ ದಾಖಲಾಗುವ ಮೊದಲೇ ಹೆಚ್ಚಿನ ವ್ಯಾಜ್ಯಪೂರ್ವ ಪ್ರಕರಣಗಳನ್ನು ಅದಾಲತ್ ಮೂಲಕ ಇತ್ಯರ್ಥಪಡಿಸುವುದರಿಂದ ಜನರ ಅಮೂಲ್ಯ ಸಮಯ ಉಳಿತಾಯವಾಗಿ ಪ್ರಕರಣಗಳು ಬಗೆಹರಿದು ಪಕ್ಷಕಾರರಲ್ಲಿ ಬಾಂಧವ್ಯ ಉಂಟಾಗಲಿದೆ. ಒಬ್ಬರು ರಾಜಿಯಾದರೆ ಅದು ಮತ್ತೊಬ್ಬರಿಗೂ ಸ್ಪೂರ್ತಿ ಯಾಗಲಿದೆ. ರಾಜಿಯಾಗುವ ಮೊದಲು ಜನರ ಮನ ಪರಿವರ್ತನೆಯಾಗಬೇಕು ಎಂದ ಪ್ರಭಾವತಿ ವಿಚ್ಛೇದನಾ ಹಂತಕ್ಕೆ ಬಂದಿದ್ದ ನಾಲ್ಕು ಜೋಡಿಗಳನ್ನು ರಾಜಿ ಮೂಲಕ ಒಂದಾಗಿಸಿರುವುದು ಈ ಅದಾಲತ್‌ನ ವಿಶೇಷವಾಗಿದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ನಂಜಯ್ಯ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಡಿವೈಎಸ್ಪಿ ಮುಂದೆ ಕಲಾಂ ಸಂಸ್ಥೆಯಿಂದ ಮೋಸ ಹೋದವರ ಅಳಲು

ಕೊಳ್ಳೇಗಾಲ, ಜು.15– ನಾವು ಚಾಮರಾಜನಗರ ಡಿಡಿಪಿಐ ರಾಮಚಂದ್ರ ರಾಜೇ ಅರಸ್‌ರವರ ಆದೇಶ ನೋಡಿ, ನಮಗೆ ಸರ್ಕಾರಿ ಕೆಲಸ ಸಿಗುತ್ತೆ ಎಂದು ನಂಬಿ ನಾವು ಲಕ್ಷಾಂತರ ರೂ. ನೀಡಿದ್ದೆವು. ಕಲಾಂ ಸಂಸ್ಥೆಯ ಮೋಸದ ಜಾಲಕ್ಕೆ ಸಿಲುಕಿ ನಾವುಗಳು ಮೋಸ ಹೋಗಿದ್ದೇವೆ, ಅತ್ತ ಕೆಲಸವೂ ಇಲ್ಲ, ಕಳೆದ ಐದಾರು ತಿಂಗಳು ಮಾಡಿದ ಕೆಲಸಕ್ಕೆ ಸಂಬಳವೂ ಇಲ್ಲ, ನಾವು ನೀಡಿದ ಹಣ ಹಿಂತಿರುಗಿಸು ತ್ತಲೂ ಇಲ್ಲ, ಕೇಳಿದರೆ ಸಂಸ್ಥೆಯವರು ನಮಗೆ ಬೆದರಿಕೆ ಹಾಕುತ್ತಿದ್ದಾರೆ.ಹಾಗಾಗಿ ನಮಗೆ ನ್ಯಾಯ ದೊರಕಿಸಿಕೊಡಿ, ನಾವು ಕೆಲಸದ ಆಸೆಗಾಗಿ ಇವರನ್ನು ನಂಬಿ ನೀಡಿರುವ ಲಕ್ಷಾಂತರ ಹಣ ವಾಪಸ್ಸು ಕೊಡಿಸಿ ನಮಗೆ ನ್ಯಾಯ ಕೊಡಿಸಿ ಎಂದು ಕಲಾಂ ಸಂಸ್ಥೆಯಿಂದ ಮೋಸ ಹೋದ ಅರವತ್ತಕ್ಕೂ ಹೆಚ್ಚು ಮಂದಿ ಮಹಿಳಾ ಸಂತ್ರಸ್ಥರು ಡಿವೈಎಸ್ಪಿ ಧರ್ಮೇಂದ್ರ ಅವರ ಮುಂದೆ ತಮ್ಮ ಅಳಲು ತೋಡಿಕೊಂಡರು.

ಬೆಳಗ್ಗೆಯಿಂದಲೇ ಡಿವೈಎಸ್ಪಿ ಕಚೇರಿ ಮುಂದೆ ಸೇರಿದ ನೊಂದ ಸಂತ್ರಸ್ತರು ನಾವು ಕಲಾಂ ಸಂಸ್ಥೆಯ ಶ್ರೀಕಂಠ, ಕೃಷ್ಣ ಸೇರಿದಂತೆ ಹಲವರ ಮಾತಿಗೆ ಬೆರಗಾಗಿ, ಸರ್ಕಾರಿ ಕೆಲಸ ಸಿಗುತ್ತೆ ಎಂದು ನಂಬಿ ಮೋಸ ಹೋಗಿದ್ದೇವೆ, ಇದಕ್ಕೆ ಡಿಡಿಪಿಐ ಅವರು ನೀಡಿದ ಆದೇಶವೂ ಕಾರಣವಾಗಿದ್ದು ನೂರಾರು ಮಂದಿ 1ಲಕ್ಷದಿಂದ 2ಲಕ್ಷದ ತನಕ ನೀಡಿ ಮೋಸಹೋಗಿದ್ದೇವೆ, ಮೋಸ ಮಾಡಿದವರನ್ನು ಕರೆಸಿ ನಮಗೆ ನ್ಯಾಯ ದೊರಕಿಸಿಕೊಡಿ ಎಂದು ತಮ್ಮ ಅಳಲು ತೋಡಿಕೊಂಡರು.

ರೈತ ಹೋರಾಟಗಾರ ಅಣಗಳ್ಳಿ ಬಸವರಾಜು ಮಾತನಾಡಿ, 2 ಬಾರಿ ಪೊಲೀಸ್ ಠಾಣೆಗೆ ಬಂದು ನ್ಯಾಯ ಕೇಳಿದ್ದೇವೆ, ನಾವು ಸಂತ್ರಸ್ಥರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದರು. ಡಿವೈಎಸ್ಪಿ ಧರ್ಮೇಂದ್ರ ಮಾತನಾಡಿ, ಜು. 17ರ ಗುರುವಾರ ಈ ಪ್ರಕರಣದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಪದಾಧಿಕಾರಿಗಳನ್ನು ಕರೆಸಿ ನ್ಯಾಯ ದೊರಕಿಸಿಕೊಡುವುದಾಗಿ ಭರವಸೆ ಹಿನ್ನೆಲೆ ಸಂತ್ರಸ್ಥರು ವಾಪಸ್ಸಾದರು. ರಾಮಾಪುರ ಸೀಮಾ, ರಾಧಿ, ರಾಧ, ಅಂಜಲಿ ಸೇರಿದಂತೆ 60ಕ್ಕೂ ಅಧಿಕ ಮಂದಿ ಸಂತ್ರಸ್ಥರು ಹಾಜರಿದ್ದರು

ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಿ: ಶಾಸಕ ಎ.ಆರ್.ಕೃಷ್ಣಮೂರ್ತಿ



ಹಿತ್ತಲದೊಡ್ಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರಿಗೆ ಸೇಬಿನ ಹಾರ ಹಾಕಿ ಅಭಿನಂದಿಸಲಾಯಿತು.

ಕೊಳ್ಳೇಗಾಲ, ಜು.15– ನಾನು ಶಾಸಕನಾದ ಎರಡು ವರ್ಷದಲ್ಲಿ ಸಾಕಷ್ಟು ಅನುದಾನ ತಂದು ಶ್ರಮಿಸಿದ್ದೇನೆ, ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದ ಜನಪರ ಸರ್ಕಾರವಾಗಿದ್ದು, ಇಂದು ಹಲವಾರು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು ಎಂದು ಶಾಸಕ ಎ ಆರ್ ಕೃಷ್ಣಮೂರ್ತಿ ಹೇಳಿದರು

ಕೊಳ್ಳೇಗಾಲ ತಾಲೂಕಿನ ತಿಮ್ಮರಾಜಿಪುರ, ಸಿದ್ದಯ್ಯನಪುರ ಸೇರಿದಂತೆ ವಿವಿದೆಡೆ 1.22 ಕೋಟಿರೂಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ್ದೆ, ಎಲ್ಲಾ ಧರ್ಮಗಳ ಎಲ್ಲಾ ವರ್ಗಗಳ ಸಮುದಾಯಕ್ಕೂ ಅನುದಾನ ಹಂಚಿಕೆ ಮಾಡಿದ್ದೇನೆ

ತಾಲೂಕಿನ ಸಿದ್ದಯ್ಯನಪುರ ಗ್ರಾಮದಲ್ಲಿ 50ಲಕ್ಷ ವೆಚ್ಚದಲ್ಲಿ ಅರುಣೋದಯ ಚರ್ಚ್ ಸಮುದಾಯ ಭವನ ನಿರ್ಮಾಣದ ಮುಂದುವರೆದ ಕಾಮಗಾರಿ, ಗ್ರಾಮದ ಹೊಸ ಬಡಾವಣೆಯಲ್ಲಿ 6 ಲಕ್ಷ ವೆಚ್ಚದಲ್ಲಿ ಸಿ.ಸಿ ರಸ್ತೆ, 10ಲಕ್ಷ ಅನುದಾನದಡಿ ಕುರುಬರ ಬೀದಿಯಲ್ಲಿ ಸಿಸಿ ರಸ್ತೆ ಚರಂಡಿ ನಿರ್ಮಾಣ, ಲಕ್ಕರಸನಪಾಳ್ಯ ಗ್ರಾಮದಲ್ಲಿ 20 ಲಕ್ಷ ವೆಚ್ಚದಲ್ಲಿ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿ, ತಿಮ್ಮರಾಜೀಪುರ ಗ್ರಾಮದಲ್ಲಿ 10 ಲಕ್ಷ ವೆಚ್ಚದಲ್ಲಿ ರಸ್ತೆ ಕಾಮಗಾರಿ ಹಾಗೂ 20 ಲಕ್ಷ ವೆಚ್ಚದಲ್ಲಿ ಬಸವ ಭವನದ ಮುಂದುವರಿದ ಕಾಮಗಾರಿ ಮತ್ತು ಹಿತ್ತಲ ದೊಡ್ಡಿ ಗ್ರಾಮದಲ್ಲಿ 6 ಲಕ್ಷ ವೆಚ್ಚದ ರಸ್ತೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದ್ದು ಗುತ್ತಿಗೆದಾರರು ನಿಗದಿತ ಅವಧಿಯೊಳಗೆ ಕಾಮಗಾರಿ ಕೈಗೊಳ್ಳಬೇಕು ಎಂದು, ತಿಮ್ಮರಾಜಿಪುರ ಗ್ರಾಪಂನಲ್ಲಿ 4.20 ಕೋಟಿ ಅನುದಾನದಲ್ಲಿ ಕಾಮಗಾರಿ ಜರುಗುತ್ತಿದೆ ಎಂದರು.

ತಾಪಂಸಿಇಓ ಗುರುಶಾಂತಪ್ಪ ಬೆಳ್ಳುಂಡಗಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಜೇಂದ್ರ ಮೋಳೆ, ತಿಮ್ಮರಾಜೀಪುರ ಗ್ರಾ.ಪಂ ಅಧ್ಯಕ್ಷೆ ರಶ್ಮಿ, ಉಪಾಧ್ಯಕ್ಷೆ ಸಹನಾಪ್ರೀಯ, ಸಿದ್ದಯ್ಯನ ಪುರ ಗ್ರಾಮ ಅಧ್ಯಕ್ಷೆ ಶಾಂತಮ್ಮ, ತಿಮ್ಮ ರಾಜೀಪುರ ಗ್ರಾ.ಪಂ ಮಾಜಿ ಅಧ್ಯಕ್ಷ ರಾಜು, ಸದಸ್ಯ, ಪಿಡಿಓ ಶಿವಮೂರ್ತಿ ಇದ್ದರು

ಹಿತ್ತಲದೊಡ್ಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎಆರ್ ಕೃಷ್ಣ ಮೂರ್ತಿ ಅವರಿಗೆ ಸೇಬಿನ ಹಾರ ಹಾಕಿ ಅಭಿನಂದಿಸಲಾಯಿತು. ರಾಜು, ರಶ್ಮಿ ರಾಜು, ರಾಜೇಂದ್ರ , ತೋಟೇಶ್ ಇನ್ನಿತರಿದ್ದರು.

ಊರುಗೋಲು ಕಥಾ ಸಂಕಲನ ಬಿಡುಗಡೆ

ಕೊಳ್ಳೇಗಾಲ, ಜು.15– ಕವಿಯತ್ರಿ ಶ್ರೀಮತಿ ಕಾತ್ಯಾಯಿನಿ ಅವರ ಎರಡನೇ ಕೃತಿ ಊರುಗೋಲು ಕವನ ಸಂಕಲನ ನಿನ್ನೆ ಪಟ್ಟಣದ ಅರುಣಾಚಲೇಶ್ವರ ಸಭಾಂಗಣದಲ್ಲಿ ಬಿಡುಗಡೆಗೊಂಡಿತು.

ಎಚ್ ಕೆ ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಪ್ರೇಮಲತಾ ಕೃಷ್ಣಸ್ವಾಮಿ ಚಾಲನೆ ನೀಡಿ ವ್ಯಕ್ತಿಯ ಆಡು ಭಾಷೆಯಿಂದಲೇ ಕವಿತ್ವ ಸೃಷ್ಟಿಯಾಗಲಿದೆ, ಯಾವುದೇ ಕವಿಗೆ ಬರವಣಿಗೆಯ ಹಸಿವಿರಬೇಕು, ಹಾಗಾದಾಗ ಮಾತ್ರ ಸಾಹಿತ್ಯ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು

ಮೈಸೂರು ಆಕಾಶವಾಣಿಯ ನಿವೃತ್ತ ಅಧಿಕಾರಿ ರಮೇಶ್ ಮಾತನಾಡಿ ಪ್ರತಿಯೊಬ್ಬರೂ ಬರವಣಿಗೆಗೆ ಹೆಚ್ಚು ಒತ್ತು ನೀಡಿದರೆ ಸಾಹಿತ್ಯ ಕ್ಷೇತ್ರ ಉತ್ತುಂಗಕ್ಕೇರಲು ಸಹಕಾರಿಯಾಗಲಿದೆ ಸಾಹಿತ್ಯ ಎಂಬುದು ಅನುಭವದಿಂದ ಅರಳುವಂತಹದ್ದು. ಪ್ರತಿಯೊಬ್ಬ ಸಾಹಿತಿಗೂ ಬರವಣಿಗೆಯ ತುಡಿತ, ಮಿಡಿತವಿರಬೇಕು, ವ್ಯಕ್ತಿಯ ಜೀವನದಲ್ಲೂ ಸಾಹಿತ್ಯದ ಗಾಢ ಪ್ರಭಾವ ಇರಲಿದೆ. ಹೆಣ್ಣು ಅಡುಗೆ ಮನೆಯಿಂದಲೆ ತನ್ನ ಬರವಣಿಗೆ ಪ್ರಾರಂಭಿಸಬೇಕು, ಹಾಗಾದಾಲೇ ಉತ್ತಮ ಸಾಹಿತ್ಯ ಹೊರಹೊಮ್ಮಲು ಸಹಕಾರಿಯಾಗಲಿದೆ ಎಂದರು

ಸಾಹಿತ್ಯ ಮಿತ್ರಕೂಟದ ನಿಕಟಪೂರ್ವ ಅಧ್ಯಕ್ಷ ಮದ್ದೂರು ದೊರೆಸ್ವಾಮಿ ಮಾತನಾಡಿ, ಸಾಹಿತ್ಯವೆಂಬುದು ವಿರಾಟ ರೂಪವಿದ್ದಂತೆ, ಕಾತ್ಯಾಯಿನಿ ಹೊರ ತಂದಿರುವ ಕವನ ಸಂಕಲನ ಹೆಚ್ಚು ಓದುಗರನ್ನು ಆಕರ್ಷಿಸುವಂತಾಗಲಿ ಎಂದರು. ಹಿರಿಯ ಶಿಕ್ಷಕ ಚನ್ನ ಮಾದೇಗೌಡರು ಮಾತನಾಡಿದರು ಸಾಹಿತ್ಯ ಮಿತ್ರ ಕೂಟದ ಸಂಸ್ಥಾಪಕ ಅಧ್ಯಕ್ಷ ದೊಡ್ಡಲಿಂಗೇಗೌಡರು, ಮಿತ್ರ ಕೂಟ ಬಾಳಗುಣಸೆ ಮಂಜುನಾಥ್, ಸರ್ಕಾರಿ ನೌಕರರ ಸಂಘದ ನಿರ್ದೇಶಕ ಸತೀಶ್, ನಿಸರ್ಗ ವಿದ್ಯಾನಿಕೇತನ ವಿದ್ಯಾ ಸಂಸ್ಥೆಯ ಮುಖ್ಯ ಶಿಕ್ಷಕ ಶಂಕರ್, ರಿಜಾಯತ್ ಅಲಿ, ಸ್ವರ್ಣಲತಾ ಇನ್ನಿತರರಿದ್ದರು.



ಅರುಣಾಚಲೇಶ್ವರ ಸಭಾ ಭವನದಲ್ಲಿ ಊರುಗೋಲು ಕವನ ಸಂಕಲವನ್ನು ಪ್ರೇಮಲತಾ ಕೃಷ್ಣಸ್ವಾಮಿ ಬಿಡುಗಡೆಗೊಳಿಸಿದರು.

ಕೆ.ಎಂ. ನಾಗರಾಜು ನಿಧನಕ್ಕೆ ಶ್ರದ್ಧಾಂಜಲಿ



ದಸಂಸ ಜಿಲ್ಲಾ ಸಂಚಾಲಕ ಕೆ.ಎಂ. ನಾಗರಾಜು ನಿಧನಕ್ಕೆ ನಾಗರಿಕ ಹಿತರಕ್ಷಣಾ ಸಮಿತಿ ಶ್ರದ್ಧಾಂಜಲಿ ಸಲ್ಲಿಸಿತು


ಚಾಮರಾಜನಗರ, ಜು. 15– ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಕೆ.ಎಂ. ನಾಗರಾಜು ಅವರ ಅಕಾಲಿಕ ಮರಣವು ಸಮುದಾಯಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಬುದ್ಧ ನಗರ ನಾಗರೀಕ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಮಹದೇವಯ್ಯ ಕಂಬನಿ ಮಿಡಿದರು.

ನಗರದ ಬುದ್ಧ ನಗರದಲ್ಲಿ ನಾಗರೀಕ ಹಿತರಕ್ಷಣಾ ಸಮಿತಿಯ ವತಿಯಿಂದ ಸೋಮವಾರ ಸಂಜೆ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿ, ಕೆಎಂ. ನಾಗರಾಜು ಅವರು ಸ್ನೇಹ ಜೀವಿಯಾಗಿದ್ದು. ದಸಂಸ ಜಿಲ್ಲಾ ಸಂಚಾಲಕರಾಗಿ ಉತ್ತಮ ಸೇವೆ ಸಲ್ಲಿಸುವ ಜೊತೆಗೆ ಸಮಾಜದ ಯಾವುದೇ ಭಾಗದಲ್ಲಿ ಅನ್ಯಾಯವಾದರು ಮೊದಲಿಗರಾಗುತ್ತಿದ್ದರು. ಅಲ್ಲದೇ ಅಂಬೇಡ್ಕರ್ ಅವರ ಅನುಯಾಯಿಯಾಗಿದ್ದ ನಾಗರಾಜು ಅವರು ಅವರ ತತ್ವ ಸಿದ್ಧಾಂತಗಳನ್ನು ಅಳವಡಿಸಿ ಕೊಂಡು ಸಮಾಜದ ಏಳಿಗೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದರು ಎಂದರು.

ನಿವೃತ್ತ ಉಪ ನಿರ್ದೇಶಕ ಹಾಗೂ ಸಮಿತಿಯ ಗೌರವ ಅಧ್ಯಕ್ಷ ಮಂಜುನಾಥ ಪ್ರಸನ್ನ ಮಾತನಾಡಿ, ಸದಾ ನಗುಮುಖದ ಹಸನ್ಮುಖಿ ಕೆ.ಎಂ. ನಾಗರಾಜು ಅವರ ಚಿಂತನೆಗಳನ್ನು ಎಲ್ಲರೂ ಮೈಗೂಡಿಸಿಕೊಂಡು ಸಮಾಜದ ಅಭಿವೃದ್ಧಿಗೆ ದುಡಿಯೋಣ ಎಂದರು.

ಸಭೆಯಲ್ಲಿ ಸಾಹಿತಿ ದೊಡ್ಡರಾಯ ಪೇಟೆ ಸಿದ್ದರಾಜು, ಮುಖಂಡರಾದ ಶಿವಣ್ಣ, ಶಂಕರಪ್ಪ, ಗಜೇಂದ್ರ, ಲೋಕೇಶ್, ಶಿವರಾಜು, ನಾಗಣ್ಣ, ಬಸವರಾಜು, ನಂಜಪ್ಪ, ನಾಗಬಸವಣ್ಣ, ನಟರಾಜು, ರವಿ ಪ್ರಸಾದ್, ಮಹದೇವಸ್ವಾಮಿ, ಬಸವಣ್ಣ, ನಾಗರಾಜು, ಕೃಷ್ಣಮೂರ್ತಿ ಮೊದಲಾದವರು ಇದ್ದರು.

ತೊಂಡವಾಡಿಯಲ್ಲಿ ನಡೆದ ಶ್ರೀ ಪುರದ ಮಾರಮ್ಮನವರ ಪೂಜಾ ಮಹೋತ್ಸವ



ಬೇಗೂರು, ಜು.15– ಇಲ್ಲಿಗೆ ಸಮೀಪದ ತೊಂಡವಾಡಿ ಗ್ರಾಮದಲ್ಲಿ ಸೋಮವಾರ ಶ್ರೀ ಪುರದ ಮಾರಮ್ಮನವರ ಪೂಜಾ ಮಹೋತ್ಸವ ಹಾಗೂ ಆರಾಧನಾ ಕಾರ್ಯಕ್ರಮಗಳು ವಿಜೃಂಭಣೆಯಿಂದ ನೆರವೇರಿತು.

ಬೆಳಿಗ್ಗೆ ಗೋಧೂಳಿ ಲಗ್ನದಲ್ಲಿ ಅಮ್ಮನವರಿಗೆ ಪುಣ್ಯಾಹ ಗಂಗಾಪೂಜೆ, ಗಣಪತಿ ಪೂಜೆ, ಅಭಿಷೇಕ, ನವಗ್ರಹ ಹೋಮಗಳು ಸಾಂಗವಾಗಿ ನಡೆದವು. ಮಂಗಳವಾರ ಬೆಳಿಗ್ಗೆ ದುರ್ಗಹೋಮ, ಕುಂಕುಮಾರ್ಚನೆ ಮಹಾಮಂಗಳಾರತಿ ನಡೆದು ಮಹಾ ಅನ್ನಸಂತರ್ಪಣೆಗಳು ನಡೆಯಿತು.

ಲಕ್ಷ ರೂ. ಸಂಬಳದ ಕೆಲಸ ಬಿಟ್ಟು ಕಳ್ಳತನಕ್ಕೆ ಇಳಿದ ಕೊಡಗಿನ ಬಿ.ಟೆಕ್ ಪದವೀಧರ



ಬೆಂಗಳೂರು, ಜು.15– ಖಾಸಗಿ ಕಂಪೆನಿಯಲ್ಲಿ ಲಕ್ಷ ರೂ. ಸಂಬಳವಿದ್ದ ಕೆಲಸವನ್ನು ಬಿಟ್ಟು ಕಳ್ಳತನಕ್ಕಿಳಿದಿದ್ದ ಕೊಡಗಿನ ಬಿ.ಟೆಕ್ ಪದವೀಧ'ರ'ನನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದಾರೆ.

ವಿರಾಜಪೇಟೆಯ ನೆಹರೂ ನಗರದ ನಿವಾಸಿ ರಿಚರ್ಡ್(25) ಬೆಂಗಳೂರಿನ ಖಾಸಗಿ ಕಾಲೇಜಿನಲ್ಲಿ ಬಿ.ಟೆಕ್ ಪದವಿ ಪಡೆದಿದ್ದ. ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಆತನಿಗೆ 1 ಲಕ್ಷ ಸಂಬಳವಿತ್ತು. ಆದರೆ, ಮೋಜಿನ ಜೀವನ ನಡೆಸಲು ಈತ ಕೆಲಸ ಬಿಟ್ಟು ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಗ್ರಾಹಕರ ಸೋಗಿನಲ್ಲಿ ಚಿನ್ನಾಭರಣ ಮಳಿಗೆಗಳಿಗೆ ತೆರಳಿ ಮಾಲೀಕರ ಗಮನ ಬೇರೆಡೆ ಸೆಳೆದು ಚಿನ್ನಾಭರಣ ಕಳವು ಮಾಡುತ್ತಿದ್ದ ರಿಚರ್ಡ್‌ನನ್ನು ಬೆಂಗಳೂರಿನ ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿ, 13 ಲಕ್ಷ ಮೌಲ್ಯದ 134 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದಿದ್ದಾರೆ.

ಬ್ರ್ಯಾಂಡೆಡ್ ವಸ್ತುಗಳ ಖರೀದಿ ವ್ಯಾಮೋಹಕ್ಕೆ ಬಿದ್ದು ಅಡ್ಡದಾರಿ ತುಳಿದಿದ್ದ ಈತ ಸುಲಭವಾಗಿ ಹಣ ಗಳಿಸಲು ಹಾಗೂ ಮೋಜಿನ ಜೀವನ ನಡೆಸಲು ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದರು.

ಗ್ರಾಹಕನ ಸೋಗಿನಲ್ಲಿ ಭದ್ರತಾ ಸಿಬ್ಬಂದಿಗಳಿಲ್ಲದ ಚಿನ್ನಾಭರಣ ಅಂಗಡಿಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದ ಈತ ಆಭರಣ ಖರೀದಿ ನೆಪದಲ್ಲಿ ತರಹೇವಾರಿ ವಿನ್ಯಾಸ ವಿರುವ ಚಿನ್ನಾಭರಣಗಳನ್ನು ತೋರಿಸುವಂತೆ ಸಿಬ್ಬಂದಿಗೆ ಹೇಳುತ್ತಿದ್ದ. ಬಳಿಕ ಸಿಬ್ಬಂದಿಯ ಗಮನವನ್ನು ಬೇರೆಡೆ ಸೆಳೆದು ಕಳ್ಳತನ ಮಾಡುತ್ತಿದ್ದ. ಆರೋಪಿಯ ವಿರುದ್ಧ ಕೇರಳದ ಕೋಟಯಂ ಸೇರಿದಂತೆ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ 9 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

ಶಾಲಾ ಶಿಕ್ಷಣ ಇಲಾಖೆಯಿಂದ ಪ್ರತಿಭಾ ಕಾರಂಜಿ, ಕಲೋತ್ಸವ ಕಾರ್ಯಕ್ರಮದ ವೇಳಾಪಟ್ಟಿ ಬಿಡುಗಡೆ


ಮೈಸೂರು, ಜು.15(ಎಸ್‌ಪಿಎನ್)– 2025–26ನೇ ಸಾಲಿನ ಪ್ರತಿಭಾ ಕಾರಂಜಿ, ಕಲೋತ್ಸವ ಕಾರ್ಯಕ್ರಮಗಳನ್ನು 2025ರ ಡಿ.15ರೊಳಗೆ ತಾಲೂಕು, ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ಆಯೋಜಿಸಲು ಶಾಲಾ ಶಿಕ್ಷಣ ಇಲಾಖೆ ವೇಳಾಪಟ್ಟಿಯನ್ನು ಮಂಗಳವಾರ ಬಿಡುಗಡೆಗೊಳಿಸಿದೆ. 2025ರ ಅ.10ರಿಂದ ಅ.25ರವರೆಗೆ ಕ್ಲಸ್ಟರ್ ಹಂತ, ಅ.27ರಿಂದ ನ.10ರವರೆಗೆ ತಾಲೂಕು ಹಂತ, ನ.11ರಿಂದ ನ.30ರವರೆಗೆ ಜಿಲ್ಲಾ ಹಂತ ಹಾಗೂ ಡಿ.15ರೊಳಗೆ ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವಗಳನ್ನು ಆಯೋಜಿಸುವಂತೆ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನ ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲಾ ಡಿಡಿಪಿಐ(ಆಡಳಿತ) ಅವರಿಗೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿಯ ನಿರ್ದೇಶಕ(ಮೈನಾರಿಟಿ)ರು ಸುತ್ತೋಲೆಯಲ್ಲಿ ಮಂಗಳವಾರ ತಿಳಿಸಿದ್ದಾರೆ.

ನಕಲಿ ವೈದ್ಯರ ವಿರುದ್ಧ ಸಮರ

ಮೈಸೂರು ಜಿಲ್ಲೆಯ 12 ಕ್ಲಿನಿಕ್ ಬಂದ್

- ಕೆಪಿಎಂಇ ಕಾಯ್ದೆಯಡಿ ನೋಂದಣಿ ಕಡ್ಡಾಯ
- ತಪ್ಪಿದಲ್ಲಿ 50,000 ದಿಂದ 1 ಲಕ್ಷದವರೆಗೆ ದಂಡ
- ಆಯುರ್ವೇದ, ಹೋಮಿಯೋಪತಿ ಪದವಿ ಪಡೆದು ಅಲೋಪತಿ ಚಿಕಿತ್ಸೆ





ಯಾವುದೇ ವೈದ್ಯಕೀಯ ಪದವಿ ಪಡೆಯದೆ ಚಿಕಿತ್ಸೆ ನೀಡುತ್ತಿದ್ದ ತಿ.ನರಸೀಪುರದ ಅಕ್ರಮ ಕ್ಲಿನಿಕ್‌ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಬೀಗ ಜಡಿದಿದ್ದಾರೆ.

ನಕಲಿ ವೈದ್ಯರ ವಿರುದ್ಧದ ಕಾರ್ಯಾಚರಣೆ ಇಷ್ಟಕ್ಕೆ ನಿಂತಿಲ್ಲ

ಜನರ ಆರೋಗ್ಯದ ಜೊತೆ ಚೆಲ್ಲಾಟವಾಡುವ ನಕಲಿ ವೈದ್ಯರ ವಿರುದ್ಧ ಕೈಗೊಂಡಿರುವ ಕಾರ್ಯಾಚರಣೆ ಮುಂದುವರೆದಿದ್ದು, ಜಿಲ್ಲಾ ಹಾಗೂ ತಾಲೂಕು ಮಟ್ಟದ ವೈದ್ಯರಿಗೆ ದೂರುಗಳು ಬಂದರೆ ಕ್ಷಿಪ್ರ ಕ್ರಮ ಕೈಗೊಳ್ಳಲಾಗುವುದು.

ಇತ್ತೀಚಿಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಕುಂದುಕೊರತೆ ನಿವಾರಣಾ ಸಭೆಯಲ್ಲಿ ಈ ವಿಚಾರದ ಚರ್ಚೆ ನಡೆಯಿತು. ಮತ್ತಷ್ಟು ಕಾರ್ಯಾಚರಣೆ ಮೂಲಕ ಜಿಲ್ಲೆಯನ್ನು ನಕಲಿ ವೈದ್ಯರ ಮುಕ್ತ ಮಾಡಬೇಕೆಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಸೂಚನೆ ನೀಡಿದ್ದಾರೆ.

ಪ್ರತಿಯೊಂದು ಆಸ್ಪತ್ರೆ ಮತ್ತು ವೈದ್ಯರ ಕ್ಲಿನಿಕ್‌ಗಳು ಕೆಪಿಎಂಇ ಕಾಯ್ದೆಯನ್ವಯ ನೋಂದಣಿ ಮಾಡಿಸಿಕೊಳ್ಳುವುದನ್ನು ಕಡ್ಡಾಯ ಮಾಡಿ. ಯಾವುದಾದರೂ ಆಸ್ಪತ್ರೆ ಅಥವಾ ವೈದ್ಯರ ಕ್ಲಿನಿಕ್ ಬಿಟ್ಟು ಹೋಗಿದ್ದರೆ ಪರಿಶೀಲಿಸಿ ನೋಂದಣಿ ಮಾಡಲಾಗುವುದು.

- **ಡಾ.ಗೋಪಿನಾಥ್,** ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಹಾಗೂ ಕೆಪಿಎಂಇ ನೋಡೆಲ್ ಅಧಿಕಾರಿ

ಮೈಸೂರು, ಜು.15(ಬಿಎಲ್‌ಯು)– ಯಾವುದೇ ಅಧಿಕೃತವಾದ ವೈದ್ಯಕೀಯ ಪದವಿ ಪಡೆಯದೆಯೂ ಜನರಿಗೆ ಚಿಕಿತ್ಸೆ ನೀಡುತ್ತಿದ್ದ ನಕಲಿ ವೈದ್ಯರ ವಿರುದ್ಧ ಸಮರ ಸಾರಿರುವ ಮೈಸೂರು ಜಿಲ್ಲಾಡಳಿತ 12 ಅಕ್ರಮ ಕ್ಲಿನಿಕ್‌ಗಳ ಬಂದ್ ಮಾಡಿದೆ. ಈ ಮೂಲಕ ನಕಲಿ ವೈದ್ಯರಿಗೆ ಬಿಸಿ ಮುಟ್ಟಿಸಿದೆ.

ಎಂಬಿಬಿಎಸ್ ಸೇರಿದಂತೆ ಉನ್ನತ ವೈದ್ಯಕೀಯ ಪದವಿ ಪಡೆದಿರುವ ವೈದ್ಯರು ರೋಗಿಗಳಿಗೆ ನೀಡುವ ಚಿಕಿತ್ಸೆಯೇ ಕೆಲವು ಬಾರಿ ಎಡವಟ್ಟು ಆಗುತ್ತದೆ. ವೈದ್ಯರ ನಿರ್ಲಕ್ಷ್ಯದಿಂದ ರೋಗಿ ಸಾವನ್ನಪ್ಪಿದ ಸಂಬಂಧ ಆಗಾಗ ಸಂಬಂಧಿಕರು ಪ್ರತಿಭಟನೆ ನಡೆಸುವ ಪ್ರಕರಣಗಳು ವರದಿ ಆಗುತ್ತಲೇ ಇವೆ.

ಕೆಲವು ರೋಗಗಳಿಗೆ ಚಿಕಿತ್ಸೆ ನೀಡುವುದು ವೈದ್ಯಕೀಯ ಪದವಿ ಪಡೆದ ವೈದ್ಯರಿಗೆ ಸವಾಲಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಯಾವುದೇ ವೈದ್ಯಕೀಯ ಪದವಿ ಪಡೆಯದ ಅರ್ಥಾತ್ ನಕಲಿ ವೈದ್ಯರು ರೋಗಿಗಳಿಗೆ ಚಿಕಿತ್ಸೆ ನೀಡುವುದು, ಇದರಿಂದ ರೋಗಿಗಳು ಸಾವನ್ನಪ್ಪಿರುವ ಬಹಳಷ್ಟು ನಿದರ್ಶನಗಳಿವೆ.

ಹೀಗೆ ಜನರ ಆರೋಗ್ಯದ ಜೊತೆ ಚೆಲ್ಲಾಟವಾಡುವ ನಕಲಿ ವೈದ್ಯರ ವಿರುದ್ಧ ಮೈಸೂರು ಜಿಲ್ಲಾಡಳಿತ ಸದ್ಯ ಕಾರ್ಯಾಚರಣೆ ಆರಂಭಿಸಿದೆ. ಇದಕ್ಕಾಗಿ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ವೈದ್ಯರ ತಂಡವನ್ನು ನಿಯೋಜನೆ ಮಾಡಿತ್ತು.

ಆಸ್ಪತ್ರೆ ಮತ್ತು ಕ್ಲಿನಿಕ್‌ಗಳಿಗೆ ಭೇಟಿ ನೀಡಿದ್ದ ವೈದ್ಯರ ತಂಡ ಕೆಪಿಎಂಇ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳು) ಕಾಯ್ದೆಯನ್ವಯ ನೋಂದಣಿಯಾಗಿದೆಯೇ ಇಲ್ಲವೇ ಎಂದು ಪರಿಶೀಲನೆ ನಡೆಸುತ್ತಿದೆ. ಮೈಸೂರು ಜಿಲ್ಲೆಯಲ್ಲಿ 1,480 ಆಸ್ಪತ್ರೆ ಹಾಗೂ ಕ್ಲಿನಿಕ್‌ಗಳು ಕೆಪಿಎಂಇ ಕಾಯ್ದೆಯನ್ವಯ ನೋಂದಣಿಯಾಗಿವೆ.

ಇದನ್ನು ಹೊರತುಪಡಿಸಿ ನಕಲಿ ವೈದ್ಯರ ಪತ್ತೆಗೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ವೈದ್ಯರ ತಂಡ ಕಾರ್ಯಾಚರಣೆ ನಡೆಸಿ ಯಾವ ವೈದ್ಯಕೀಯ ಪದವಿ ಪಡೆಯದೆಯೂ ಜನರಿಗೆ ಚಿಕಿತ್ಸೆ ನೀಡುತ್ತಿದ್ದ ನಕಲಿ ಕ್ಲಿನಿಕ್‌ಗಳ ಪತ್ತೆ ಮಾಡಿತ್ತು.

ನಕಲಿ ವೈದ್ಯರು ಚಿಕಿತ್ಸೆ ನೀಡುತ್ತಿದ್ದ 12 ಕ್ಲಿನಿಕ್‌ಗಳ ಬಂದ್ ಮಾಡಲಾಗಿದೆ. ಇದರಲ್ಲಿ ತಿ.ನರಸೀಪುರ ಹಾಗೂ ಪಿರಿಯಾಪಟ್ಟಣದ ಎರಡು ಕ್ಲಿನಿಕ್‌ಗಳ ವೈದ್ಯರು ನಾವು ಕೈಗೊಂಡ ಕ್ರಮ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದು, ವಿಚಾರಣೆ ನಡೆಯುತ್ತಿದೆ. ಮತ್ತೆರಡು ವೈದ್ಯಕೀಯ ಚಿಕಿತ್ಸಾಲಯಗಳ ವೈದ್ಯರ ಪದವಿ ನಕಲಿಯೋ ಅಥವಾ ಅಸಲಿಯೋ ಎಂಬುದನ್ನು ದಾಖಲಾತಿ ಸಮೇತ ಸ್ಪಷ್ಟಪಡಿಸುವಂತೆ ಆಯುಷ್ ಬೋರ್ಡ್‌ಗೆ ಪತ್ರ ಬರೆಯಲಾಗಿದ್ದು, ಇನ್ನು ಅಲ್ಲಿಂದ ಪ್ರತಿಕ್ರಿಯೆ ಬಂದಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಗೋಪಿನಾಥ್ ತಿಳಿಸಿದ್ದಾರೆ.

ಆಯುರ್ವೇದ ಹಾಗೂ ಹೋಮಿಯೋಪತಿ ಪದವಿ ಪಡೆದ ವೈದ್ಯರು ತಮ್ಮ ವ್ಯಾಪ್ತಿ ಬಿಟ್ಟು ಅಲೋಪತಿ ಔಷಧಿ ನೀಡುತ್ತಿದ್ದರು. ಇಂತಹ ವೈದ್ಯರಿಗೆ 50 ಸಾವಿರದಿಂದ 1 ಲಕ್ಷದವರೆಗೆ ದಂಡ ವಿಧಿಸಿರುವ ಆರೋಗ್ಯ ಇಲಾಖೆ, ಮುಂದೆ ಇಂತಹ ಚಿಕಿತ್ಸೆ ನೀಡದಂತೆ ಎಚ್ಚರಿಕೆ ನೀಡಿದೆ. ಮತ್ತೆ ಇದೇ ತಪ್ಪು ಮಾಡಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಕುಡಿಯಲು ಹಣ ಕೊಡದ್ದಕ್ಕೆ ಸಹೋದರಿಯ ಹಸುಗೂಸು ಹತ್ಯೆ; ಅಪರಾಧಿಗೆ ಜೀವಾವಧಿ ಶಿಕ್ಷೆ

ಕ್ರೈಂ ಬಾಕ್ಸ್

ಮೈಸೂರು, ಜು.15– ಕುಡಿಯಲು ಹಣ ನೀಡಲಿಲ್ಲ ಎಂದು ತಂಗಿಯ ಮೇಲೆ ಹಲ್ಲೆ ನಡೆಸಿ, ಆಕೆಯ ಪುಟ್ಟ ಕಂದಮ್ಮನನ್ನು ಅಮಾನುಷವಾಗಿ ಹತ್ಯೆ ಮಾಡಿದ್ದ ಕ್ರೂರಿಗೆ ಮೈಸೂರಿನ 6ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ನಗರದ ಕನಕಗಿರಿ 5ನೇ ಕ್ರಾಸ್ ನಿವಾಸಿ ಸಿದ್ದಮ್ಮ ಅವರ ಪುತ್ರ ಕೆ.ರಾಜುಗೆ ಶಿಕ್ಷೆ ವಿಧಿಸಲಾಗಿದೆ. ಮದ್ಯ ವ್ಯಸನಿಯಾಗಿದ್ದ ಈತ ಕುಡಿಯಲು ಹಣ ನೀಡಲಿಲ್ಲ ಎಂದು ಬಾಣಂತನಕ್ಕೆ ಬಂದಿದ್ದ ಸಹೋದರಿ ರಮ್ಯಾ ಅವರ ಮಗುವನ್ನು ಹತ್ಯೆ ಮಾಡಿದ್ದ.

ತರಕಾರಿ ಮಾರಿ ಜೀವನ ನಡೆಸುತ್ತಿದ್ದ ಸಿದ್ದಮ್ಮ ಮಕ್ಕಳಾದ ಕೆ.ರಾಜು ಹಾಗೂ ರಮ್ಯಾ ಜೊತೆ ನೆಲೆಸಿದ್ದರು. 2020ರ ಮಾರ್ಚ್ 15ರಂದು ರಮ್ಯಾ ಅವರ ವಿವಾಹವಾಗಿತ್ತು. 2021ರ ಸೆಪ್ಟೆಂಬರ್‌ನಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದ ರಮ್ಯಾ, ಬಾಣಂತನಕ್ಕೆ ತಾಯಿ ಮನೆಗೆ ಬಂದಿದ್ದರು. ಆದರೆ ರಾಜು ತರಕಾರಿ ವ್ಯಾಪಾರಕ್ಕೂ ಹೋಗದೆ ಯಾವಾಗಲೂ ಕುಡಿದು ಬಂದು ತಾಯಿ ಹಾಗೂ ತಂಗಿ ಜೊತೆ ಗಲಾಟೆ ಮಾಡುತ್ತಿದ್ದ. ಹಣ ಕೊಡದಿದ್ದರೆ ಇಬ್ಬರಿಗೂ ಹೊಡೆದು–ಬಡಿದು ಹಿಂಸಿಸುವುದಲ್ಲದೆ ಕೊಲೆ ಬೆದರಿಕೆ ಹಾಕುತ್ತಿದ್ದ. ಮನೆಯಲ್ಲಿ ಕೈಗೆ ಸಿಕ್ಕ ವಸ್ತುಗಳನ್ನು ಒಡೆದು ಹಾಕಿ, ಬೆಂಕಿ ಹಚ್ಚುವುದಾಗಿ ಹೆದರಿಸಿ, ಹಿಂಸಿಸುತ್ತಿದ್ದ. ಗಲಾಟೆಯಾದಾಗಲೆಲ್ಲಾ ರಮ್ಯಾ ಅಣ್ಣನಿಗೆ ಬುದ್ಧಿವಾದ ಹೇಳುವ ಪ್ರಯತ್ನ ಮಾಡುತ್ತಿದ್ದರು.

ಆದರೆ ಯಾರ ಮಾತಿಗೂ ಕಿವಿಗೊಡದ ರಾಜು, ತಾಯಿ ಹಾಗೂ ತಂಗಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ಮುಂದುವರೆಸಿದ್ದ. 2022ರ ಏಪ್ರಿಲ್ 29ರಂದು ಬೆಳಗ್ಗೆ ಕುಡಿಯಲು ಹಣ ಕೇಳಿದಾಗ ರಮ್ಯಾ ನಿರಾಕರಿಸಿದ್ದರು. ಇದರಿಂದ ರೊಚ್ಚಿಗೆದ್ದ ರಾಜು, ಹಣ ಕೊಡದಿದ್ದರೆ ನಿನ್ನ ಮಗುವನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಸಿದ್ದ. ಕುಡಿದು ಆರೋಗ್ಯ ಹಾಳು ಮಾಡಿಕೊಳ್ಳಬೇಡ, ನನ್ನ ಬಳಿ ಹಣ ಇಲ್ಲ ಎಂದು ಹೇಳಿದ ತಂಗಿಗೆ ಹೊಡೆಯಲಾರಂಭಿಸಿದ. ಹೊಡೆತ ತಾಳಲಾರದೆ ರಮ್ಯಾ, ನೆರೆಹೊರೆಯವರನ್ನು ರಕ್ಷಣೆಗೆ ಕರೆಯಲೆಂದು ಮನೆಯಿಂದ ಹೊರ ಬಂದಿದ್ದರು. ಅಷ್ಟರಲ್ಲಿ ಬಾಗಿಲು ಚಿಲಕ ಹಾಕಿದ ರಾಜು, ಟಿವಿಯನ್ನ ಒಡೆದು ಹಾಕಿ ರಾದ್ಧಾಂತ ಮಾಡಿದ್ದ. ಅಷ್ಟಕ್ಕೆ ಸುಮ್ಮನಾಗದ ಪಾಪಿ, ತೊಟ್ಟಿಲಲ್ಲಿದ್ದ ಪುಟ್ಟ ಕಂದಮ್ಮನಿಗೆ ತಕ್ಕಡಿ ಹಾಗೂ ತೂಕದ ಬಟ್‌ನಿಂದ ಮನಸ್ಸೋಇಚ್ಛೆ ಹೊಡೆದಿದ್ದ. ತಲೆ, ಮುಖ, ಎದೆ, ಬೆನ್ನಿಗೆ ಹೊಡೆದು ಮಗುವನ್ನು ಅಮಾನುಷವಾಗಿ ಹತ್ಯೆ ಮಾಡಿದ್ದ.

ಈ ಸಂಬಂಧ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಇನ್ಸ್‌ಪೆಕ್ಟರ್ ಜೆ.ಸಿ.ರಾಜು, ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 6ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ವಿ.ಹೆಚ್.ದಯಾನಂದ ಅವರು, ರಾಜು ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆತನಿಗೆ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ, ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಎಂ.ಕಾಮಾಕ್ಷಿ ವಾದ ಮಂಡಿಸಿದ್ದರು.

ಚಾಮಯ್ಯ ಮೇಷ್ಟ್ರು–ಕೆ.ಎಸ್.ಅಶ್ವತ್ಥ್ ಜನ್ಮ ಶತಾಬ್ಧಿ' ಮೈಸೂರಿನ ಗಾಯಕರಿಂದ ಗೀತ ನಮನ



ಚಾಮಯ್ಯ ಮೇಷ್ಟ್ರು–ಕೆ.ಎಸ್.ಅಶ್ವತ್ಥ್ ಜನ್ಮ ಶತಾಬ್ಧಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಶಂಕರ್ ಅಶ್ವತ್ಥ್ ದಂಪತಿ ಪುಷ್ಪನಮನ ಸಲ್ಲಿಸಿದರು.

ಮೈಸೂರು, ಜು.15– ಕರ್ನಾಟಕ ಸುಗಮ ಸಂಗೀತ ಪರಿಷತ್ ವತಿಯಿಂದ ಮೈಸೂರಿನ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ 'ಚಾಮಯ್ಯ ಮೇಷ್ಟ್ರು–ಕೆ.ಎಸ್.ಅಶ್ವತ್ಥ್ ಜನ್ಮ ಶತಾಬ್ಧಿ' ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಅಶ್ವತ್ಥ್ ಅವರ ಪುತ್ರ, ಚಲನಚಿತ್ರ ಹಾಗೂ ಕಿರುತೆರೆ ನಟ ಶಂಕರ್ ಅಶ್ವತ್ಥ್ ಅವರ ನಿರೂಪಣೆಯಲ್ಲಿ ಮೈಸೂರಿನ ಗಾಯಕರು ಗೀತ ನಮನ ಸಲ್ಲಿಸಿದರು. ಅಶ್ವತ್ಥ್ ಅವರಿಗೆ ಇಷ್ಟವಾದ ಸುಮಾರು 33 ಹಾಡುಗಳ ಹಿನ್ನೆಲೆಯನ್ನು ಶಂಕರ್ ಅಶ್ವತ್ಥ್ ವಿವರಿಸಿದರು. ಈ ವೇಳೆ ಅಶ್ವತ್ಥ್ ಅವರ ಹಳೆಯ ಫೋಟೋ ಮತ್ತು ಸಿನಿಮಾ ತುಣುಕುಗಳನ್ನು ಪ್ರದರ್ಶಿಸಲಾಯಿತು.

ಕಾರ್ಯಕ್ರಮದಲ್ಲಿ ಗಾಯಕರಾದ ಎ.ಡಿ.ಶ್ರೀನಿವಾಸ್, ಕೃಷ್ಣಮೂರ್ತಿ, ಇಂದ್ರಾಣಿ ಅನಂತರಾಮ್, ರಶ್ಮಿ ಚಿಕ್ಕಮಗಳೂರು, ಶಾಹಿದ್, ಜಯರಾಮ್, ಡೇವಿಡ್, ಎನ್.ಬೆಟ್ಟೇಗೌಡ, ಡಾ.ವೈ.ಡಿ.ರಾಜಣ್ಣ, ಶ್ರೀಕಾಂತರಾವ್, ಶ್ರೀಧರ್, ರವಿರಾಜ್ ಹಾಸು, ಡಾ.ಪೂರ್ಣಿಮಾ, ಶ್ರೀಲತಾ, ಸಿ.ಎಸ್.ವಾಣಿ, ವೇದಶ್ರೀ, ಗೀತಲಕ್ಷ್ಮೀ ಕಿಣಿ, ಅಬ್ದುಲ್, ನಾಗೇಂದ್ರ, ರಮೇಶ್, ಅಮೃತೇಶ್, ಶ್ರೀಕಂಠರಾವ್, ಕೃಷ್ಣಮೂರ್ತಿ, ಶ್ರೀಧರ್, ಹೆಚ್.ವಿ.ನಾಗೇಂದ್ರ ಮತ್ತಿತರರು ಗಾಯನ ಪ್ರಸ್ತುತಪಡಿಸಿದರು.

ನೆನಪಿನ ಬುತ್ತಿ: ಈ ವೇಳೆ ಶಂಕರ್ ಅಶ್ವತ್ಥ್ ಅವರು ತಮ್ಮ ತಂದೆ ಚಿತ್ರರಂಗಕ್ಕೆ ಪ್ರವೇಶ ಮಾಡಿದ ದಿನಗಳಿಂದ ಹಿಡಿದು ಜೀವಿತದ ಕೊನೆಯವರೆಗೆ ನಡೆದ ಘಟನೆಗಳು, ನಡೆದುಕೊಂಡ ರೀತಿ, ಟಾಂಗಾ, ಬಸ್ಸು, ರೈಲಿನಲ್ಲಿಯೇ ಓಡಾಡುತ್ತಿದ್ದುದು ಸೇರಿದಂತೆ ಹಲವು ಸ್ವಾರಸ್ಯಕರ ಪ್ರಸಂಗಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು. ಅವರ ನೆನಪಿನ ಶಕ್ತಿಗೆ ಸಭಿಕರು ಕರತಾಡನದ ಮೂಲಕ ಮೆಚ್ಚುಗೆ ಸೂಚಿಸಿದಾಗ, ಶಂಕರ್ ಪರದೆಯ ಮೇಲಿದ್ದ ತಮ್ಮ ತಂದೆಯ ಭಾವಚಿತ್ರದತ್ತ ಕೈಮಾಡಿ ತೋರಿಸಿ, ಎಲ್ಲಾ ಅವರು ಕೊಟ್ಟಿದ್ದು ಎಂದು ಭಾವುಕರಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ರಂಗಕರ್ಮಿ ರಾಜಶೇಖರ ಕದಂಬ, ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಮಂಡ್ಯ ಸತ್ಯ, ಅಲಯನ್ಸ್ ಸಹಾಯಕ ರಾಜ್ಯಪಾಲ ಸಂತೋಷ್ ಕುಮಾರ್, ರಂಗನಾಥ್ ಮೈಸೂರು, ವಿಜಯವಿಠಲ ಕಾಲೇಜಿನ ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಬೈರಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಎನ್.ಬೆಟ್ಟೇಗೌಡ, ಸುಧಾ ಶಂಕರ್ ಅಶ್ವತ್ಥ್ ಮತ್ತಿತರರು ಪಾಲ್ಗೊಂಡಿದ್ದರು.

ಕೆಜಿ ಕೊಪ್ಪಲಲ್ಲಿ ವಿಜೃಂಭಣೆಯ ಚಾಮುಂಡೇಶ್ವರಿ ಹಬ್ಬ ; ಉತ್ಸವಮೂರ್ತಿ ಅದ್ಧೂರಿ ಮೆರವಣಿಗೆ

ಸಹಸ್ರಾರು ಭಕ್ತರಿಂದ ಭಕ್ತಿ ಸಮರ್ಪಣೆ





ಮೈಸೂರಿನ ಕೆಜಿ ಕೊಪ್ಪಲಿನ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ಎದುರು ಮಂಗಳವಾರ ಉತ್ಸವಮೂರ್ತಿ ಮೆರವಣಿಗೆ ಕಣ್ತುಂಬಿಕೊಳ್ಳಲು ನೆರೆದಿದ್ದ ಸಹಸ್ರಾರು ಭಕ್ತರನ್ನು ಚಿತ್ರದಲ್ಲಿ ಕಾಣಬಹುದು. ಮತ್ತೊಂದು ಚಿತ್ರದಲ್ಲಿ ದೇವಸ್ಥಾನದ ಎದುರು ಆಗಮಿಸಿದ ಉತ್ಸವಮೂರ್ತಿಗೆ ನಟ ವಿನಯ್‌ರಾಜ್‌ಕುಮಾರ್ ನಮಿಸಿ ಪೂಜೆ ಸಲ್ಲಿಸಿದರು.

ಮೈಸೂರು,ಜು.15(ಪಿಎಂ)– ತಾಯಿ ಚಾಮುಂಡೇಶ್ವರಿಯ ಉತ್ಸವಮೂರ್ತಿ ಅದ್ಧೂರಿ ಮೆರವಣಿಗೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳೊಂದಿಗೆ ನಗರದ ಕನ್ನೇಗೌಡನಕೊಪ್ಪಲಿನಲ್ಲಿ (ಕೆಜಿ ಕೊಪ್ಪಲು) ಮಂಗಳವಾರ ಶ್ರೀ ಚಾಮುಂಡೇಶ್ವರಿ ಅಮ್ಮನವರ ಹಬ್ಬ ವಿಜೃಂಭಣೆಯಿಂದ ನಡೆಯಿತು.

ಚಾಮುಂಡೇಶ್ವರಿಯ ಉತ್ಸವಮೂರ್ತಿ ಮೆರವಣಿಗೆಗೆ ಸಹಸ್ರಾರು ಭಕ್ತರು ಸಾಕ್ಷಿಯಾಗಿ ಭಕ್ತಿಯ ಪರಾಕಾಷ್ಠೆ ಮೆರೆದರು. ಕೆಜಿ ಕೊಪ್ಪಲಿನ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ಆವರಣದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು, ದೇವಿಯ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು. ಗ್ರಾಮದ ಹಿರಿಯರು, ಕಿರಿಯರು, ಮಕ್ಕಳು ದೇವಾಲಯದ ಬಳಿ ನೆರೆದು, ದೇವಿಯ ಕೃಪೆಗೆ ಪಾತ್ರರಾದರು.

ಇಡೀ ಗ್ರಾಮದಲ್ಲಿ ತಾಯಿ ಚಾಮುಂಡೇಶ್ವರಿ ಉತ್ಸವಮೂರ್ತಿ ಮೆರವಣಿಗೆ ಜರುಗಿ, ಮರಳಿ ದೇವಸ್ಥಾನಕ್ಕೆ ಬರುವ ವೇಳೆಗೆ ಇಲ್ಲಿ ನೆರೆದಿದ್ದ ಸಹಸ್ರಾರು ಭಕ್ತರು ಚಾಮುಂಡೇಶ್ವರಿ ತಾಯಿಯ ಉತ್ಸವಮೂರ್ತಿಗೆ ನಮಿಸಿ ಭಕ್ತಿಭಾವ ಮೆರೆದರು. ದೇವಸ್ಥಾನದಲ್ಲಿ ಇಂದು ಬೆಳಗ್ಗೆ ಮಹಾಮಂಗಳಾರತಿ ನೆರವೇರಿತು. ಆ ಮೂಲಕ ಆರಂಭವಾದ ಪೂಜಾ ಕೈಂಕರ್ಯ ರಾತ್ರಿವರೆಗೂ ನಡೆಯಿತು.

ಬೆಳಗ್ಗೆಯಿಂದಲೇ ಗ್ರಾಮಸ್ಥರು, ಅವರ ನೆಂಟರಿಷ್ಟರು ದೇವಸ್ಥಾನಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿ ತಾಯಿಗೆ ವಿಶೇಷ ಪೂಜೆ ನೆರವೇರಿಸಿ ದೇವಿ ದರ್ಶನ ಪಡೆದು ಪುನೀತರಾದರು. ದೇವಸ್ಥಾನದಲ್ಲಿ ಉತ್ಸವಮೂರ್ತಿಗೆ ಪೂಜಾ ಕೈಂಕರ್ಯ ನೆರವೇರಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಬಳಿಕ ಬೆಳಗ್ಗೆ 11.30ರ ವೇಳೆಗೆ ಕೆಜಿ ಕೊಪ್ಪಲಿನ ದೇವರ ಕೊಳದಿಂದ ಮೆರವಣಿಗೆ ಹೊರಟಿತು.

'ಕನ್ನಕರಡಿ' ಪೂಜಿಸಿಕೊಂಡು ಮುಂದೆ ಸಾಗಿದ ಉತ್ಸವಮೂರ್ತಿ ಮೆರವಣಿಗೆಯು ಸರಸ್ವತಿಪುರಂ, ಕೆಜಿ ಕೊಪ್ಪಲು, ಜಯನಗರ, ಪೈಲ್ವಾನ್ ಬಸವಯ್ಯನವರ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿತು. ತಮಟೆ, ಓಲಗ, ಬ್ಯಾಂಡ್, ಕೀಲುಕುದುರೆ ಹಾಗೂ ಮಂಗಳವಾದ್ಯದೊಂದಿಗೆ ವಿಜೃಂಭಣೆಯಿಂದ ನಡೆದ ಮೆರವಣಿಗೆಯು ಸಂಜೆ ವೇಳೆಗೆ ಮರಳಿ ದೇವಸ್ಥಾನ ತಲುಪಿತು.

ಹೂಮಾಲೆಗಳಿಂದ ಅಲಂಕೃತಗೊಂಡಿದ್ದ ಉತ್ಸವ ಮೂರ್ತಿಯು ದೇವಸ್ಥಾನದ ಬಳಿಗೆ ಬರುವ ವೇಳೆಗೆ ಹಣ್ಣು–ಕಾಯಿ ಅರ್ಪಿಸಲು ಕಾದಿದ್ದ ಸಹಸ್ರಾರು ಭಕ್ತರು, ಮೆರವಣಿಗೆಯಲ್ಲಿ ಚಾಮುಂಡೇಶ್ವರಿ ಉತ್ಸವಮೂರ್ತಿ ಕಂಡ ಕೂಡಲೇ ಜೈಕಾರ ಕೂಗಿ ತಮ್ಮ ಭಕ್ತಿಯನ್ನು ತಾಯಿ ಚಾಮುಂಡಿಗೆ ಸಲ್ಲಿಸಿದರು. ದೇವಸ್ಥಾನದ ಬಳಿ ರಸ್ತೆಯಲ್ಲಿ ಎರಡೂ ಬದಿಯಲ್ಲಿ ಕಾದು ನಿಂತಿದ್ದ ಭಕ್ತ ಸಮೂಹ ಉತ್ಸವಮೂರ್ತಿ ಕಂಡೊಡನೆ ಸಂಭ್ರಮ ವ್ಯಕ್ತಪಡಿಸಿತು.

ಅಲ್ಲದೆ, ಉತ್ಸವಮೂರ್ತಿ ದರ್ಶನವಾಗುತ್ತಿದ್ದಂತೆ ಚಾಮುಂಡೇಶ್ವರಿ ತಾಯಿಗೆ ಜೈಕಾರ ಹಾಕಿ ತಾವು ತಂದಿದ್ದ ತೆಂಗಿನ ಕಾಯಿ ಒಡೆದು, ಬಾಳೆಹಣ್ಣು ಮುರಿದು ಪೂಜೆ ಸಲ್ಲಿಸಿ ಭಕ್ತಿಭಾವ ಮೆರೆದರು. ಮಹಿಳೆಯರು, ಮಕ್ಕಳು ಸೇರಿದಂತೆ ಅನೇಕರು ಉತ್ಸವಮೂರ್ತಿ ದರ್ಶನವಾಗುತ್ತಿದಂತೆ ಸಾಷ್ಟಾಂಗ ನಮಸ್ಕಾರ ಮಾಡಿ, ಇಷ್ಟಾರ್ಥ ಪ್ರಾಪ್ತಿಗಾಗಿ ದೇವಿಯನ್ನು ಬೇಡಿದರು. ಅಲ್ಲದೆ, ಅನೇಕರು ಉತ್ಸವ ಮೂರ್ತಿಗೆ ಅಲಂಕರಿಸಿದ್ದ ಹೂಮಾಲೆಗಳನ್ನು ಸ್ವೀಕರಿಸಿ ಭಕ್ತಿಯಿಂದ ಇರಿಸಿಕೊಂಡರು. ಹಲವರು ಈ ವೇಳೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಇದೇ ವೇಳೆ ವಿದ್ಯುತ್ ದೀಪಗಳ ಅಲಂಕಾರದಲ್ಲಿ ಕಂಗೊಳಿಸುತ್ತಿದ್ದ ದೇವಸ್ಥಾನವು ಭಕ್ತರ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿತು. ಉತ್ಸವಮೂರ್ತಿ ದೇವಸ್ಥಾನ ತಲುಪುತ್ತಿದ್ದಂತೆ ದೇವಾಲಯದ ಒಳಗೆ ಪ್ರವೇಶಿಸಲಾರಂಭಿಸಿದ ಭಕ್ತರು, ಗರ್ಭಗುಡಿಯಲ್ಲಿರುವ ದೇವಿಯ ದರ್ಶನ ಪಡೆದರು. ಹೂವಿನಲಂಕಾರದಲ್ಲಿ ಕಂಗೊಳಿಸುತ್ತಿದ್ದ ತಾಯಿ ಚಾಮುಂಡಿ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು.

ಗ್ರಾಮಸ್ಥರು ತಮ್ಮ ಮನೆಗಳಲ್ಲಿ ಹಬ್ಬದ ಅಡುಗೆ ಮಾಡಿ ನೆಂಟರಿಷ್ಟರಿಗೆ ಊಣ ಬಡಿಸಿ ತಾವೂ ಸವಿದು ಸಂಭ್ರಮಿಸಿದರು. ಹೊಸ ಉಡುಗೆ ತೊಡುಗೆ ಧರಿಸಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಹಬ್ಬ ನಡೆಯಿತು.

ಇದೇ ವೇಳೆ ದೇವಸ್ಥಾನದ ಧರ್ಮದರ್ಶಿ ನಿಂಗಪ್ಪ ಮಾತನಾಡಿ, ಪ್ರತಿವರ್ಷ ಕೆಜಿ ಕೊಪ್ಪಲು ಗ್ರಾಮದಲ್ಲಿ ಚಾಮುಂಡೇಶ್ವರಿ ಅಮ್ಮನವರ ಹಬ್ಬ ವಿಜೃಂಭಣೆಯಿಂದ ನಡೆಯುತ್ತದೆ. ನಮ್ಮ ಗ್ರಾಮದ ಹಿರಿಯರು ತುಂಬ ವರ್ಷಗಳಿಂದ ಈ ಹಬ್ಬ ಆಚರಿಸಿಕೊಂಡು ಬಂದಿದ್ದಾರೆ. ಅದೇ ರೀತಿಯಲ್ಲಿ ಪ್ರತಿವರ್ಷ ಹಬ್ಬ ಆಚರಿಸಿಕೊಂಡು ಬರುತ್ತಿದ್ದೇವೆ ಎಂದು ತಿಳಿಸಿದರು.

ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಆರ್.ಲಿಂಗಪ್ಪ, ಮುಖಂಡ ಕೊಪ್ಪಲು ರಾಜಣ್ಣ, ಕನ್ನಡಪರ ಹೋರಾಟಗಾರ ಮೋಹನ್‌ಕುಮಾರ್‌ಗೌಡ, ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಗೌರವಾಧ್ಯಕ್ಷ ನಿಂಗಣ್ಣ ಅಧ್ಯಕ್ಷ ಡಿ.ಗಿರೀಶ್‌ಗೌಡ, ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಕಾರ್ಯದರ್ಶಿ ಮಲ್ಲೇಗೌಡ (ಮಲ್ಲಣ್ಣ), ಖಜಾಂಚಿ ವಿ.ರಾಜಣ್ಣ, ಸಹ ಕಾರ್ಯದರ್ಶಿ ಬಿ.ಲಕ್ಷ್ಮಣ, ದೇವಸ್ಥಾನದ ಮುಖ್ಯ ಅರ್ಚಕ ನಟರಾಜ ಶಾಸ್ತ್ರಿ ಮತ್ತಿತರರ ಗಣ್ಯರು ಹಾಜರಿದ್ದರು.

ನಟ ವಿನಯ್ ರಾಜ್‌ಕುಮಾರ್ ದೇವಸ್ಥಾನಕ್ಕೆ ಭೇಟಿ, ಉತ್ಸವಮೂರ್ತಿಗೆ ಪೂಜೆ ಸಲ್ಲಿಸಿ ಭಕ್ತಿ ಸಮರ್ಪಣೆ

ಕೆಜಿ ಕೊಪ್ಪಲಿನ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನಕ್ಕೆ ಭೇಟಿ ನೀಡಿದ್ದ ನಟ ವಿನಯ್ ರಾಜ್‌ಕುಮಾರ್, ಕೊಪ್ಪಲು ಜನತೆಯ ಚಾಮುಂಡಿ ಅಮ್ಮನವರ ಹಬ್ಬದ ಸಂಭ್ರಮ ಹೆಚ್ಚಿಸಿದರು. ದೇವಿ ದರ್ಶನದ ಜೊತೆಗೆ ವಿನಯ್ ರಾಜ್‌ಕುಮಾರ್ ಅವರೊಂದಿಗೆ ಭಕ್ತರು ಸೆಲ್ಫಿ ತೆಗೆದುಕೊಂಡು ಪುಳಕಿತರಾದರು. ಇದೇ ವೇಳೆ ವಿನಯ್ ರಾಜ್‌ಕುಮಾರ್ ಉತ್ಸವಮೂರ್ತಿಗೆ ಪೂಜೆ ಸಲ್ಲಿಸಿ ತಮ್ಮ ಭಕ್ತಿ ಸಮರ್ಪಿಸಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ವಿನಯ್ ರಾಜ್‌ಕುಮಾರ್, ತುಂಬ ಖುಷಿಯಾಯಿತು. ಹಿಂದಿನಿಂದಲೂ ಕೆಜಿ ಕೊಪ್ಪಲು ನಮ್ಮ ಕುಟುಂಬಕ್ಕೆ ತುಂಬ ಹತ್ತಿರ. ದೇವಿಯ ದರ್ಶನಕ್ಕೆ ಬಂದಿದ್ದೇನೆ. ಇಲ್ಲಿನ ಜನತೆ ನೋಡಿ ಅತ್ಯಂತ ಸಂತಸವಾಯಿತು ಎಂದು ಹರ್ಷ ವ್ಯಕ್ತಪಡಿಸಿದರು.



ಮಾಜಿ ಶಾಸಕ ಎಲ್.ನಾಗೇಂದ್ರ ಮುಖಂಡ ಕೊಪ್ಪಲು ರಾಜಣ್ಣ, ಕನ್ನಡ ಪರ ಹೋರಾಟಗಾರ ಮೋಹನ್‌ಕುಮಾರ್ ಗೌಡ ಮೊದಲಾದವರು ಉತ್ಸವ ಮೂರ್ತಿ ದರ್ಶನ ಪಡೆದರು.

ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸದಿದ್ದರೆ ಕ್ರಮಕ್ಕೆ ಶಿಫಾರಸ್ಸು

ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ಡಿ.ರವಿಶಂಕರ್ ಎಚ್ಚರಿಕೆ


ಕೆಡಿಪಿ ಸಭೆಯಲ್ಲಿ ಶಾಸಕ ಡಿ.ರವಿಕುಮಾರ್ ಮಾತನಾಡಿದರು.

ಕೆ.ಆರ್.ನಗರ, ಜು.15– ಸರ್ಕಾರಿ ಕಚೇರಿಗಳಿಗೆ ಆಗಮಿಸುವ ಸಾರ್ವಜನಿಕರೊಂದಿಗೆ ಕೆಲವು ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಸೌಜನ್ಯದಿಂದ ವರ್ತಿಸುತ್ತಿಲ್ಲ ಮತ್ತು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲ ಎಂಬ ದೂರುಗಳು ವ್ಯಾಪಕವಾಗಿ ಕೇಳಿ ಬಂದಿದ್ದು, ಅಂತಹವರು ತಿದ್ದಿ ನಡೆಯದಿದ್ದರೆ ಮುಲಾಜಿಲ್ಲದೆ ಕಠಿಣ ಕ್ರಮಕ್ಕೆ ಶಿಫಾರಸ್ಸು ಮಾಡಲಾಗುತ್ತದೆ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಚುನಾಯಿತ ಸದಸ್ಯರು ಮತ್ತು ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡಿದಾಗ ಮಾತ್ರ ಸರ್ಕಾರದ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳಲು ಸಾಧ್ಯ. ಇದನ್ನು ಎಲ್ಲಾ ಇಲಾಖಾ ಅಧಿಕಾರಿಗಳು ಅರಿತುಕೊಳ್ಳಬೇಕು ಎಂದರು.

ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ದೇವಲೋಕದಿಂದ ಇಳಿದು ಬಂದವರಲ್ಲ. ಸಾರ್ವಜನಿಕರ ಸೇವಕರಾಗಿದ್ದು, ಸರ್ಕಾರದ ಕೆಲಸ ದೇವರ ಕೆಲಸ ಎಂದು ಕಚೇರಿಗಳಿಗೆ ಬರುವ ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸುವುದರ ಜೊತೆಗೆ ಸರ್ಕಾರ ಜನತೆಗಾಗಿ ತಂದಿರುವ ಯೋಜನೆಗಳು ಅರ್ಹ ಫಲಾನುಭವಿಗಳ ಮನೆಗೆ ತಲುಪಿಸಬೇಕೆಂದು ತಿಳಿಸಿದರು.

ಪೊಲೀಸ್ ಇಲಾಖೆ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಶಾಸಕರು ಕಳ್ಳತನ ನಡೆದ ನಂತರ ಪ್ರಕರಣ ದಾಖಲಿಸಿಕೊಂಡು ಪತ್ತೆ ಮಾಡುವ ಬದಲು ಕಳ್ಳತನ ನಡೆಯದಂತೆ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದರು.

ಕೆ.ಆರ್.ನಗರದ ಸಿಎಂ ರಸ್ತೆ, ಬಜಾರ್ ರಸ್ತೆ ಮತ್ತು 7ನೇ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿದ್ದು, ಒಂದು ಬದಿ ಪಾರ್ಕಿಂಗ್ ವ್ಯವಸ್ಥೆ ಮಾಡುವಂತೆ ಕಳೆದ ಕೆಡಿಪಿ ಸಭೆಯಲ್ಲಿ ತಿಳಿಸಿದ್ದರೂ ಕೂಡ ಕ್ರಮ ಕೈಗೊಂಡಿಲ್ಲ. ಪೊಲೀಸ್ ಇಲಾಖೆಯವರು ದಿನದ 24 ಗಂಟೆ ಕೆಲಸ ಮಾಡುವಲ್ಲಿ ನಿಷ್ಕ್ರೀಯಗೊಂಡಿದ್ದಾರೆ ಎಂದರು.

ಕೃಷಿ ಇಲಾಖೆಯವರು ರೈತರಿಗೆ ಭತ್ತದ ಬಿತ್ತನೆ ಬೀಜ ದಾಸ್ತಾನು ಮಾಡಿ ವಿತರಿಸಬೇಕು. ಜೊತೆಗೆ ರೈತರ ಬೇಡಿಕೆಯಂತೆ ರಸಗೊಬ್ಬರಗಳನ್ನು ದಾಸ್ತಾನು ಮಾಡಿಕೊಳ್ಳುವಂತೆ ಅಂಗಡಿ ಮಾಲೀಕರಿಗೆ ಸೂಚನೆ ನೀಡಬೇಕು ಎಂದ ಶಾಸಕರು ಕೃಷಿ ಇಲಾಖೆ ಸಹಾಯಕ ನಿರ್ದೇಶಕರು ಗೊಬ್ಬರದ ಅಂಗಡಿಗಳ ಮಾಲೀಕರ ಸಭೆ ಕರೆದು ಸರ್ಕಾರದ ನಿಯಮದಂತೆ ದರಪಟ್ಟಿ ಪ್ರದರ್ಶಿಸುವಂತೆ ಸೂಚಿಸಬೇಕು ಎಂದರು.

ಸೆಸ್ಕಾಂ ವತಿಯಿಂದ ರೈತರ ಪಂಪ್‌ಸೆಟ್‌ಗಳಿಗೆ ಮತ್ತು ಗ್ರಾಮೀಣ ಜನತೆಗೆ ಸಮರ್ಪಕ ವಿದ್ಯುತ್ ಸೌಲಭ್ಯ ಸರಬರಾಜು ಆಗುತ್ತಿಲ್ಲ ಎಂಬ ದೂರು ಕೇಳಿ ಬಂದಿದ್ದು, ಈ ಸಮಸ್ಯೆ ಪರಿಹರಿಯಲು ಇಲಾಖೆ ಮುಖ್ಯಸ್ಥರು ನಾಳೆಯಿಂದಲೇ ಇಂಜಿನಿಯರ್‌ಗಳು ಮತ್ತು ಲೈನ್‌ಮ್ಯಾನ್‌ಗಳ ಸ್ಥಳ ಬದಲಾವಣೆ ಮಾಡಬೇಕು. ಇದು ತಮ್ಮಿಂದ ಸಾಧ್ಯವಾಗದಿದ್ದರೆ ನನಗೆ ಪಟ್ಟಿ ನೀಡಬೇಕು ಎಂದು ಸೆಸ್ಕಾಂನ ಎರಡು ತಾಲೂಕುಗಳ ಎಇಇಗಳಿಗೆ ತಾಕೀತು ಮಾಡಿದರು.

> ವಸತಿ ಶಾಲೆಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ನೀಡಬೇಕು. ಈ ಬಾರಿ ಕಡಿಮೆ ಸಾಧನೆ ಮಾಡಿರುವುದರಿಂದ ನಾವು ಜಿಲ್ಲೆಗೆ 5ನೇ ಸ್ಥಾನಕ್ಕಿಳಿಯಲು ಕಾರಣವಾಯಿತು. ಅದಕ್ಕಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಎಲ್ಲಾ ಮುಖ್ಯ ಶಿಕ್ಷಕರ ಸಭೆ ನಡೆಸಿ ಈ ಬಾರಿ ಉತ್ತಮ ಫಲಿತಾಂಶ ಪಡೆಯಲು ಬೇಕಾಗುವ ಸಿದ್ಧತೆ ಮಾಡಿಕೊಳ್ಳಬೇಕು. ಅಲ್ಲದೇ ಕನ್ನಡ ಶಾಲೆಗಳನ್ನು ಯಾವುದೇ ಕಾರಣಕ್ಕೂ ಮುಚ್ಚಬಾರದು. ಮಕ್ಕಳೇ ಇಲ್ಲದೆ ಮುಚ್ಚಬೇಕಾಗಿರುವ 3 ಶಾಲೆಗಳಿಗೆ ಮಕ್ಕಳ ದಾಖಲಾತಿ ಮಾಡಿಸಲು ಶಿಕ್ಷಣ ಇಲಾಖೆಯವರು ಶ್ರಮಿಸಬೇಕು. 4 ಗ್ರಾಮಗಳಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ ತೆರೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಮುಂದಿನ ಶೈಕ್ಷಣಿಕ ವರ್ಷದಿಂದ ಆರಂಭ ಮಾಡಲು ಬಿಇಓ ಕ್ರಮ ವಹಿಸಬೇಕು. – ಡಿ.ರವಿಶಂಕರ್, ಶಾಸಕ.

ಮಿರ್ಲೆ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಗ್ರಾಪಂ ಸದಸ್ಯರು ಕೆಲಸ ಮಾಡುತ್ತಿರುವುದು ಸರ್ಕಾರದ ನಿಯಮಕ್ಕೆ ವಿರುದ್ಧವಾಗಿದೆ ಅವರನ್ನು ಕೂಡಲೇ ಕೆಲಸದಿಂದ ವಜಾ ಮಾಡಬೇಕು. ನೋಂದಣಿ ಅಧಿಕಾರಿಗಳು ದಾಖಲಾತಿಗಳನ್ನು ಸರಿಯಾಗಿ ಪರಿಶೀಲಿಸದೆ ನಕಲಿ ದಾಖಲಾತಿ ನೀಡಿರುವ ಆಸ್ತಿಗಳನ್ನು ನೋಂದಣಿ ಮಾಡಿರುವುದು ಕಂಡು ಬಂದಿದ್ದು, ಈ ಬಗ್ಗೆ ಸಾಲಿಗ್ರಾಮ ತಾಲೂಕು ತಹಸೀಲ್ದಾರ್ ಅವರು ಜಿಲ್ಲಾಧಿಕಾರಿಗಳಿಗೆ ವರದಿ ನೀಡಬೇಕು ಎಂದು ಸೂಚಿಸಿದರು.

ತಾಲೂಕು ಸಾರ್ವಜನಿಕ ಆಸ್ಪತ್ರೆ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾಲಿಗ್ರಾಮ, ಮಿರ್ಲೆ ಆಸ್ಪತ್ರೆ ಸೇರಿದಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉತ್ತಮ ಸೇವೆ ನೀಡಲು ಬೇಕಾಗುವ ಕ್ರಮಗಳನ್ನು ತಾಲೂಕು ಆರೋಗ್ಯಾಧಿಕಾರಿಗಳು ಮತ್ತು ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿಗಳು ತೆಗೆದುಕೊಳ್ಳಬೇಕು. ರೋಗಿಗಳಿಗೆ ಆಸ್ಪತ್ರೆಗಳಲ್ಲಿರುವ ಔಷಧಿಗಳನ್ನು ವಿತರಿಸಬೇಕು. ಯಾವುದೇ ಕಾರಣಕ್ಕೂ ಖಾಸಗಿ ಮೆಡಿಕಲ್‌ಗಳಿಗೆ ಬರೆಯದಂತೆ ವೈದ್ಯರಿಗೆ ಸೂಚನೆ ನೀಡಬೇಕು ಎಂದರು.

ಪುರಸಭೆಯವರು ನಗರದ ಜನತೆಗೆ ಶುದ್ಧ ಕುಡಿಯುವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಬೇಕು. ಜೊತೆಗೆ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕೆಂದು ಹೇಳಿದ ಶಾಸಕರು ಒಳಚರಂಡಿ ಕಾಮಗಾರಿ ಸೇರಿದಂತೆ ಇತರ ಅಭಿವೃದ್ಧಿ ಕಾಮಗಾರಿಗಾಗಿ ಸಾಕಷ್ಟು ಹಣ ಬಿಡುಗಡೆಯಾಗಿದ್ದು, ಎಲ್ಲಾ ಕಾಮಗಾರಿಗಳನ್ನು ಆರಂಭಿಸಬೇಕೆಂದು ಮುಖ್ಯಾಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ, ಜಿಪಂ ಸಿಇಓ ಉಕೇಶ್ ಕುಮಾರ್, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷೆ ಪುಷ್ಪಲತಾ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ತಹಸೀಲ್ದಾರ್‌ಗಳಾದ ಜಿ.ಸುರೇಂದ್ರಮೂರ್ತಿ, ಎಸ್.ನರಗುಂದ, ತಾಪಂ ಇಓಗಳಾದ ವಿ.ಪಿ.ಕುಲದೀಪ್, ರವಿ ಸೇರಿದಂತೆ ಇತರರಿದ್ದರು.

ಜೆ.ಸಿ.ಪಾಳ್ಯ ಡೈರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ


ಜೆ.ಸಿ.ಪಾಳ್ಯ ನೂತನ ಆಡಳಿತ ಮಂಡಳಿ ಸದಸ್ಯರನ್ನು ಮೈಮುಲ್ ನಿರ್ದೇಶಕ ಕೆ.ಈರೇಗೌಡ ಸನ್ಮಾನಿಸಿದರು.

ಹೆಚ್.ಡಿ.ಕೋಟೆ, ಜು.15– ತಾಲೂಕಿನ ಜೋಂಪನಹಳ್ಳಿ ಚಿನ್ನಪಾರಪಾಳ್ಯ (ಜೆ.ಸಿ.ಪಾಳ್ಯ) ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ರಿಚರ್ಡ್ ಡಿಸೋಜ ಹಾಗೂ ಉಪಾಧ್ಯಕ್ಷರಾಗಿ ಜೆ.ಪಿ.ಸಂತೋಷ್ ಸೇರಿದಂತೆ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ನಿರ್ದೇಶಕರಾಗಿ ಆರ್.ರಾಜು, ಸಗಾಯ್‌ದಾಸ್, ಚೆಲುವರಾಜು, ಎಂ.ಯೋಗಾನಂದ, ಜೆ.ಜಿ. ಶಿವಪ್ಪ ಪತ್ತಿನಾಥಾನ್, ಜಯಮ್ಮ, ಚಾಮುಂಡೇಶ್ವರಿ ಆಯ್ಕೆಯಾದರು. ಹಾಲಿನ ಡೈರಿ ನೂತನ ಆಡಳಿತ ಮಂಡಳಿ ಸದಸ್ಯರನ್ನು ಮೈಮುಲ್ ನಿರ್ದೇ ಶಕ ಕೆ.ಈರೇಗೌಡ ಸನ್ಮಾನಿಸಿದರು. ಚುನಾವಣಾಧಿಕಾರಿಯಾಗಿ ರೇಣುಕಾ ಕಾರ್ಯ ನಿರ್ವಹಿಸಿದರು. ಈ ವೇಳೆ ಸಂಘದ ಕಾರ್ಯದರ್ಶಿ ಡೆನ್ನಿಸ್ ಜಯಕುಮಾರ್, ಮಾಜಿ ಅಧ್ಯಕ್ಷ ಡಿ.ರಘು ಅರಸ್, ಹಾಲು ಪರೀಕ್ಷಕ ಮುಕುಂದ, ಗ್ರಾಪಂ ಮಾಜಿ ಸದಸ್ಯ ಬಸವರಾಜಪ್ಪ ಸೇರಿದಂತೆ ಇನ್ನಿತರರಿದ್ದರು.

ಎಲ್ಲಾ ಗ್ರಾಮಗಳಿಗೂ ಮೂಲ ಸೌಕರ್ಯ ಒದಗಿಸಲು ಬದ್ಧ


ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ನಂಜನಗೂಡು, ಜು.15– ನಂಜನಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೂ ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಕರ್ಯ ಒದಗಿಸಲು ಬದ್ಧನಾಗಿದ್ದೇನೆ ಎಂದು ಶಾಸಕ ದರ್ಶನ್ ತಿಳಿಸಿದರು.

ಮಂಗಳವಾರ ತಾಲೂಕಿನ ಇಬ್ಜಾಲ, ಮೊತ್ತ, ಚಂದ್ರವಾಡಿ, ಕಗ್ಗಲೂರು, ಹಗಿನವಾಳು, ಹುಸ್ಕೂರು, ಅಂಬಳೆ ಗ್ರಾಮಗಳಲ್ಲಿ ಸಾಮಾನ್ಯ ವರ್ಗದ ಬೀದಿಗಳಲ್ಲಿ 1.50 ಕೋಟಿ ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಳೆದ ಬಜೆಟ್‌ನಲ್ಲಿ ನಂಜನಗೂಡು ಕ್ಷೇತ್ರಕ್ಕೆ 25 ಕೋಟಿ ವಿಶೇಷ ಅನುದಾನ ನೀಡಿದ್ದರು. ಆ ಅನುದಾನದಲ್ಲಿ 20 ಕೋಟಿ ವೆಚ್ಚದಲ್ಲಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಾಮಾನ್ಯ ವರ್ಗದ ಬೀದಿಯಲ್ಲಿ ಸಿಸಿ ರಸ್ತೆ ನಿರ್ಮಾಣ ಮಾಡಲಾಗಿದೆ. ಸುಮಾರು 5 ಕೋಟಿ ಉಳಿದಿದ್ದು, ಆ ಅನುದಾನದಲ್ಲಿ 2ನೇ ಹಂತದಲ್ಲಿ ಗುದ್ದಲಿ ಪೂಜೆಗೆ ಚಾಲನೆ ನೀಡಲಾಗಿದ್ದು, ಶೀಘ್ರ ಕಾಮಗಾರಿ ಮುಕ್ತಾಯಗೊಂಡು ಸಾರ್ವ ಜನಿಕರಿಗೆ ಅನುಕೂಲವಾಗಲಿದೆ. ಜೊತೆಗೆ ಸಾಮಾನ್ಯ ವರ್ಗದ ಬೀದಿಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಬಾಕಿ ಇಲ್ಲದಂತೆ ಅಭಿವೃದ್ಧಿಪಡಿಸಲಾಗುವುದು. ಮುಂದಿನ ದಿನಗಳಲ್ಲಿ ಟಿಎಸ್ಪಿ ಮತ್ತು ಎಸಿಪಿ ಯೋಜನೆ ಅಡಿ ಅನುದಾನ ಬರಲಿದ್ದು ಎಲ್ಲಾ ಗ್ರಾಮ ಗಳಿಗೂ ಮೂಲ ಸೌಕರ್ಯ ಒದಗಿಸುವ ಮೂಲಕ ನಂಜನಗೂಡು ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ರೂಪಿಸಲಾಗುವುದು ಎಂದರು.

ತಾಲೂಕಿನ ಇಬ್ಜಾಲದಲ್ಲಿ 15 ಲಕ್ಷ, ಮೊತ್ತದಲ್ಲಿ 15 ಲಕ್ಷ, ಚಂದ್ರವಾಡಿಯಲ್ಲಿ 20 ಲಕ್ಷ, ಶೆಟ್ಟಹಳ್ಳಿಯಲ್ಲಿ 20 ಲಕ್ಷ, ಕಗ್ಗಲೂರು ಗ್ರಾಮದಲ್ಲಿ 20 ಲಕ್ಷ, ಅಂಬಳೆಯಲ್ಲಿ 20 ಲಕ್ಷ ಸೇರಿದಂತೆ ಈ ದಿನ 1.50 ಕೋಟಿ ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಮುಖಂಡರಾದ ಸೋಮೇಶ್, ಮಹೇಶ್, ಮಹದೇವು, ಸಂಗರಾಜು, ಗಿರೀಶ್, ರಾಜು, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್ ಸೇರಿದಂತೆ ಹಲವರಿದ್ದರು.

ಸಂಸದ ಸುನೀಲ್ ಬೋಸ್‌ಗೆ ಸನ್ಮಾನ


ತಿ.ನರಸೀಪುರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಶಕ್ತಿ ಯೋಜನೆಯಡಿ 500 ಕೋಟಿ ಮಹಿಳಾ ಪ್ರಯಾಣಿಕರ ಪ್ರಯಾಣದ ಸಂಭ್ರಮದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಂಸದ ಸುನೀಲ್ ಬೋಸ್ ಅವರನ್ನು ಪಟ್ಟಣದ ಕಾಂಗ್ರೆಸ್ ಯುವ ಮುಖಂಡ ಚಿಳ್ಳು ಮಹದೇವ್ ಅಭಿನಂದಿಸಿದರು. ಈ ವೇಳೆ ತಾಪಂ ಮಾಜಿ ಸದಸ್ಯ ಎಂ.ರಮೇಶ್, ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಪ್ರಭು ಸುನೀಲ್ ಸೇರಿದಂತೆ ಕೆಎಸ್‌ಆರ್‌ಟಿಸಿ ಸಿಬ್ಬಂದಿ ವರ್ಗ ಹಾಜರಿದ್ದರು.

ಹಿರಿಯ ಪತ್ರಕರ್ತ ಡಾ.ಕೆ.ಬಿ.ಗಣಪತಿಯವರಿಗೆ ಶ್ರದ್ಧಾಂಜಲಿ


ಡಾ.ಕೆ.ಬಿ.ಗಣಪತಿ ಅವರಿಗೆ ನಂಜನಗೂಡು ಪತ್ರಕರ್ತರ ಸಂಘದಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಂಜನಗೂಡು, ಜು.15– ಭಾನುವಾರ ನಿಧನರಾದ 'ಸ್ಟಾರ್ ಆಫ್ ಮೈಸೂರು ಮತ್ತು ಮೈಸೂರು ಮಿತ್ರ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿ ಅವರಿಗೆ ನಂಜನಗೂಡು ಪತ್ರಕರ್ತರ ಸಂಘದಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪತ್ರಕರ್ತ ಎಂ.ಪ್ರಕಾಶ್ ಮಾತನಾಡಿ, ಕೆ.ಬಿ.ಗಣಪತಿಯವರು 'ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರು' ಪ್ರಾದೇಶಿಕ ಪತ್ರಿಕೆಗಳನ್ನು ಹುಟ್ಟು ಹಾಕಿ ಅನೇಕ ಪತ್ರಕರ್ತರನ್ನು ಬೆಳೆಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಅವರು ಬೆಳೆಸಿದ ಪತ್ರಕರ್ತರು ಇಂದು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾಗಿದ್ದಾರೆ. ಅಲ್ಲದೆ ಅವರ ಪತ್ರಿಕೆಗಳ ಮೂಲಕ ಅನೇಕರು ಜೀವನ ಕಟ್ಟಿಕೊಂಡಿದ್ದಾರೆ. ಇಂದಿನ ಯುವಕರಿಗೆ ಅವರು ಸ್ಫೂರ್ತಿ ಎಂದರು.

ಈ ವೇಳೆ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ರಂಗಸ್ವಾಮಿ, ಉಪಾಧ್ಯಕ್ಷ ವೇಣುಗೋಪಾಲ್, ಕಾರ್ಯದರ್ಶಿ ಎನ್.ಪಿ. ದೀಪಕ್, ಖಜಾಂಚಿ ಭಾಗ್ಯರಾಜ್, ಹಿರಿಯ ಪತ್ರಕರ್ತರಾದ ಮಧು, ಮಹದೇವ ಪ್ರಸಾದ್, ಮೋಹನ್, ಗಂಗಾಧರ್, ರಾಘವೇಂದ್ರ, ಮಹದೇವಸ್ವಾಮಿ, ಕೃಷ್ಣಪ್ಪಗೌಡ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕರಡಿ ದಾಳಿ: ಅರಣ್ಯ ಪಾಲಕನಿಗೆ ಗಾಯ



ಹೆಚ್.ಡಿ.ಕೋಟೆ, ಜು.15– ಅರಣ್ಯ ಪಾಲಕನ ಮೇಲೆ ಕರಡಿ ದಾಳಿ ನಡೆಸಿ ತೀವ್ರ ಗಾಯಗೊಳಿಸಿರುವ ಘಟನೆ ತಾಲೂಕಿನ ನಾಗರಹೊಳೆ ಅಭಯಾರಣ್ಯದ ದಮ್ಮನಕಟ್ಟೆ ವಲಯದಲ್ಲಿ ಮಂಗಳವಾರ ಮಧ್ಯಾಹ್ನ ನಡೆದಿದೆ.

ತಾಲೂಕಿನ ಸೋಗಳ್ಳಿ ಹಾಡಿ ನಿವಾಸಿ ಮಾದ ಗಾಯಗೊಂಡವರು. ಈತ ಇಂದು ಮಧ್ಯಾಹ್ನ ಅರಣ್ಯ ಇಲಾಖೆ ನೌಕರ ಮತ್ತು ಸಿಬ್ಬಂದಿಗಳಾದ ಪುಟ್ಟಬಸವ, ಶಂಕರ್, ಸಚಿನ್, ನಾಗ ರಾಜು ಅವರೊಂದಿಗೆ ಹಸಿ ಹಿಂಡಲ ಕಡ ಗಸ್ತಿನ ಹಳೆ ಟ್ರಾಂಜೆಕ್ಸ್ ಲೈನ್ ಅರಣ್ಯ ಪ್ರದೇಶದಲ್ಲಿ ಗಸ್ತಿನಲ್ಲಿದ್ದಾಗ ಮಾದನ ಮೇಲೆ ಮರಿಗಳ ಜೊತೆ ಇದ್ದ ಕರಡಿ ದಾಳಿ ನಡೆಸಿದೆ. ಈ ವೇಳೆ ತಲೆ, ಮುಖಕ್ಕೆ ತೀವ್ರ ಗಾಯವಾಗಿ ಕಿರುಚಾಡಿದಾಗ ಜೊತೆಯಲ್ಲಿದ್ದ ನಾಲ್ವರು ಬಂದು ಕರಡಿಯಿಂದ ರಕ್ಷಿಸಿದ್ದಾರೆ. ಬಳಿಕ ಎಸಿಎಫ್ ಮಧು, ಅರಣ್ಯ ಅಧಿಕಾರಿಗಳಾದ ಸಿದ್ದರಾಜು, ವಿಜಯ್ ಕುಮಾರ್, ದಿನೇಶ್, ಮಂಜು ಸೇರಿದಂತೆ ಮತ್ತಿತರರು ಗಾಯಗೊಂಡು ಮಾದನನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಪೇಪರ್ ಬ್ಯಾಗ್ ಅರಿವು ಕಾರ್ಯಕ್ರಮ


ವಿಶ್ವ ಪೇಪರ್ ಬ್ಯಾಗ್ ದಿನದ ಅಂಗವಾಗಿ ಹುಣಸೂರು ನಗರದ ಟ್ಯಾಲೆಂಟ್ ಶಿಕ್ಷಣ ಸಂಸ್ಥೆ ಎನ್‌ಎಸ್‌ಎಸ್ ಘಟಕದಿಂದ ಬೀದಿ ಬದಿ ಅಂಗಡಿಗಳಿಗೆ ಪೇಪರ್ ಬ್ಯಾಗ್ ವಿತರಿಸುವ ಮೂಲಕ ಅರಿವು ಮೂಡಿಸಲಾಯಿತು. ಉಪ ಪ್ರಾಂಶುಪಾಲ ಜಗದೀಶ್, ಉಪನ್ಯಾಸಕರಾದ ಅರ್ಚನಾ, ಚೈತ್ರ ಹಾಜರಿದ್ದರು.

ತಿ.ನರಸೀಪುರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ


ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ತಿ.ನರಸೀಪುರ, ಜು.15– ಸಾರ್ವಜನಿಕರಿಗೆ ಆರೋಗ್ಯ ಸೇವೆ ಕಲ್ಪಿಸಲು ಪ್ರಥಮ ಬಾರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ.ಬಿ. ಮನ್ಸೂರ್ ಅಲಿ ಹೇಳಿದರು.

ಪಟ್ಟಣದ ಲಿಂಕ್ ರಸ್ತೆಯಲ್ಲಿರುವ ಮಸ್ಜಿದ್ ಎ ನೂರ್ ಮಸೀದಿಯಲ್ಲಿ ಅಲ್ ಅನ್ಸಾರ್ ಆಸ್ಪತ್ರೆ ಮೈಸೂರು ವತಿಯಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಮಾತನಾಡಿದ ಅವರು ಮುಸ್ಲಿಂ ಸಮುದಾಯದಿಂದ ಸೇವಾ ಮನೋಭಾವನೆ ಪ್ರತೀಕವಾಗಿ ಈ ಆರೋಗ್ಯ ತಪಾಸಣಾ ಶಿಬಿರ ನಡೆಯುತ್ತಿದೆ ಎಂದರು.

ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ನಡೆದ ಶಿಬಿರದಲ್ಲಿ 500ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟು ಚಿಕಿತ್ಸೆ ಪಡೆದರು. ಈ ವೇಳೆ ಅಲ್ ಅನ್ಸಾರ್ ಆಸ್ಪತ್ರೆ ವೈದ್ಯರಾದ ಡಾ.ಉಮ್ಮಿ ಅನಿ, ಡಾ.ತಸ್ಮಿಯ ಖಾನಮ್, ಡಾ.ಸಮೀರ್ ಅಮ್ಜದ್ ಶಾಯಿಕ್, ತಾಲಿಬ್ ಸುಭಾನ್, ಯಾಸ್ಮಿನ್, ಅಲ್ಮಶ್, ನೇಹಾ ಕೌಶರ್ ಹಾಗೂ ಸಿಬ್ಬಂದಿ ತಪಾಸಣೆ ನಡೆಸಿದರು.

ಮಸ್ಜಿದ್ ಎ ನೂರ್ ವ್ಯವಸ್ಥಾಪನಾ ಸಮಿತಿ ಕಾರ್ಯದರ್ಶಿ ಸಯೀದ್ ಪಾಷ, ಖಜಾಂಚಿ ನಯಾಜ್ ಅಹಮದ್, ಸದಸ್ಯರಾದ ಮನ್ಸೂರ್ ಅಹಮದ್, ಅಲ್ತಾಫ್ ಪಾಷ, ಇನಾಯತ್, ಅಕ್ಬರ್ ಪಾಷ, ರಿಯಾಜ್ ಅಹಮದ್ ಇತರರಿದ್ದರು.

ಶ್ರೀಸಿದ್ದಪ್ಪಾಜಿ ದೇವಾಲಯದ ಬಸವ ಇನ್ನಿಲ್ಲ



ಬನ್ನೂರು, ಜು.15– ಕಳೆದ 22 ವರ್ಷಗಳಿಂದ ಭಕ್ತರ ಆಶಯಗಳನ್ನು ಇಡೇರಿಸುತ್ತಾ ನಡೆದಾಡುವ ದೇವರೆಂದೇ ಪ್ರಸಿದ್ಧಿ ಪಡೆದಿದ್ದ ಚಾಮನಹಳ್ಳಿ ಗ್ರಾಮದ ಶ್ರೀಸಿದ್ದಪ್ಪಾಜಿ ದೇವಾಲಯದ ಬಸವ ಅಸುನೀಗಿದ್ದು, ಸಾವಿರಾರು ಭಕ್ತರ ಕಂಬನಿಗೆ ಕಾರಣವಾಗಿದೆ.

ಹಲವು ವರ್ಷಗಳಿಂದ ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಭಕ್ತರ ಆಶಯಗಳನ್ನು ಈಡೇರಿಸುತ್ತಾ ಪ್ರತಿ ಮನೆ ಮನೆಯ ಮಾತಾಗಿದ್ದ ದೊಡ್ಡಬಸವ ಸಾವನ್ನಪ್ಪಿದ್ದು, ವಿಚಾರ ತಿಳಿಯುತ್ತಿದ್ದಂತೆ ವಿವಿಧ ಗ್ರಾಮ, ತಾಲೂಕು, ಜಿಲ್ಲೆಗಳಿಂದ ಸಾವಿರಾರು ಭಕ್ತರು ಆಗಮಿಸಿ ಅಂತಿಮ ದರ್ಶನ ಪಡೆದು ಪುನೀತರಾದರು.

ಪ್ರಧಾನ ಅರ್ಚಕ ನಾಗಾಚಾರಿ ಮಾತನಾಡಿ, ಹಲವು ವರ್ಷಗಳಿಂದ ದೇವರ ಪ್ರತಿರೂಪವಾಗಿದ್ದ ಬಸವ ಇಂದು ಸಾವನ್ನಪ್ಪಿದ್ದು, ಗ್ರಾಮದ ಎಲ್ಲಾ ಮುಖಂಡರ ಆಶಯದಂತೆ ಗ್ರಾಮದಲ್ಲಿ ಮೆರವಣಿಗೆ ಮೂಲಕ ಸರ್ವರಿಗೂ ಅಂತಿಮ ದರ್ಶನ ನೀಡಿ ಗ್ರಾಮದ ಕೆರೆ ಸಮೀಪ ಅಂತಿಮ ವಿಧಿ ವಿಧಾನ ನೆರವೇರಿಸಲಾಗುವುದು ಎಂದರು. ಈ ವೇಳೆ ಗ್ರಾಮದ ಮುಖಂಡರು, ಯಜಮಾನರು, ಗ್ರಾಮಸ್ಥರು, ಭಕ್ತರು ಇದ್ದರು.

ಬ್ರಾಹ್ಮಣ ಮಹಾಸಭಾಗೆ ನೇಮಕ




ಮೈಸೂರು, ಜು.15– ಮೈಸೂರಿನ ವಿಪ್ರ ಮುಖಂಡರಾದ ಶಂಕರನಾರಾಯಣ ಹಾಗೂ ಎನ್.ಶ್ರೀನಿವಾಸ ಪ್ರಸಾದ್ ಅವರನ್ನು ಬ್ರಾಹ್ಮಣ ಮಹಾಸಭಾ ರಾಜ್ಯ ಜಂಟಿ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ ಎಂದು ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ


ಮಲ್ಕುಂಡಿ ಸಮೀಪದ ದುಗ್ಗಹಳ್ಳಿ ಗ್ರಾಪಂ ವ್ಯಾಪ್ತಿಯ ಶೆಟ್ಟಹಳ್ಳಿ ಹಾಗೂ ಕಗ್ಗಲೂರು ಗ್ರಾಮದಲ್ಲಿ ತಲಾ 20 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಗ್ರಾಪಂ ಅಧ್ಯಕ್ಷ ಶಂಕರ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್ ಕುಮಾರ್, ಶಿವಣ್ಣ, ಮಲ್ಲೇಶ್, ಎಇ ಶರಣ್, ಇಂಜಿನಿಯರ್ ಪುರುಷೋತ್ತಮ್ ಸೇರಿದಂತೆ ಇತರರಿದ್ದರು.

ವಿದ್ಯಾರ್ಥಿಗಳು ಏಕಾಗ್ರತೆಯಿಂದ ಓದಿ ಯಶಸ್ಸು ಗಳಿಸಿ

ಬೈಲಕುಪ್ಪೆ ಸೆರಾ ವಿಶ್ವವಿದ್ಯಾನಿಲಯದ ಬೌದ್ಧ ಫಿಲಾಸಫರ್ ಪ್ರೊ.ಕ್ಲಾರಾ ಸಲಹೆ



ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು.

ಬೆಟ್ಟದಪುರ, ಜು.15– ವಿದ್ಯಾರ್ಥಿಗಳು ಮನಸ್ಸನ್ನು ಏಕಾಗ್ರತೆಯಲ್ಲಿಟ್ಟುಕೊಳ್ಳುವ ಮೂಲಕ ಓದಿನಲ್ಲಿ ಯಶಸ್ಸು ಗಳಿಸಬೇಕು ಎಂದು ಬೈಲಕುಪ್ಪೆ ಸೆರಾ ವಿಶ್ವವಿದ್ಯಾನಿಲಯದ ಬೌದ್ಧ ಫಿಲಾಸಫರ್ ಪ್ರೊ.ಕ್ಲಾರಾ ಸಲಹೆ ನೀಡಿದರು.

ಇಲ್ಲಿನ ಅನಿಕೇತನ ಪದವಿಪೂರ್ವ ಕಾಲೇಜಿನಲ್ಲಿ ಮಂಗಳವಾರ ನಡೆದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಏಷ್ಯಾದ ಬೆಳಕು ಎನಿಸಿಕೊಂಡ ಬುದ್ಧನಿಗೆ ಜ್ಞಾನೋದಯವಾದದ್ದೇ ಮನಸ್ಸಿನ ಏಕಾಗ್ರತೆಯಿಂದ. ವಿದ್ಯಾರ್ಥಿಗಳು ಕೂಡ ವ್ಯಾಸಂಗದ ಅವಧಿಯಲ್ಲಿ ಯಾವುದೇ ಅನಗತ್ಯ ವಿಷಯಗಳ ಕಡೆಗೆ ಗಮನ ಹರಿಸದೇ ಏಕಚಿತ್ತದಿಂದ ಕುಳಿತು ಅಧ್ಯಯನ ಮಾಡಬೇಕು ಎಂದು ತಿಳಿಸಿದರು.

ಚಾಣಕ್ಯ ವಿದ್ಯಾಸಂಸ್ಥೆ ಮುಖ್ಯ ಶಿಕ್ಷಕ ತಿಮ್ಮಯ್ಯ ಮಾತನಾಡಿ, ಶಾಲೆ–ಕಾಲೇಜುಗಳು ಒಂದು ಕುಟುಂಬವಿದ್ದಂತೆ. ವಿದ್ಯಾರ್ಥಿಗಳು ಈ ಕುಟುಂಬದ ಸದಸ್ಯರು. ಎಲ್ಲರೂ ಒಂದು ತಾಯಿ ಮಕ್ಕಳಂತೆ ಇದ್ದು ಜಾತ್ಯಾತೀತ ಸಮಾಜ ನಿರ್ಮಾಣ ತಮ್ಮಿಂದಲೇ ಸೃಷ್ಟಿಯಾಗುವಂತೆ ನೋಡಿಕೊಳ್ಳಬೇಕು ಎಂದು ಆಶಿಸಿದರು.

ರಂಗಭೂಮಿ ಕಲಾವಿದ ಭರಮಣ್ಣ ಬೆಟಗೇರಿ ಮಾತನಾಡಿ ಸಂಸ್ಕೃತಿ, ಸಂಸ್ಕಾರವನ್ನು ರೂಢಿಸಿಕೊಂಡವರು ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬದುಕುತ್ತಾರೆ. ಇದನ್ನು ಮನೆಯಿಂದಲೇ ಕಲಿತುಕೊಳ್ಳಬೇಕು. ಅಲ್ಲದೇ ಗುರು ಹಿರಿಯರಿಗೆ ಗೌರವ ಕೊಟ್ಟು ನಡೆಯುವುದನ್ನು ಮೊದಲು ಕಲಿಯಬೇಕು. ಇದು ತಮ್ಮ ಬದುಕಿನ ಉನ್ನತ ಸ್ಥಾನಕ್ಕೆ ದಾರಿ ತೋರುತ್ತದೆ ಎಂದು ಕಿವಿಮಾತು ಹೇಳಿದರು.

ನಿವೃತ್ತ ಮುಖ್ಯ ಶಿಕ್ಷಕ ಸಣ್ಣಸ್ವಾಮಿಗೌಡ ಮಾತನಾಡಿ, ವಿದ್ಯಾರ್ಥಿಗಳು ಎಲ್ಲೇ ಇದ್ದರೂ ತಮ್ಮ ಉತ್ತಮ ನಡವಳಿಕೆಯನ್ನು ಬಿಡಬಾರದು. ಹೊರಗಿನ ಸಮಾಜ ತಮ್ಮನ್ನು ಎಚ್ಚರಿಕೆಯಿಂದ ಗಮನಿಸುತ್ತಿರುತ್ತದೆ. ತಮ್ಮ ತಂದೆ ತಾಯಂದಿರಿಗೆ ಒಳ್ಳೆಯ ಹೆಸರು ತರುವ ಕಡೆಗೆ ನಿಮ್ಮ ಹೆಜ್ಜೆಗಳಿರಲಿ ಎಂದು ಕಿವಿಮಾತು ಹೇಳಿದರು.

ಮಾನವ ಟ್ರಸ್ಟ್ ಅಧ್ಯಕ್ಷ ಅಪ್ಪಣ್ಣ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಡಾ.ಜೆ.ಸೋಮಣ್ಣ, ಟ್ರಸ್ಟಿಗಳಾದ ಟಿ.ಆರ್.ಶಕುಂತಲಾ, ಟಿ.ಆರ್.ಸತೀಶ್ ಕುಮಾರ್, ಚಂದ್ರಕಲಾ, ಪ್ರಾಂಶುಪಾಲ ಅಭಿಜಿತ್, ಉಪಪ್ರಾಂಶುಪಾಲ ಶಿವನಂಜು, ಉಪನ್ಯಾಸಕರಾದ ಅಭಿಜಿತ್, ರಜನಿ, ಅರ್ಪಿತಾ ಸುಧಾ, ನವೀನ್ ಹಾಜರಿದ್ದರು.

ವಿದ್ಯಾರ್ಥಿಗಳಿಂದ ನೃತ್ಯ, ಸಂಗೀತ ಕಾರ್ಯಕ್ರಮಗಳು ನಡೆದವು. ಆರಂಭದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಪೆನ್ನು ಮತ್ತು ಹೂ ನೀಡಿ ಸ್ವಾಗತಿಸಿದರು. ಬಳಿಕ ಕಾಲೇಜಿನ ಆವರಣದಲ್ಲಿ ವಿವಿಧ ಜಾತಿಯ ಗಿಡಗಳನ್ನು ನೆಡಲಾಯಿತು.

ಡಾ.ಶ್ರೀಸಿದ್ದಮಲ್ಲಿಕಾರ್ಜುನ ಸ್ವಾಮೀಜಿಗೆ ಸನ್ಮಾನ


ತಲಕಾಡು ಹಸ್ತಿಕೇರಿ ಮಠದಲ್ಲಿ ನಡೆದ ಕೇದಾರ ಜಗದ್ಗುರುಗಳ ಸಂಗೀತಯುಕ್ತ ಲಿಂಗಪೂಜೆ ಕಾರ್ಯಕ್ರಮದಲ್ಲಿ ಡಾ.ಶ್ರೀಸಿದ್ದಮಲ್ಲಿಕಾರ್ಜುನ ಸ್ವಾಮೀಜಿ ಅವರನ್ನು ಭಕ್ತರು ಸನ್ಮಾನಿಸಿದರು. ಈ ವೇಳೆ ಯುವ ಮುಖಂಡ ನಿಶಾಂತ್, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಮಂಜುನಾಥ, ಶಿವಸ್ವಾಮಿ, ನಾಗೇಂದ್ರಸ್ವಾಮಿ, ಮಲ್ಲೇಶಯ್ಯ ಜಗದಾಂಬ, ಸೋಮಣ್ಣ, ಶ್ರೀಕಂಠಪ್ರಸಾದ್, ನಾಗರಾಜೇಗೌಡ್ರು, ಸುಗಂಧರಾಜು, ಮೈಸೂರು ವೀರಭದ್ರ ದೇವಸ್ಥಾನದ ಮಹೇಶ, ರೇಣುಕ ಪ್ರಸಾದ್, ಪ್ರದೀಪ್ ಕುಮಾರ, ಸಿ.ಬಸವಣ್ಣ, ರವಿಕುಮಾರ್, ಪೂರಿಗಾಲಿ ಮಠದ ಶ್ರೀಶಿವಾನಂದ ಶಿವಾಚಾರ್ಯ ಸ್ವಾಮಿ, ದಿನೇಶ್ ಶಾಸ್ತ್ರಿಗಳು, ಬಸವಣ್ಣ ಹಾಜರಿದ್ದರು.

ಗ್ಯಾರಂಟಿಗಳ ಬಿಟ್ಟಿ ಭಾಗ್ಯ ಎಂದು ಜರಿಯುವ ಬಿಜೆಪಿಗೆ ತಕ್ಕ ಪ್ರತ್ಯುತ್ತರ ನೀಡಿ

ಕಾಂಗ್ರೆಸ್ ಕಾರ್ಯಕರ್ತರಿಗೆ ಎಂಎಲ್ಸಿ ಡಾ. ಡಿ.ತಿಮ್ಮಯ್ಯ ಸಲಹೆ

ಮೈಸೂರು, ಜು.15(ಎಂಟಿವೈ)– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಐದು ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಯೋಜನೆಯೆಂದು ಜರಿಯುವ ಮೂಲಕ ಫಲಾನುಭವಿಗಳನ್ನು ಅವಮಾನಿಸುತ್ತಿರುವ ಬಿಜೆಪಿಗರ ವರ್ತನೆಯನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಡಬೇಕು ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸಲಹೆ ನೀಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸುವ ಪದಗ್ರಹಣ ಮತ್ತು ಸಾಧನ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ಟೀಕಿಸುವ ಬಿಜೆಪಿ, ಜೆಡಿಎಸ್ ಜನರಿಗೆ ಏನು ಮಾಡಲಿಲ್ಲ. ಈಗ ಬಿಟ್ಟಿ ಎನ್ನುವ ಮೂಲಕ ಯೋಜನೆಗಳ ಲಕ್ಷಾಂತರ ಫಲಾನುಭವಿಗಳಿಗೆ ಅವಮಾನ ಮಾಡಿದ್ದಾರೆ. ಗ್ಯಾರಂಟಿ ಯೋಜನೆಗಳು, ಅಭಿವೃದ್ಧಿ ಕುರಿತು ಟೀಕಿಸುವ ಪ್ರತಿಪಕ್ಷದ ನಾಯಕರಿಗೆ ತಕ್ಕ ಪ್ರತ್ಯುತ್ತರ ನೀಡಬೇಕು. ರಾಜ್ಯ ಸರ್ಕಾರದ ಸಾಧನೆ ಮತ್ತು ಗ್ಯಾರಂಟಿ ಯೋಜನೆಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡಬೇಕು. ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ ಗ್ಯಾರಂಟಿ ಯೋಜನೆಗಳನ್ನು ದೇಶದ ಯಾವುದೇ ರಾಜ್ಯಗಳು, ವಿದೇಶಗಳಲ್ಲೂ ಉಚಿತವಾಗಿ ನೀಡುತ್ತಿಲ್ಲ. ಎಡಪಂಥೀಯ ಸರ್ಕಾರ ಇರುವ ದೇಶಗಳಲ್ಲೂ ಉಚಿತವಾಗಿ ಯೋಜನೆಗಳನ್ನು ಜಾರಿಗೆ ತಂದಿಲ್ಲ. ಸಾರಿಗೆ ಬಸ್‌ಗಳಲ್ಲಿ 500 ಕೋಟಿ ಮಹಿಳಾ ಪ್ರಯಾಣಿಕರು ಸಂಚಾರ ಮಾಡಿರುವುದು ದಾಖಲೆಯಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದಲಿತ, ಹಿಂದುಳಿದ ವರ್ಗಗಳ ಬಗ್ಗೆ ಇರುವ ಬದ್ಧತೆ, ಕಾಳಜಿ ಬೇರೆ ಯಾವ ನಾಯಕರಿಗೂ ಇಲ್ಲ. ಆ ಕಾರಣದಿಂದಲೇ ಎಲ್ಲಾ ಜಾತಿ, ಧರ್ಮದ ಬಡ ಜನರಿಗೆ ಉಪಯೋಗವಾಗುವಂತಹ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಇದರಿಂದ ಲಕ್ಷಾಂತರ ಕುಟುಂಬಗಳು ಗೌರವಯುತವಾಗಿ ಬದುಕು ಸಾಗಿಸುವುದಕ್ಕೆ ಸಾಧ್ಯವಾಗಿದೆ ಎಂದು ತಿಳಿಸಿದರು.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಮೈಸೂರಿನಲ್ಲಿ ನಡೆಯುವ ಸಾಧನಾ ಸಮಾವೇಶ ರಾಜ್ಯದ ಗಮನ ಸೆಳೆಯಬೇಕು. ಸರ್ಕಾರದ ವಿರುದ್ಧ ವಿರೋಧ ಪಕ್ಷಗಳ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ. ಚಾಮರಾಜ ಕ್ಷೇತ್ರಕ್ಕೆ 1900 ಕೋಟಿ ರೂ. ಅನುದಾನ ನೀಡಿದ್ದಾರೆ. ಸಿಎಂ ಸಿದ್ಧರಾಮಯ್ಯ ಆರ್ಥಿಕ ತಜ್ಞ, ಸುದೀರ್ಘ ಅನುಭವದಿಂದ ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಕಾಂಗ್ರೆಸ್ ಶಕ್ತಿ ಪ್ರದರ್ಶನ ಆಗಬೇಕು. ಚಾಮರಾಜ, ನರಸಿಂಹರಾಜ, ಕೃಷ್ಣರಾಜ ಕ್ಷೇತ್ರದಿಂದ ತಲಾ ಹದಿನೈದು ಸಾವಿರದಂತೆ 45 ಸಾವಿರ ಮಂದಿ ಸೇರಿಸಬೇಕು. ಮಂಚೇಗೌಡನ ಕೊಪ್ಪಲು, ನಜರ್‌ಬಾದ್, ಮೇಟಗಳ್ಳಿ, ಒಂಟಿ ಕೊಪ್ಪಲು, ಕುಂಬಾರಕೊಪ್ಪಲು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿಕೊಂಡು ಬಂದ ಗ್ರಾಮಗಳಾಗಿದ್ದು, ಈ ಭಾಗದಿಂದ ಹೆಚ್ಚಿನ ಸಂಖ್ಯೆಯ ಕಾರ್ಯಕರ್ತರು ಕಾರ್ಯಕ್ರಮಕ್ಕೆ ಬರಬೇಕು ಎಂದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿ, ಮೈಸೂರು ನಗರದ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2600 ಕೋಟಿ ರೂಪಾಯಿ ಅನುದಾನ ನೀಡಿದ್ದಾರೆ. ಸರ್ಕಾರದ ಸಾಧನಾ ಸಮಾವೇಶದಲ್ಲಿ ಒಂದು ಲಕ್ಷ ಜನರನ್ನು ಸೇರಿಸಬೇಕು. ರಾಜ್ಯ ಕಾಂಗ್ರೆಸ್ ಸರ್ಕಾರ ಮೈಸೂರು ನಗರದ ಅಭಿವೃದ್ಧಿಗೆ ಹತ್ತು ಹಲವು ಯೋಜನೆಗಳನ್ನು ನೀಡಿದೆ. ಗ್ಯಾರಂಟಿ ಯೋಜನೆಗಳ ಜಾರಿಯಿಂದ ಖಜಾನೆ ಖಾಲಿಯಾಗಿದೆ ಎನ್ನುವ ಪ್ರತಿಪಕ್ಷ ನಾಯಕರಿಗೆ ತಿರುಗೇಟು ನೀಡಬೇಕು ಎಂದು ಸಲಹೆ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಮಾತನಾಡಿ, ಜು.18ರಂದು ಪಕ್ಷದ ಕಚೇರಿಯಲ್ಲಿ ನಡೆಯುವ ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಮತ್ತು ಜು.19 ರಂದು ವಿವಿಧ ಯೋಜನೆಗಳ ಶಂಕುಸ್ಥಾಪನೆ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಯುವಕರನ್ನು ಹೆಚ್ಚು ಆಕರ್ಷಿಸಬೇಕು ಎಂದರು.

ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್ ಮಾತನಾಡಿ, ಸಾಧನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂವಿಧಾನದ ಸಂರಕ್ಷಕ ಬಿರುದು ಕೊಡಲು ತೀರ್ಮಾನ ಮಾಡಲಾಗಿದೆ. ಅಂಬೇಡ್ಕರ್ ಸಂವಿಧಾನ ಬರೆದರೆ, ಅದನ್ನು ಉಳಿಸುವ ಕೆಲಸವನ್ನು ಸಿಎಂ ಮಾಡುತ್ತಿದ್ದಾರೆ ಎಂದು ಪ್ರತಿಪಾದಿಸಿದರು.

ಸಭೆಯಲ್ಲಿ ಮಾಜಿ ಮೇಯರ್‌ಗಳಾದ ನಾರಾಯಣ್, ಆರಿಫ್ ಹುಸೇನ್, ಹೆಚ್.ಎನ್. ಶ್ರೀಕಂಠಯ್ಯ, ಪುರುಷೋತ್ತಮ್, ಬಿ.ಕೆ.ಪ್ರಕಾಶ್, ಪುಷ್ಪಲತಾ ಚಿಕ್ಕಣ್ಣ, ಎಂ.ಸಿ.ರಾಜೇಶ್ವರಿ ಪುಟ್ಟಸ್ವಾಮಿ, ಪುಷ್ಪಲತಾ ಜಗನ್ನಾಥ್, ಮಾಜಿ ಉಪ ಮೇಯರ್ ಬಿ.ಸಿದ್ದರಾಜು, ಶಾಂತಕುಮಾರಿ, ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿ ಈಶ್ವರ್ ಚಕ್ಕಡಿ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಚೇಗೌಡನ ಕೊಪ್ಪಲು ರವಿ, ಎನ್.ಎಸ್.ಗೋಪಿನಾಥ್, ನಗರಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಲೋಕೇಶ್ ಪಿಯಾ, ಕೆಪಿಸಿಸಿ ಸದಸ್ಯ ಎನ್.ಭಾಸ್ಕರ್, ರಮೇಶ್ ರಾಯಪ್ಪ, ಮಂಜುನಾಥ್, ನಿತಿನ್ ಗೋಪಿ, ಮನೋಜ್, ಪಲ್ಲವಿ ಬೇಗಂ, ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ, ಸೇವಾದಳ ಅಧ್ಯಕ್ಷ ಎಂ.ಕೆ.ಅಶೋಕ್, ಹಿಂದುಳಿದ ವರ್ಗಗಳ ಕಾಂಗ್ರೆಸ್ ಅಧ್ಯಕ್ಷ ಎನ್.ಆರ್.ನಾಗೇಶ್, ಡಿ.ನಾಗಭೂಷಣ್ ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರು ನಗರ ಕಾಂಗ್ರೆಸ್ ಭವನದಲ್ಲಿ ನಡೆದ ಸಾಧನಾ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಕಾಂಗ್ರೆಸ್ ಮುಖಂಡ ಎಂ.ಶಿವಣ್ಣ ಅವರನ್ನು ಪಕ್ಷದ ಮುಖಂಡರು ಸನ್ಮಾನಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೇಸಿಂಗು ರಾಜಾ2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಐರಾವತ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3 ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಐರಾವತ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾಮನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗುರು–ಶಿಷ್ಯರ ಶ್ರೇಷ್ಠ ಸಂಬಂಧವನ್ನು ಉತ್ತಮಪಡಿಸುವ ಅನಿವಾರ್ಯತೆ ಇದೆ

ಆರ್‌ಎಸ್‌ಎಸ್ ಮುಖಂಡ ಮ.ವೆಂಕಟರಾಮ್ ಜೀ



ಮೈಸೂರಿನ ರಾಹುಲ್ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಹಿರಿಯ ಮುಖಂಡ ಮ.ವೆಂಕಟರಾಮ್ ಜೀ, ಹಿರಿಯ ನ್ಯಾಯವಾದಿಗಳಾದ ಒ.ಶಾಮ್‌ಭಟ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು

ಮೈಸೂರು, ಜು.15–ಮೈಸೂರಿನ ರಾಹುಲ್ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷರು ಹಾಗೂ ಆರ್‌ಎಸ್‌ಎಸ್ ಹಿರಿಯ ಮುಖಂಡರಾದ ಮ.ವೆಂಕಟರಾಮ್ ಜೀ, ಗುರು–ಶಿಷ್ಯರ ಶ್ರೇಷ್ಠವಾದ ಸಂಬಂಧಗಳನ್ನು ಪ್ರಸ್ತುತ ಅವರ ನಡುವೆ ಉತ್ತಮಪಡಿಸುವಂತಹ ಅನಿವಾರ್ಯತೆ ಎದುರಾಗಿದೆ. ತನ್ನ ಶಿಷ್ಯರಿಗೆ ಜ್ಞಾನಾರ್ಜನೆ ನೀಡುವಂತಹ ಹಾಗೂ ಉತ್ತಮ ಮಾರ್ಗದಾತನಾದ ಗುರು ಹಾಗೂ ಗುರುವಿನಿಂದ ಜ್ಞಾನ, ಸಂಸ್ಕಾರ, ಉತ್ತಮ ಗುಣಲಕ್ಷಣಗಳನ್ನು ಪಡೆಯುವಂತಹ ಶಿಷ್ಯರಲ್ಲಿ ಧನ್ಯತೆ, ಕೃತಜ್ಞತೆಯ ಭಾವ ಮರೆಯಾಗುತ್ತಿದೆ. ಏಕೆಂದರೆ ಇಂದು ಶಿಕ್ಷಣವನ್ನು ಹೆಚ್ಚು ಹೆಚ್ಚು ಹಣದಿಂದ ಪಡೆಯಬಹುದು ಎಂಬಂತಹ ಮನಃಸ್ಥಿತಿಯಲ್ಲಿದ್ದೇವೆ. ಶಿಕ್ಷಣವೆಂದರೆ ಜ್ಞಾನ, ಉತ್ತಮ ಮೌಲ್ಯವುಳ್ಳದ್ದು ಎನ್ನುವುದಕ್ಕಿಂತ ಹಣದಿಂದ ಶಿಕ್ಷಣವನ್ನು ಪಡೆಯುವ ಶಿಷ್ಯರಲ್ಲಿ ಗುರು ಭಾವನೆ, ವ್ಯಕ್ತಿಗೌರವ, ಸಾಮಾಜಿಕ ಚಿಂತನೆಗಳನ್ನು ಸಮಾಜ ಹೇಗೆ ನಿರೀಕ್ಷಿಸುತ್ತದೆ? ಎಂದು ಪ್ರಶ್ನಿಸಿದರು.

ಗುರು–ಶಿಷ್ಯರ ಪರಂಪರೆ ಮೌಲ್ಯಾಧಾರಿತ ಶಿಕ್ಷಣ ಸಂಸ್ಕಾರಗಳು ಉತ್ತಮ ನಾಗರಿಕತೆಯ ನಿರ್ಮಾಣದಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದೆ. ಆದ ಕಾರಣ ಸರ್ಕಾರಗಳು ಶಿಕ್ಷಣ ತಜ್ಞರು, ಗುರು–ಶಿಷ್ಯರಲ್ಲಿ ಗೌರವ ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಸಾಮಾಜಿಕ ಮೌಲ್ಯಗಳಿಂದ ಕೂಡಿರುವ ಒಟ್ಟು ಸಮಾಜದ ಪರಿಕಲ್ಪನೆಯಲ್ಲಿ ಪ್ರಾಥಮಿಕ ಹಂತದ ಶಿಕ್ಷಣವನ್ನು ರೂಪಿಸುವುದು ಬಹಳ ಮುಖ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಗರದ ಹಿರಿಯ ನ್ಯಾಯವಾದಿಗಳಾದ ಒ.ಶಾಮ್‌ಭಟ್, ಅಗಸ್ತ್ಯ ಗುರುಕುಲ ಶಾಲೆಯ ಮುಖ್ಯಸ್ಥರು ಹಾಗೂ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾದ ಮಂಜುನಾಥ, ಉದ್ಯಮಿ ನಟರಾಜ್ ಭಾಗವಹಿಸಿದ್ದರು. ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಸೌಮ್ಯಶ್ರೀ ಸ್ವಾಗತಿಸಿದರು. ಸಹಶಿಕ್ಷಕಿ ಶ್ರೀಮತಿ ಮಂಜುಶ್ರೀ ವಂದಿಸಿದರು.

ಮೈಸೂರಿನ ಮಾತೃಮಂಡಳಿ ಬಳಿಯ ವೃತ್ತದ ಪ್ರತಿಮೆ ಸಮಸ್ಯೆ!

ಹಗಲು–ರಾತ್ರಿ ವೃತ್ತ ಕಾಯುವುದೇ ಪೊಲೀಸರ ಕಾಯಕ

- ಕಾನೂನು ತೊಡಕಿನಿಂದ ನಿರ್ಮಾಣಗಳ ಅಡಚಣೆ
- ಶಾಶ್ವತ ಪರಿಹಾರ ಸೂತ್ರ ರೂಪಿಸದ ಜಿಲ್ಲಾಡಳಿತ



ಮೈಸೂರು, ಜು.15(ಬಿಎಲ್‌ಯು)– ಮೈಸೂರಿನ ವೃತ್ತಗಳಲ್ಲಿ ಪ್ರತಿಮೆ ಸ್ಥಾಪನೆ ಸಮಸ್ಯೆಗೆ ಶಾಶ್ವತ ಪರಿಹಾರ ಸೂತ್ರ ರೂಪಿಸದ ಕಾರಣ, ಪೊಲೀಸರು ಅನಿವಾರ್ಯವಾಗಿ ದಿನದ 24 ಗಂಟೆಯೂ ವೃತ್ತ ಕಾವಲು ಕಾಯಬೇಕಾದ ಪರಿಸ್ಥಿತಿ ಬಂದಿದೆ.

ನಗರದ ಒಂಟಿಕೊಪ್ಪಲು ಟೆಂಪಲ್ ರಸ್ತೆಯ ಮಾತೃಮಂಡಳಿ ಶಾಲೆ ಬಳಿಯ ವೃತ್ತಕ್ಕೆ ರಾಷ್ಟ್ರಕವಿ ಕುವೆಂಪು ಅವರ ಹೆಸರನ್ನು ಮೈಸೂರು ನಗರಪಾಲಿಕೆ ಈಗಾಗಲೇ ನಾಮಕರಣ ಮಾಡಿದೆ. ಆದರೆ 2021ರಲ್ಲಿ ಈ ವೃತ್ತದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಸ್ಥಾಪನೆಗೆ ಕೆಲ ಸಂಘಟನೆಗಳು ಮುಂದಾಗಿದ್ದವು. ಅದೇ ವೇಳೆ ಮತ್ತೊಂದು ಗುಂಪು ಅಲ್ಲಿ ಕುವೆಂಪು ಅವರ ಭಾವಚಿತ್ರ ಅಳವಡಿಸಲು ಮುಂದಾಗಿತ್ತು. ಪರಿಣಾಮ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಪರಿಸ್ಥಿತಿ ಅರಿತ ಪೊಲೀಸರು ತಕ್ಷಣ ಕಾರ್ಯೋನ್ಮುಖರಾಗಿ, ಪ್ರತಿಮೆ ಸ್ಥಾಪನೆ ಹಾಗೂ ಭಾವಚಿತ್ರ ಅಳವಡಿಕೆಗೆ ಅವಕಾಶ ನೀಡದೆ, ಬಿಗಿ ಬಂದೋಬಸ್ತ್ ಮಾಡಿದರು. ಪ್ರತಿಭಟನೆ, ಆಕ್ರೋಶ ವ್ಯಕ್ತವಾಯಿತಾದರೂ ಪರಿಸ್ಥಿತಿ ವಿಕೋಪಕ್ಕೆ ತಿರುಗದಂತೆ ಸೂಕ್ತ ಕ್ರಮ ಕೈಗೊಂಡಿದ್ದರು. ಆದಾಗ್ಯೂ ರಾತ್ರಿ ವೇಳೆ ಪ್ರತಿಭಟನೆ ನಡೆದಿದ್ದರಿಂದ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರ ಕ್ರಮ ವಿರೋಧಿಸಿ, ವ್ಯಕ್ತಿಯೊಬ್ಬ ಕತ್ತು ಕೊಯ್ದುಕೊಂಡು ಗಾಯ ಮಾಡಿಕೊಂಡಿದ್ದರು.

ಇಷ್ಟೆಲ್ಲಾ ಬೆಳವಣಿಗೆಯಾದ ಹಿನ್ನೆಲೆಯಲ್ಲಿ ಪೊಲೀಸರು ಈ ವೃತ್ತವನ್ನು ಅತೀ ಸೂಕ್ಷ್ಮ ಸ್ಥಳವಾಗಿ ಪರಿಗಣಿಸಿದ್ದು, ಅಂದಿನಿಂದ ನಿತ್ಯ ಭದ್ರತೆ ಒದಗಿಸಲಾಗಿದೆ. ವೃತ್ತದಲ್ಲಿ ಯಾವುದೇ ಪ್ರತಿಮೆ, ಭಾವಚಿತ್ರ ಅಥವಾ ಫ್ಲೆಕ್ಸ್ ಅಳವಡಿಸದಂತೆ ತೀವ್ರ ನಿಗಾ ವಹಿಸಿದ್ದಾರೆ. ದಿನದ 24 ಗಂಟೆಯೂ ಪಾಳಿಯಲ್ಲಿ ಕಣ್ಗಾವಲಾಗಿದ್ದಾರೆ. ನಾಲ್ಕು ವರ್ಷಗಳಿಂದ ನಿತ್ಯ ಇಬ್ಬರು ಸಬ್‌ಇನ್ಸ್‌ಪೆಕ್ಟರ್ ಸೇರಿದಂತೆ 26 ಪೊಲೀಸರು ವಾಹನ ನಿಲ್ಲಿಸಿಕೊಂಡು ವೃತ್ತ ಕಾಯುವಂತಾಗಿದೆ. ಸದಾ ಪೊಲೀಸರು ಕಾಣಿಸುವುದರಿಂದ ಇದು ಅತೀ ಸೂಕ್ಷ್ಮ ವೃತ್ತ ಎಂಬ ಆತಂಕದ ಭಾವನೆ ಸಾರ್ವಜನಿಕರಲ್ಲಿ ಮೂಡಿರುವುದಂತೂ ನಿಜ.

ಹಲವು ನಿರ್ಮಾಣಗಳ ಅಡಚಣೆ: ಮೈಸೂರಲ್ಲಿ ಕೆಲ ನಿರ್ಮಾಣಗಳು ಸರ್ಕಾರ ಮತ್ತು ಆಸ್ತಿ ಮಾಲೀಕರ ಕಾನೂನು ಹೋರಾಟದಿಂದಾಗಿ ಸಾರ್ವಜನಿಕರಿಗೆ ತಲೆ ನೋವಾಗಿ ಪರಿಣಮಿಸಿವೆ. ಈ ಬಗ್ಗೆ ಮೈಸೂರಿಗರಿಗೆ ಚೆನ್ನಾಗಿ ತಿಳಿದಿದೆ. ಬೆಂಗಳೂರು–ನೀಲಗಿರಿ ರಸ್ತೆ ಸೇರಿದಂತೆ ಹಲವೆಡೆ ಇಂತಹ ಸಮಸ್ಯೆಗಳು ಜೀವಂತವಾಗಿವೆ. ಇಂತಹ ನಿರ್ಮಾಣಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತೆರವುಗೊಳಿಸಬೇಕಾದ ಅನಿವಾರ್ಯತೆಯನ್ನು ಕೋರ್ಟ್‌ಗಳಿಗೆ ಮನವರಿಕೆ ಮಾಡಿಕೊಡುವಲ್ಲಿ ಮೈಸೂರು ಜಿಲ್ಲಾಡಳಿತ, ಸ್ಥಳೀಯ ಸಂಸ್ಥೆಗಳು ವಿಫಲವಾಗಿವೆ. ಇಲ್ಲವೆ ಸಮರ್ಥ ಕಾನೂನು ತಜ್ಞರ ನೆರವು ಪಡೆಯುವಲ್ಲಿಯೂ ಎಡವಿದೆ ಎಂಬುದು ಮನವರಿಕೆ ಆಗುತ್ತಿದೆ.

ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುವ ಸ್ಥಳದಲ್ಲಿ ತೊಡಕಾಗಿರುವ ಇಂತಹ ನಿರ್ಮಾಣಗಳ ತೆರವು ಮಾಡಲು ಪರಿಣಾಮಕಾರಿ ಕ್ರಮ ಕೈಗೊಳ್ಳದಿರುವುದಕ್ಕೆ ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ.

ಈಜು ಸ್ಪರ್ಧೆಯಲ್ಲಿ ಚಿನ್ನದ ಪದಕ



ಮೈಸೂರು, ಜು.15–ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಇತ್ತೀಚೆಗೆ ಏರ್ಪಡಿಸಲಾಗಿದ್ದ ಹಿರಿಯರ ವಿಭಾಗದ ಈಜು ಸ್ಪರ್ಧೆಯಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ತೆರಿಗೆ ಉಪ ಸಮಿತಿಯ ಅಧ್ಯಕ್ಷರು ಹಾಗೂ ವೃತ್ತಿಯಲ್ಲಿ ಸನ್ನದು ಲೆಕ್ಕಿಗರೂ ಆಗಿರುವ ಎಸ್.ಅಚ್ಯುತ ಅವರು 50 ಮೀ. ಫ್ರೀ ಸ್ಟೈಲ್ ಪಂದ್ಯದಲ್ಲಿ ಕೇವಲ 39 ಸೆಕೆಂಡುಗಳಲ್ಲಿ ಗುರಿಯನ್ನು ಮುಟ್ಟಿ ಚಿನ್ನದ ಪದಕವನ್ನು ಮುಡಿಗೇರಿಸಿಕೊಂಡಿರುತ್ತಾರೆ.

ತೆಲಂಗಾಣ: ಕಾಂಗ್ರೆಸ್ ನಾಯಕ ಅನಿಲ್ ಮರೆಲ್ಲಿಗೆ ಗುಂಡಿಕ್ಕಿ ಹತ್ಯೆ

ಮೇದಕ್: ತೆಲಂಗಾಣದ ಮೇದಕ್ ಜಿಲ್ಲೆಯಲ್ಲಿ ಆಡಳಿತರೂಢ ಕಾಂಗ್ರೆಸ್ ನಾಯಕ ಅನಿಲ್ ಮರೆಲ್ಲಿ ಅವರನ್ನು ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ವಾರಿಕುಂಟಂ ಎಕ್ಸ್ ರಸ್ತೆಯಲ್ಲಿ ಸೋಮವಾರ ರಾತ್ರಿ ಅಪರಿಚಿತ ವ್ಯಕ್ತಿಗಳು ಕಾಂಗ್ರೆಸ್ ನಾಯಕನಿಗೆ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಮೃತ ಅನಿಲ್ ಮರೆಲ್ಲಿ ಅವರು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು ಮತ್ತು ಆರೋಪಿಗಳೊಂದಿಗೆ ಅವರು ಕೆಲವು ಭೂ ವ್ಯಾಜ್ಯದಲ್ಲಿ ಭಾಗಿಯಾಗಿರಬಹುದು ಎಂದು ಕೋಲ್ಚಾರಂನ ಸಬ್–ಇನ್ಸ್‌ಪೆಕ್ಟರ್ ಮೊಹಮ್ಮದ್ ಘೌಸ್ ತಿಳಿಸಿದ್ದಾರೆ.

ಮರೆಲ್ಲಿ ಅವರನ್ನು ಹೈದರಾಬಾದ್‌ನಿಂದ ಹಿಂಬಾಲಿಸಿದ ದುಷ್ಕರ್ಮಿಗಳು, ನಂತರ ಅವರ ವಾಹನವನ್ನು ತಡೆದು ಅವರ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಲಾಗಿದ್ದು, ಆರೋಪಿಗಳನ್ನು ಪತ್ತೆಹಚ್ಚುವ ಪ್ರಯತ್ನಗಳು ಮುಂದುವರೆದಿವೆ ಎಂದು ಸಬ್–ಇನ್ಸ್‌ಪೆಕ್ಟರ್ ಘೌಸ್ ಹೇಳಿದ್ದಾರೆ.

ಮೈಸೂರು ಬೇಸಿಗೆ ರೇಸ್

8ನೇ ದಿನ, ಬುಧವಾರ, 16–7–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ಆನೇಕಲ್ ಪ್ಲೇಟ್ –1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ಫ್ರೀ ಸ್ಪಿರಿಟೆಡ್ 2. ರಿಚ್ ಸ್ಟ್ರೈಕ್ 3. ದಿ ಏಂಜಲ್ ಪವರ್

II. ಕೆಮ್ಮಣ್ಣುಗುಂಡಿ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಈಗಲ್ ಬ್ಲಫ್ 2. ಅರಿಕಾಟ್ಟು 3. ಡೇವಿಡ್ ಡಿಲೈಟ್

III. ಮೂಡಿಗೆರೆ ಪ್ಲೇಟ್ –1400 ಮೀ. ರೇಟೆಡ್ 20 ರಿಂದ 45.(ನೋ ವ್ಹಿಪ್). ಮ.3.30ಕ್ಕೆ
1 ಪೋಲರ್ ವಿಂಡ್ 2 ಟು ಹಾಟ್ ಟು ಟಚ್ 3. ಗೋಲ್ಡನ್ ಬರ್ಡ್

IV. M.R.C.ಚಾರಿಟಬಲ್ ಟ್ರಸ್ಟ್ ಟ್ರೋಫಿ –1200 ಮೀ. 3 ವರ್ಷ ಟರ್ವ್ಸ್. ಸಂ.4.00ಕ್ಕೆ
1. ಮೋನ್ 2. ಮೈಸೂರ್ ಫರೋ 3. ನ್ಯಾಚೂರಲ್ ಲುಕ್

V. ಶಿವಾಜಿನಗರ್ ಪ್ಲೇಟ್–1400 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1 ಟಚ್ ಆಫ್ ಗ್ರೇ 2. ಮಿಸ್ಟಿಕ್ ಬಾಂಡ್ 3. ರೈಸ್ ಎ ಬಕ್

VI. ಬ್ಯೂಗಲ್ ರಾಕ್ ಪ್ಲೇಟ್ –1600 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಅಶ್ವ ಕಾಲಿಬಾನಿ 2. ಸಫಿಯಂಟ್ 3. ಔರ್ಲಿ

ದಿನದ ಅತ್ಯುತ್ತಮ	: ಅಶ್ವ ಕಾಲಿಬಾನಿ
ಡಬ್ಬಲ್	: ಈಗಲ್ ಬ್ಲಫ್, ಟಚ್ ಆಫ್ ಗ್ರೇ
ಜಾಕ್‌ಪಾಟ್	: 2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	: 3, 4, 5 ಮತ್ತು 6
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 4, 5 ಮತ್ತು 6
ಎಕ್ಸ್‌ಆಕ್ಟ್	: 1 ರಿಂದ 6

ಟಿಪ್‌ಸ್ಟರ್ ಪಿಜಿಸಿ

ಗುಜರಾತ್‌ನಲ್ಲಿ ಮತ್ತೊಂದು ಸೇತುವೆ ಕುಸಿತ

ಗುಜರಾತ್: ಗುಜರಾತ್‌ನ ಜುನಾಗಢ ಜಿಲ್ಲೆಯಲ್ಲಿ ದುರಸ್ತಿ ಸಮಯದಲ್ಲಿ ಸೇತುವೆಯ ಸ್ಲ್ಯಾಬ್ ಕುಸಿದು ಬಿದ್ದಿದೆ ಸೇತುವೆಯಲ್ಲಿದ್ದ 8 ಜನರು 15 ಅಡಿ ಕೆಳಗೆ ಬಿದ್ದಿದ್ದಾರೆ. ಮಂಗ್ರೋಲ್ ತಾಲೂಕಿನ ಅಜಾಜ್ ಗ್ರಾಮದ ಜುನಾಗಢದಲ್ಲಿ ಈ ದುರಂತ ಸಂಭವಿಸಿದೆ. ಈ ಸೇತುವೆ ಕೆಶೋಡ್ ಅನ್ನು ಮಾಧವಪುರಕ್ಕೆ ಸಂಪರ್ಕಿಸುವ ಪ್ರಮುಖ ರಸ್ತೆಯಾಗಿದ್ದು, ಅಲ್ಲಿ ಪ್ರತಿದಿನ ಅನೇಕ ವಾಹನಗಳು ಸಂಚರಿಸುತ್ತವೆ. ಇಂದು ಬೆಳಿಗ್ಗೆ ಸೇತುವೆಯ ದುರಸ್ತಿ ಕಾರ್ಯ ನಡೆಯುತ್ತಿತ್ತು. ನಂತರ ಇದ್ದಕ್ಕಿದ್ದಂತೆ ಸೇತುವೆಯ ಸ್ಲ್ಯಾಬ್ ಕುಸಿದು ಹಿಟಾಚಿ ಯಂತ್ರವು ದೊಡ್ಡ ಶಬ್ದದೊಂದಿಗೆ ಕೆಳಗೆ ಬಿದ್ದಿತು. ಸೇತುವೆಯ ಸ್ಲ್ಯಾಬ್ ಮೇಲೆ ಕೆಲವರು ನಿಂತಿದ್ದರು. ಸ್ಲ್ಯಾಬ್ ಬಿದ್ದಾಗ ಅವರು ನೇರವಾಗಿ ನದಿಗೆ ಬಿದ್ದರು. ಆದರೆ ಅದೃಷ್ಟವಶಾತ್ ಯಾರಿಗೂ ಗಂಭೀರ ಗಾಯಗಳಾಗಿಲ್ಲ. ಒಂದು ವಾರದಲ್ಲಿ ಗುಜರಾತ್‌ನಲ್ಲಿ ಸೇತುವೆ ಕುಸಿದ ಎರಡನೇ ಘಟನೆ ಇದು. ಜುಲೈ 9ರಂದು, ವಡೋದರಾದ ಗಂಭೀರ್ ಸೇತುವೆ ಕುಸಿದು 22 ಜನರು ಸಾವನ್ನಪ್ಪಿದ್ದರು. ಈ ಸೇತುವೆ ಮಧ್ಯ ಗುಜರಾತ್ ಮತ್ತು ಸೌರಾಷ್ಟ್ರವನ್ನು ಸಂಪರ್ಕಿಸುವ ಪ್ರಮುಖ ಮಾರ್ಗವಾಗಿತ್ತು.

ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಖಾಸಗಿ ವಲಯದಲ್ಲೂ ಮೀಸಲಾತಿ ಅಗತ್ಯ

- ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ
- ಮೀಸಲಾತಿ ಪ್ರಮಾಣ ಹೆಚ್ಚಳಕ್ಕೂ ಆಗ್ರಹ
- ಎಐಸಿಸಿ ಹಿಂದುಳಿದ ವರ್ಗಗಳ ವಿಭಾಗದ ಸಲಹಾ ಸಮಿತಿ ಸಭೆ ಆರಂಭ



ಎಐಸಿಸಿ ಹಿಂದುಳಿದ ವರ್ಗಗಳ ವಿಭಾಗದ ಸಲಹಾ ಸಮಿತಿಯ ಮೊದಲ ಸಭೆಯನ್ನು ಉದ್ಘಾಟಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಬೆಂಗಳೂರು, ಜು.15– ಅವಕಾಶ ವಂಚಿತ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಕಲ್ಪಿಸುವ ದೃಷ್ಟಿಯಿಂದ ಖಾಸಗಿ ವಲಯದಲ್ಲೂ ಮೀಸಲಾತಿಯ ಅಗತ್ಯವಿದೆ ಎಂದು ಪ್ರತಿಪಾದಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸದ್ಯ ನೀಡಲಾಗುತ್ತಿರುವ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಬೇಕು ಎಂದು ಹೇಳಿದ್ದಾರೆ.

ಎಐಸಿಸಿ ಹಿಂದುಳಿದ ವರ್ಗಗಳ ವಿಭಾಗದ ಸಲಹಾ ಸಮಿತಿಯ ಮೊದಲ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳನ್ನು ಆರ್ಥಿಕವಾಗಿ ಸಬಲಗೊಳಿಸುವ ದೃಷ್ಟಿಯಿಂದ ಮೀಸಲಾತಿಯ ಪ್ರಮಾಣ ಹೆಚ್ಚಿಸಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳು ಕಳೆದರೂ ಹಿಂದುಳಿದ ವರ್ಗಗಳಿಗೆ ಸಿಗಬೇಕಾದ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಸಿಕ್ಕಿಲ್ಲ. ದೇಶದ ಸಂಪತ್ತು ಕೆಲವೇ ವರ್ಗಗಳ ಕೈಯ್ಯಲ್ಲಿದೆ, ಇದನ್ನು ನಿವಾರಿಸಿ ಸಾಮಾಜಿಕ ನ್ಯಾಯವನ್ನು ಕಲ್ಪಿಸುವ ದೃಷ್ಟಿಯಿಂದ ಕಾಂಗ್ರೆಸ್ ಪಕ್ಷ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದೆ ಎಂದು ಹೇಳಿದರು.

ಸಾಮಾಜಿಕ ನ್ಯಾಯ ಕಲ್ಪಿಸುವ ದೃಷ್ಟಿಯಿಂದ ಮೀಸಲಾತಿಯ ಪ್ರಮಾಣ ಹೆಚ್ಚಬೇಕಾಗಿದೆ. ಇದಕ್ಕಾಗಿ ಜಾತಿ ಜನಗಣತಿ ಅನಿವಾರ್ಯ ಕ್ರಮ. ಜಾತಿವಾರು ಜನಗಣತಿಯ ಮೂಲಕ ಕ್ರೋಢಿಕೃತವಾದ ಅಂಕಿ ಅಂಶಗಳನ್ನು ಆಧರಿಸಿ ಮೀಸಲಾತಿ ಪದ್ಧತಿಯಲ್ಲಿ ಬದಲಾವಣೆಗಳನ್ನು ರೂಪಿಸಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಮಾಜಿ ಪ್ರಧಾನಿ ದಿವಂಗತ ಪಿ.ವಿ.ನರಸಿಂಹರಾವ್ ಅವರ ಅವಧಿಯಲ್ಲಿ ಮಂಡಲ ಆಯೋಗದ ವರದಿ ಜಾರಿಗೊಳಿಸಲಾಯಿತು. ಇದು ಹಿಂದುಳಿದ ವರ್ಗಗಳ ಪಾಲಿಗೆ ಅತ್ಯಂತ ಚಾರಿತ್ರಿಕ ಕ್ರಮವಾಗಿದೆ ಅದೇ ರೀತಿ ಮಾಜಿ ಪ್ರಧಾನಿ ದಿವಂಗತ ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಶೈಕ್ಷಣಿಕ ಸಂಸ್ಥೆ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ಮೀಸಲಾತಿ ನೀಡುವ ಮೂಲಕ ಕಾಂಗ್ರೆಸ್ ಪಕ್ಷ ಹಿಂದುಳಿದ ವರ್ಗಗಳ ಪರ ಎಂಬುದನ್ನು ಸಾಬೀತುಪಡಿಸಿದೆ. ಈ ಪರಂಪರೆಯನ್ನು ಮುಂದುವರಿಸಬೇಕಾದ ಅನಿವಾರ್ಯತೆ ಈಗ ಉಂಟಾಗಿದೆ ಎಂದು ತಿಳಿಸಿದರು.

ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಕಲ್ಪಿಸುವ ದೃಷ್ಟಿಯಿಂದ ಯುಪಿಎ ಸರ್ಕಾರ ಜಾತಿವಾರು ಜನಗಣತಿಗೆ ತೀರ್ಮಾನ ತೆಗೆದುಕೊಂಡಿತ್ತು. ಆದರೆ ಆ ಸರ್ಕಾರ ಪತನ ಹೊಂದುವ ಮೂಲಕ ಹಿಂದುಳಿದ ವರ್ಗಗಳ ಆಶೋತ್ತರಗಳು ಈಡೇರಲಿಲ್ಲ ಎಂದು ವಿಷಾದಿಸಿದರು.

ಸದ್ಯ ನಡೆಯುತ್ತಿರುವ ಸಾಮಾನ್ಯ ಜನಗಣತಿಯ ಸಮಯದಲ್ಲಿ ಜಾತಿವಾರು ಜನಗಣತಿಯು ನಡೆಯಲಿದೆ. ಇದು ಕೇವಲ ತಲೆ ಎಣಿಸುವ ಪ್ರಕ್ರಿಯೆ ಅಲ್ಲ, ಅದರ ಬದಲಿಗೆ ದೇಶದ ಎಲ್ಲ ಸಮುದಾಯಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯ ಬಗ್ಗೆ ಮಾಹಿತಿ ಸಂಗ್ರಹಿಸುವ ಅತ್ಯಂತ ಮಹತ್ವದ ಕಾರ್ಯವಾಗಿದೆ ಎಂದು ಬಣ್ಣಿಸಿದರು.

ಸದ್ಯ ಆಯೋಜಿಸಿರುವ ಸಭೆಯ ಮೂಲಕ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಚಿಂತನೆ ನಡೆಯಬೇಕು ಸರ್ಕಾರಿ ಉದ್ಯೋಗಗಳು ಇಲ್ಲಿ ಮಾತ್ರವಲ್ಲ ಖಾಸಗಿ ವಲಯದಲ್ಲೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸಿಗಬೇಕು. ಸರ್ಕಾರದ ಕಾಮಗಾರಿಗಳಲ್ಲಿ ಈ ವರ್ಗಗಳಿಗೆ ಮೀಸಲಾತಿ ನೀಡುವ ಮೂಲಕ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಸಮಿತಿ ಸಂಚಾಲಕ ಡಾ. ಅನಿಲ್ ಜೈ ಹಿಂದ್, ಡಿಸಿಎಂ ಡಿ.ಕೆ.ಶಿವಕುಮಾರ್, ವೀರಪ್ಪ ಮೊಯಿಲಿ, ಅಶೋಕ್ ಗೆಹ್ಲೋಟ್, ಬಿ.ಕೆ.ಹರಿಪ್ರಸಾದ್, ವಿ.ಹನುಮಂತ ರಾವ್, ಪುದುಚೇರಿ ಮಾಜಿ ಸಿಎಂ ವಿ.ನಾರಾಯಣ ಸ್ವಾಮಿ, ಸಂಸದರಾದ ಅಡೂರು ಪ್ರಕಾಶ್, ಜ್ಯೋತಿ ಮಣಿ ಮತ್ತಿತರರು ಭಾಗವಹಿಸಿದ್ದರು.

ಸಕಲ ಸರ್ಕಾರಿ ಗೌರವದೊಂದಿಗೆ ಸರೋಜಾದೇವಿ ಅಂತ್ಯಕ್ರಿಯೆ



ಬೆಂಗಳೂರು, ಜು.15– ಸೋಮವಾರ ನಿಧನರಾದ ಕನ್ನಡ ಚಿತ್ರರಂಗದ ಹಿರಿಯ ನಟಿ ಬಿ.ಸರೋಜಾ ದೇವಿ ಅವರು ಮಂಗಳವಾರ ತಮ್ಮ ಹುಟ್ಟೂರು ಚನ್ನಪಟ್ಟಣದ ದಶವಾರದ ಮಣ್ಣಲ್ಲಿ ಮಣ್ಣಾಗಿದ್ದು, ಅಭಿನಯ ಸರಸ್ವತಿ ಇನ್ನೂ ನೆನಪು ಮಾತ್ರ.

ಇಂದು ಮಧ್ಯಾಹ್ನ ಸಕಲ ಸರ್ಕಾರಿ ಗೌರವದೊಂದಿಗೆ, ಒಕ್ಕಲಿಗ ಸಂಪ್ರದಾಯದಂತೆ ಸರೋಜಾದೇವಿ ಅವರ ಅಂತ್ಯಕ್ರಿಯೆ ನೆರವೇರಿತು. ದಶವಾರದಲ್ಲಿ ಅವರ ತಾಯಿಯ ಸಮಾಧಿ ಪಕ್ಕವೇ ಅಂತ್ಯಸಂಸ್ಕಾರ ನಡೆದಿದೆ.

ಸರೋಜಾದೇವಿ ಅವರ ಪುತ್ರ ಗೌತಮ್ ಅವರು ಅಂತಿಮ ವಿಧಿ–ವಿಧಾನಗಳನ್ನು ಪೂರೈಸಿದರು. ಇದಕ್ಕೂ ಮುನ್ನ ಪೊಲೀಸರು ಕುಶಾಲತೋಪು ಸಿಡಿಸುವ ಮೂಲಕ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಸರೋಜಾ ದೇವಿ ಅವರ ಕುಟುಂಬಸ್ಥರು, ಚಿತ್ರರಂಗದ ಗಣ್ಯರು ಹಾಗೂ ಅಭಿಮಾನಿಗಳು ಭಾಗವಹಿಸಿದ್ದರು.

ಅಂತ್ಯಸಂಸ್ಕಾರಕ್ಕೂ ಮುನ್ನ ಅವರ ಪಾರ್ಥಿವ ಶರೀರವನ್ನು ಬೆಂಗಳೂರಿನಿಂದ ಮೆರವಣಿಗೆ ಮೂಲಕ ತರಲಾಯಿತು. ಬಳಿಕ ಪಲ್ಲಕ್ಕಿಯಲ್ಲಿಟ್ಟು ಅವರ ಪಾರ್ಥಿವ ಶರೀರವನ್ನು ತಂದು ಅಂತ್ಯಸಂಸ್ಕಾರ ಮಾಡಲಾಯಿತು.

1955ರಲ್ಲಿ ಮಹಾಕವಿ ಕಾಳಿದಾಸ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ್ದ ಸರೋಜಾದೇವಿ ಅವರ ಅಭಿನಯದ ಮೊದಲ ಚಿತ್ರವೇ ರಾಷ್ಟ್ರ ಪ್ರಶಸ್ತಿಗೆ ಭಾಜನ ವಾಗಿತ್ತು ಭಾರತೀಯ ಚಿತ್ರರಂಗದಲ್ಲಿ ಮಿಂಚಿದ್ದ ಸರೋಜಾ ದೇವಿ ಅವರು ಕನ್ನಡ, ತಮಿಳು, ತೆಲುಗು ಮತ್ತು ಹಿಂದಿ ಚಿತ್ರಗಳಲ್ಲಿ ನಟಿಸಿ, ಸೈ ಅನಿಸಿಕೊಂಡಿದ್ದರು.

ರಸ್ತೆಗೆ ಹೆಸರಿಡುವ ಬಗ್ಗೆ ಚರ್ಚೆ: 'ಬಹುಭಾಷಾ ನಟಿ ಬಿ. ಸರೋಜಾದೇವಿ ಅವರ ಹೆಸರನ್ನು ಅವರು ವಾಸಿಸುತ್ತಿದ್ದ ರಸ್ತೆಗೆ ಇಡುವ ಬಗ್ಗೆ ಗ್ರೇಟರ್ ಬೆಂಗ ಳೂರು ಪ್ರಾಧಿಕಾರದ(ಜಿಬಿಎ) ಜೊತೆ ಚರ್ಚಿಸುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಅವರು ಮಾಹಿತಿ ನೀಡಿದ್ದಾರೆ.

ಬಿ.ಸರೋಜಾದೇವಿ ಒಬ್ಬ ಮೇರುನಟಿ. ಕನ್ನಡ, ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲಿ ಪಾತ್ರಗಳನ್ನು ಮಾಡಿ ಸೈ ಎನಿಸಿಕೊಂಡಿದ್ದ ಅದ್ಭುತ ನಟಿ. ಅನೇಕ ಬಾರಿ ಸರೋಜಾದೇವಿ ಅವರನ್ನು ಭೇಟಿ ಮಾಡಿದ್ದೇನೆ. ಎಲ್ಲರೊಂದಿಗೆ ಆತ್ಮೀಯವಾಗಿ, ಪ್ರೀತಿಯಿಂದ ಮಾತನಾಡುತ್ತಿದ್ದರು. ಅವರ ನಿಧನ ಇಡೀ ಚಿತ್ರರಂಗಕ್ಕೆ ದೊಡ್ಡ ಆಘಾತವನ್ನುಂಟು ಮಾಡಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಚಿಕ್ಕವಯಸ್ಸಿನಲ್ಲಿಯೇ ಸಿನಿಮಾರಂಗವನ್ನು ಪ್ರವೇಶಿಸಿ ಏಳು ದಶಕಗಳ ಕಾಲ ಕಲಾವಿದೆಯಾಗಿದ್ದವರು. 'ಅಭಿನಯ ಸರಸ್ವತಿ' ಎಂಬ ಬಿರುದು ಚಿಕ್ಕವಯಸ್ಸಿಗೆ ದೊರೆತಿತ್ತು. ಸರೋಜಾದೇವಿ ಅವರು ಯಾವುದೇ ಪಾತ್ರಕ್ಕೂ ಜೀವ ತುಂಬುತ್ತಿದ್ದರು. ಖಾಸಗಿ ಜೀವನದಲ್ಲಿಯೂ ಶಿಸ್ತುಬದ್ಧ ಜೀವನವನ್ನು ನಡೆಸಿದವರು ಎಂದಿದ್ದಾರೆ.

ಕನ್ನಡ ಚಿತ್ರರಂಗ ಬೆಳೆಯಲು ಅಪಾರ ಕೊಡುಗೆ ಯನ್ನು ಕೊಟ್ಟಿದ್ದಾರೆ. ಅವರ ಸಾವಿನಿಂದ ಚಿತ್ರರಂಗಕ್ಕೆ ಅಪಾರವಾದ ನಷ್ಟವಾಗಿದೆ. ಸರೋಜಾದೇವಿ ಅವರ ಹೆಸರನ್ನು ಅವರು ವಾಸಿಸುತ್ತಿದ್ದ ರಸ್ತೆಗೆ ಇಡುವ ಬಗ್ಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜೊತೆ ಚರ್ಚಿಸುತ್ತೇನೆ ಎಂದು ತಿಳಿಸಿದ್ದಾರೆ.

ಬಿ.ಸರೋಜಾದೇವಿ ಭಾರತೀಯ ಚಿತ್ರರಂಗದ ಆದರ್ಶಪ್ರಾಯ ಐಕಾನ್: ಪ್ರಧಾನಿ ಮೋದಿ



ಬೆಂಗಳೂರು, ಜು.15– ದಕ್ಷಿಣ ಭಾರತದ ಹಿರಿಯ ನಟಿ, ಅಭಿನಯ ಸರಸ್ವತಿ ಬಿ.ಸರೋಜಾದೇವಿ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ.

ಖ್ಯಾತ ಚಲನಚಿತ್ರ ನಟಿ ಬಿ.ಸರೋಜಾದೇವಿ ಅವರ ನಿಧನದಿಂದ ದುಃಖಿತ ನಾಗಿದ್ದೇನೆ. ಭಾರತೀಯ ಸಿನಿಮಾ ಮತ್ತು ಸಂಸ್ಕೃತಿಯ ಆದರ್ಶಪ್ರಾಯ ಐಕಾನ್ ಆಗಿ ಸರೋಜಾದೇವಿ ನೆನಪಿನಲ್ಲಿ ಉಳಿಯಲಿದ್ದಾರೆ. ಅವರ ವೈವಿಧ್ಯಮಯ ಅಭಿನಯ ಅಳಿಸಲಾಗದ ಗುರುತುಗಳನ್ನು ಬಿಟ್ಟಿವೆ. ವಿವಿಧ ಭಾಷೆಗಳನ್ನು ವ್ಯಾಪಿಸಿರುವ ಮತ್ತು ವೈವಿಧ್ಯ ಮಯ ವಿಷಯಗಳನ್ನು ಒಳಗೊಂಡ ಕಾರ್ಯ ಅವರ ಬಹುಮುಖ ಸ್ವಭಾವವನ್ನು ಎತ್ತಿ ತೋರಿಸುತ್ತದೆ. ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ನನ್ನ ಸಂತಾಪಗಳು. ಓಂ ಶಾಂತಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ನನಗೂ ಸಿನಿಮಾದಲ್ಲಿ ನಟಿಸುವಂತೆ ಹೇಳಿದ್ದರು: ಡಿಕೆಶಿ

ಅವರ ಹೆಸರು ಶಾಶ್ವತವಾಗಿ ಉಳಿಸಲು ಕ್ರಮ



ರಾಮನಗರ, ಜು.15– ಬಿ.ಸರೋಜಾದೇವಿ ಅವರು ಖ್ಯಾತ ನಟಿ. ಅವರ ಕಲಾಸೇವೆಗಾಗಿ ಅವರ ಹೆಸರು ಶಾಶ್ವತವಾಗಿ ಉಳಿಯುವಂತೆ ಮಾಡಲು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಕಾರ್ಯಕ್ರಮ ರೂಪಿಸಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ದಶಾವರದಲ್ಲಿ ಬಿ.ಸರೋಜಾದೇವಿ ಅವರ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಿ, ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸರೋಜಾದೇವಿ ಅವರು ನನಗೆ ಸಣ್ಣ ವಯಸ್ಸಿನಿಂದಲೂ ಬಹಳ ಪರಿಚಯ. ನಾನು ಆರಂಭದಲ್ಲಿ ಸಚಿವನಾದಾಗ, ನನ್ನನ್ನು ಕರೆದು ನೀನು ಸಿನಿಮಾಗಳಲ್ಲಿ ನಟನೆ ಮಾಡಬೇಕು ಎಂದು ಹೇಳಿದ್ದರು. ಅವರು ನಮ್ಮ ಜಿಲ್ಲೆಯವರು. ಹಾಗಾಗಿ ಅವರ ಅಂತಿಮ ಸಂಸ್ಕಾರವನ್ನು ಇಲ್ಲಿ ಮಾಡುತ್ತಿದ್ದೇವೆ ಎಂದು ಹೇಳಿದರು.

ಮನುಷ್ಯನ ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಜನನ ಉಚಿತ, ಮರಣ ಖಚಿತ. ಈ ಹುಟ್ಟು ಸಾವಿನ ನಡುವೆ ನಾವು ಏನು ಸಾಧನೆ ಮಾಡುತ್ತೇವೆ ಅದು ಶಾಶ್ವತವಾಗಿ ಉಳಿಯುತ್ತವೆ. ಬಹಳ ಚಿಕ್ಕ ವಯಸ್ಸಿಗೆ ಭಾರತ ಸರ್ಕಾರದ ಪದ್ಮವಿಭೂಷಣ ಪ್ರಶಸ್ತಿ ಪಡೆದು ಕೊಂಡಿದ್ದಾರೆ. ಆ ಕಾಲದಲ್ಲಿ ಆ ವಯಸ್ಸಿಗೆ ಯಾರೂ ಆ ಪ್ರಶಸ್ತಿ ಪಡೆದಿರಲಿಲ್ಲ. ಅವರ ಹೆಸರು ಶಾಶ್ವತವಾಗಿ ಉಳಿದುಕೊಳ್ಳಲು ರಸ್ತೆಗಳಿಗೆ ಅವರ ಹೆಸರಿಡುವ ಕಾರ್ಯಕ್ರಮವನ್ನು ರೂಪಿಸಬೇಕು ಎಂದು ನಮ್ಮ ಶಾಸಕ ರಾದ ಯೋಗೇಶ್ವರ್ ಅವರು ಒತ್ತಾಯ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಬಿಡಿಎ ಅಥವಾ ಪಾಲಿಕೆಯಲ್ಲಿ ಈ ವಿಚಾರ ಚರ್ಚೆ ಮಾಡಿ ಈ ಕೆಲಸ ಮಾಡುತ್ತೇವೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ ಜನಿಸಿ, ಅವರು ಮಾಡಿರುವ ಅಪಾರವಾದ ಕಲಾ ಸೇವೆ ಅಪ್ರತಿಮವಾದುದ್ದು. ಅವರು ಎಂದಿಗೂ ಒಂದೇ ಒಂದು ವಿವಾದಕ್ಕೆ ಸಿಲುಕಲಿಲ್ಲ. ಎಲ್ಲಾ ವರ್ಗದ ಜನ ಅವರನ್ನು ಬಹಳ ಪ್ರೀತಿ, ಗೌರವ ದಿಂದ ಕಂಡಿದ್ದಾರೆ. ರಾಜ್ಯಕ್ಕೆ ಸಮಸ್ಯೆ ಎದುರಾದಾಗ ಅವರು ನಮ್ಮ ಜೊತೆ ನಿಂತು ರಾಜ್ಯದ ಹಿತ ಕಾಪಾಡಿದ್ದಾರೆ. ಕಲೆಗೆ ಹೆಚ್ಚಿಗೆ ಪ್ರೋತ್ಸಾಹ ನೀಡಿರುವುದನ್ನು ನಾವು ಸ್ಮರಿಸಬೇಕು. ಸರ್ಕಾರದ ಪರವಾಗಿ, ಈ ಜಿಲ್ಲೆಯವನಾಗಿ ಅವರಿಗೆ ಸಕಲ ಸರ್ಕಾರಿ ಗೌರವ ಸಲ್ಲಿಸಲಾಗುತ್ತಿದೆ ಎಂದು ಹೇಳಿದರು. ಅವರ ಪ್ರತಿಮೆ ನಿರ್ಮಾಣ ಮಾಡಲಾಗುವುದೇ ಎಂದು ಕೇಳಿದಾಗ, ಪ್ರತಿಮೆ ಮುಖ್ಯವಲ್ಲ. ಅವರ ವಿಚಾರದಲ್ಲಿ ಏನು ಮಾಡಬೇಕು ಎಂಬುದನ್ನು ನಾವು ಚರ್ಚೆ ಮಾಡಿ ತಿಳಿಸುತ್ತೇವೆ. ಅವರ ಹೆಸರು ಉಳಿದು ಕೊಳ್ಳುವಂತೆ ಏನುಬೇಕೋ ಅದನ್ನು ಮಾಡುತ್ತೇವೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂವಿಧಾನ ಸಂರಕ್ಷಕ ಬಿರುದು ನೀಡಲು ಅವಕಾಶ ನೀಡಿ

ಕೆಪಿಸಿಸಿ ಸಂಯೋಜಕ ಭಾಸ್ಕರ್ ಆಗ್ರಹ



ಮೈಸೂರು, ಜು.15(ಬಿಎಲ್‌ಯು)– ಮೈಸೂರಿನಲ್ಲಿ ನಡೆಯುವ ಸರ್ಕಾರದ ಸಾಧನಾ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂವಿಧಾನ ಸಂರಕ್ಷಕ ಬಿರುದು ನೀಡಲು ಅವಕಾಶ ಕಲ್ಪಿಸಬೇಕು ಎಂದು ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್ ಶಾಸಕ ಕೆ.ಹರೀಶ್‌ಗೌಡರನ್ನು ಆಗ್ರಹಿಸಿದರು.

ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಮಾಜವಾದಿ ಹೋರಾಟದ ಹಿನ್ನೆಲೆಯುಳ್ಳ ಸಿದ್ದರಾಮಯ್ಯ ಅವರು ಸಂವಿಧಾನ ಬದ್ಧವಾಗಿ ಆಡಳಿತ ನಡೆಸುತ್ತಿದ್ದಾರೆ ಎಂದು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂವಿಧಾನ ಅಧ್ಯಯನ ಪೀಠ ಸ್ಥಾಪನೆ, ನ್ಯಾಯಾಲಯಗಳಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಕೆಗೆ ಆದೇಶ ಮಾಡಿದ್ದಾರೆ. ಈ ಮೂಲಕ ಸಂವಿಧಾನ ಬದ್ಧವಾಗಿ ಸಿದ್ದರಾಮಯ್ಯ ಆಡಳಿತ ನಡೆಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಆದ ಕಾರಣ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ಸಿದ್ದರಾಮಯ್ಯ ಅವರಿಗೆ ಸಂವಿಧಾನ ಸಂರಕ್ಷಕ ಬಿರುದು ನೀಡಲು ಅವಕಾಶ ನೀಡಬೇಕು ಎಂದು ಭಾಸ್ಕರ್ ಆಗ್ರಹಿಸಿದ್ದಾರೆ.

ಇದಕ್ಕೆ ಸಕರಾತ್ಮಕವಾಗಿ ಸ್ಪಂದಿಸಿದ ಶಾಸಕ ಕೆ.ಹರೀಶ್‌ಗೌಡ ಅವರು, ತಮ್ಮ ಸಲಹೆ ಅಮೂಲ್ಯ ವಾಗಿದ್ದು, ಈ ಬಗ್ಗೆ ಸಿದ್ದರಾಮಯ್ಯ ಅವರೊಡನೆ ಚರ್ಚೆ ಮಾಡೋಣ. ಸಾಧನ ಸಮಾವೇಶ ಸರ್ಕಾರದ ವತಿಯಿಂದ ಆಯೋಜನೆ ಮಾಡ ಲಾಗಿದೆ. ಆದ ಕಾರಣ ಕಾಂಗ್ರೆಸ್ ಪಕ್ಷದ ವತಿಯಿಂದ ಶೀಘ್ರದಲ್ಲೇ ಸಮಾವೇಶ ಮಾಡಿ ಬಿರುದು ನೀಡೋಣ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಆದರ ಮಾಲೀಕರಾದ, ಕೇರಳ ರಾಜ್ಯ, ತ್ರಿಸ್ಸೂರ್ ಜಿಲ್ಲೆ, ಮುಕುಂದಪುರಂ, ಕಟ್ಟೂರ್, ಪಲಕ್ಕಲ್ ರ ವಾಸಿಯಾದ (1). ಶ್ರೀ. ಪಿ. ಫೈಜಲ್ ರಹಮಾನ್ ಬಿನ್. ಪಿ. ಎ. ಅಬ್ದುಲ್ ರಹಮಾನ್ ಮತ್ತು ಕೇರಳ ರಾಜ್ಯ, ತ್ರಿಸ್ಸೂರ್ ಜಿಲ್ಲೆ, ಇರಿಂಜಾಲಕುಡ ಉತ್ತರ, ಎಸ್. ಎನ್. ನಗರ್, ಕ–ರಿಪರಂಬಿಲ್ ಹೌಸ್ ರ ವಾಸಿಯಾದ (2). ರಶೀದ್ ಕೆ.ಕೆ. @ ಕೆ. ಆರ್. ರಶೀದ್ ಬಿನ್. ಕೆ.ಎ. ಕಾಸಿಂ, ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ಮದರಗಳ್ಳಿ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳ ಕೃಷಿ ಜಮೀನು

ಸರ್ವೇ ನಂಬರ್–115/2, ವಿಸ್ತೀರ್ಣ 02 ಎಕರೆ, 00 ಗುಂಟೆ, ಚೆಕ್ಕುಬಂದಿ : ಪೂರ್ವ ಸರ್ವೆ ನಂಬರ್ 115/1, ಪಶ್ಚಿಮ ಸರ್ವೆ ನಂಬರ್ 113, ಉತ್ತರ ಸರ್ವೆ ನಂಬರ್ 114, ದಕ್ಷಿಣ ಸರ್ವೆ ನಂಬರ್ 115/3

ಸರ್ವೇ ನಂಬರ್–115/3, ವಿಸ್ತೀರ್ಣ 01 ಎಕರೆ, 20 ಗುಂಟೆ, ಚೆಕ್ಕುಬಂದಿ : ಪೂರ್ವ ಸರ್ವೆ ನಂಬರ್ 115/1, ಪಶ್ಚಿಮ ಸರ್ವೆ ನಂಬರ್ 113, ಉತ್ತರ ಸರ್ವೆ ನಂಬರ್ 115/2, ದಕ್ಷಿಣ ಸರ್ವೆ ನಂಬರ್ 116.

Sd/- **MANZOUR SHARIFF**
Advocate, (KAR/1604/2020
#67/7A, PRI Complex, N.S. Road,
Fort Mohalla, Mysore - 570001
Mob: **8951582638**

ಮೈಸೂರು : 15/07/2025

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ, ಅದಕ್ಕೆ ಪತ್ರಿಕೆ ಬಾಧ್ಯಸ್ಥರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

Jayachamaraja Wadiyar Golf Club

Maharana Prathap Singhji Road, Nazarbad, Mysore – 570 010
Phone: 0821-2538457 / 2413387, 8217789599

Date: 15-07-2025

SPECIAL GENERAL BODY MEETING - NOTICE

Special General Body Meeting is scheduled to be held on Sunday 20July 2025 at 10.00 a.m. Notices have been dispatched to Hon. Members by post. Those members who have not received the notice are kindly requested to treat this publication as invitation and requested to attend without fail.

Sd/- President — Sd/- Hon. Secretary

IN THE COURT OF THE 1st ADDITIONAL SENIOR CIVIL JUDGE (Sr.Div) & C.J.M. AT MYSORE
O.S. NO. 1709/2023

Plaintiff : Canara Bank
V/s
Defendant : Darshan Kumar. S. S/o Late Subbanna, R/at No. 347/A. G-Block, 11th Cross, Ramakrishna nagara, Mysore - 22

PUBLIC NOTICE

My Clint **CANARA BANK**, Vivekananda Nagara Branch, Mysore, filed the above Case **O.S. NO. 1709/2023** against you of Defendant. **DARSHAN KUMAR.S** S/o Late Subbanna, R/at No. 347/A, "G" block, 11th Cross, Ramakrishna Nagara, Mysore-22, before the **1st Additional Senior Civil Judge (Sr.Div) & C.J.M at Mysore** and pray for recovery of money of you DARSHAN KUMAR.S.

The Hon'ble 1st Additional Senior Civil Judge (Sr.Div) & C.J.M at Mysore, was issued the Suit Summons to Defendant of you, but the Suit Summons was not served since your evaded. Further the Hon'ble court has ordered issue of Suit Summons to Defendant of you, by way of Registered post and neither has it not been served since your evading, hence the Hon'ble 1st Additional Senior Civil Judge (Sr.Div) & C.J.M at Mysore, issued the Paper Publication for Suit Summons to Defendant of you.

Hence the Hon'ble 1stAdditional Senior Civil Judge (Sr.Div) & C.J.M at Mysore, posted for above mentioned case to appearance of defendant of you Darshan Kumar.S, hence you or your council appear before Hon'ble 1st Additional Senior Civil Judge (Sr.Div) & C.J.M at Mysore on **30/07/2025** at 11.00 A.M & filed objection if any other wise the court consider to exparty order.

Given under my hand and seal this 10-July-2025

Advocate for Plaintiff
D.B. Praveen. B.A.L.L.B.
Advocate KAR 2085/2007
#178/1, 1st Floor, 11th Main, 5th Cross,
Near Javaregowda Park, Saraswathipuram, Mysore.

By Order of the Court
Sd/- Shirasthedar
1st Additional Senior Civil Judge (Sr.Div) & CJM Court, Mysore

ಜಿಲ್ಲಾ ಪಂಚಾಯತಿ ಮೈಸೂರು — ತಾಲ್ಲೂಕು ಪಂಚಾಯತಿ, ಪಿರಿಯಾಪಟ್ಟಣ

ಕಂಪಲಾಪುರ ಗ್ರಾಮ ಪಂಚಾಯತಿ ಕಾರ್ಯಾಲಯ

ಪಿರಿಯಾಪಟ್ಟಣ ತಾಲ್ಲೂಕು — kamplapura.pptn.mys@gmail.com

ಸಂಖ್ಯೆ: ಗ್ರಾ.ಪಂ.ಕಂ/42/2025–26 — ದಿನಾಂಕ: 11–07–2025

ಅಂಗಡಿ ಮಳಿಗೆಗಳ ಮರು ಹರಾಜು ಮತ್ತು ಕೆರೆಗಳ (ಮೀನು ಪಾಶುವಾರು) ಬಹಿರಂಗ ಹರಾಜು ಪ್ರಕಟಣೆ

ವಿಷಯ:– ಕಂಪಲಾಪುರ ಗ್ರಾಮ ಪಂಚಾಯತಿಯ ಅಂಗಡಿ ಮಳಿಗೆಗಳ ಮರು ಹರಾಜು ಮತ್ತು ಕೆರೆಗಳ (ಮೀನು ಪಾಶುವಾರು) ಬಹಿರಂಗ ಹರಾಜು ಕುರಿತು.

ಉಲ್ಲೇಖ: 1. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ–1993, ಪ್ರಕರಣ–209
2. ದಿನಾಂಕ:–10–07–2025 ರಂದು ನಡೆದ ಕಂಪಲಾಪುರ ಗ್ರಾ. ಪಂ. ಸಾಮಾನ್ಯ ಸಭೆ ನಿರ್ಣಯ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮತ್ತು ಉಲ್ಲೇಖ–2ರ ನಿರ್ಣಯದಂತೆ ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು, ರಾವಂದೂರು ಹೋಬಳಿ, ಕಂಪಲಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಂಪಲಾಪುರ ಗ್ರಾಮದಲ್ಲಿರುವ ಒಟ್ಟು 2 ವಾಣಿಜ್ಯ ಮಳಿಗೆಗಳ ಮರು ಹರಾಜು ಮತ್ತು ಚೆಕ್ಕಾ ಗ್ರಾಮದ 4 ಕೆರೆಗಳ (ಮೀನು ಪಾಶುವಾರು) ಹರಾಜನ್ನು ಗ್ರಾಮ ಪಂಚಾಯತಿ ಕಛೇರಿಯ ಸಭಾಂಗಣದಲ್ಲಿ ದಿನಾಂಕ:–21.07.2025 ರ ಸೋಮವಾರದಂದು ಮಧ್ಯಾಹ್ನ 12.00 ಗಂಟೆಗೆ ಬಹಿರಂಗವಾಗಿ ಹರಾಜು ಮಾಡಲಾಗುವುದು.

ಅಂಗಡಿ ಮಳಿಗೆಗಳ ಹರಾಜು ವಿವರ

ಕ್ರಮ ಸಂಖ್ಯೆ	ಮಳಿಗೆಗಳ ಸಂಖ್ಯೆ	ಮಳಿಗೆಯ ವಿಸ್ತೀರ್ಣ	ವಾಣಿಜ್ಯ ಮಳಿಗೆ ಇರುವ ಸ್ಥಳ	ಹರಾಜು ಕೂಗುವ ಠೇವಣಿ ಮೊಬಲಗು (ರೂ.ಗಳಲ್ಲಿ)	ಹರಾಜು ಅವಧಿ
1	1	123.50 ಚ.ಅಡಿ	ಕಂಪಲಾಪುರ ಗ್ರಾಮದ ಬಸ್ ನಿಲ್ದಾಣದ ಬಳಿ	10,000/–	(2 ವರ್ಷಗಳ ಅವಧಿ)
2	3	120.90 ಚ.ಅಡಿ	ಕಂಪಲಾಪುರ ಗ್ರಾಮದ ಬಸ್ ನಿಲ್ದಾಣದ ಬಳಿ		

ಕೆರೆಗಳ (ಪಾಶುವಾರು) ಹರಾಜು ವಿವರಗಳು

ಕ್ರಮ ಸಂಖ್ಯೆ	ಹರಾಜು ವಿವರ	ಠೇವಣಿ ಹಣ (ರೂ.ಗಳಲ್ಲಿ)	ಹರಾಜು ಅವಧಿ
1	ಚೆಕ್ಕಾ ಗ್ರಾಮದ ಮಾಕನಕಟ್ಟೆ (ಮೀನು ಪಾಶುವಾರು)	5,000/–	(3 ವರ್ಷಗಳ ಅವಧಿ)
2	ಚೆಕ್ಕಾ ಗ್ರಾಮದ ಮಾಕನಕಟ್ಟೆ (ಮೀನು ಪಾಶುವಾರು)		
3	ಚೆಕ್ಕಾ ಗ್ರಾಮದ ಚಿಕ್ಕಕೆರೆ (ಮೀನು ಪಾಶುವಾರು)		
4	ಚೆಕ್ಕಾ ಗ್ರಾಮದ ಅತ್ತಿಕಟ್ಟೆ (ಮೀನು ಪಾಶುವಾರು)		

ವಿಶೇಷ ಸೂಚನೆ:– ಗ್ರಾಮ ಪಂಚಾಯತಿಯ ವಾಣಿಜ್ಯ ಮಳಿಗೆಗಳ ಮರು ಹರಾಜು ಮತ್ತು ಕೆರೆಗಳ (ಮೀನು ಪಾಶುವಾರು) ಹರಾಜು ಪ್ರಕ್ರಿಯೆಗೆ ಸಂಬಂಧಿಸಿದಂತೆ, ಆಸಕ್ತ ವ್ಯಾಪಾರಸ್ಥರು/ಸಾರ್ವಜನಿಕರು ನಿಗದಿಪಡಿಸಿದ ಹರಾಜು ದಿನಾಂಕದ ಮೊದಲು ಹರಾಜು ನಿಯಮ ಮತ್ತು ಷರತ್ತುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಂಪಲಾಪುರ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಕೆಲಸದ ಅವಧಿಯಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ.

ಶ್ರೀ ಸಣ್ಣತಮ್ಮಯ್ಯ, ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಕಂಪಲಾಪುರ — ಶ್ರೀಮತಿ ಸುಮ ಶಿವಕುಮಾರ, ಉಪಾಧ್ಯಕ್ಷರು, ಗ್ರಾಮ ಪಂಚಾಯಿತಿ, ಕಂಪಲಾಪುರ — ಶ್ರೀ ಪರಮೇಶ ಎಸ್.ಆರ್., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ, ಕಂಪಲಾಪುರ

ಗ್ರಾಮ ಪಂಚಾಯತಿ ಸರ್ವ ಸದಸ್ಯರುಗಳು ಹಾಗೂ ಸಿಬ್ಬಂದಿ ವರ್ಗ, ಕಂಪಲಾಪುರ

ಕರ್ನಾಟಕ ಸರ್ಕಾರ

ತೋಟಗಾರಿಕೆ ಇಲಾಖೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಉದ್ಯಾನವನ ಮತ್ತು ತೋಟಗಳು)

ದೂರವಾಣಿ : 08021-2422256, E-mail:adhpngmysore@gmail.com

ಪತ್ರಸಂಖ್ಯೆ:ಹಿಸತೋನಿ:ಉ&ತೋ:ಮೈ: ವಿವಿ:23:2025–26/327 — ದಿನಾಂಕ : 14.07.2025

ಇ–ಪ್ರಕ್ಯೂರ್‌ಮೆಂಟ್ ಪ್ರಕಟಣೆ

2025–26ನೇ ಸಾಲಿನಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಉದ್ಯಾನವನಗಳು & ತೋಟಗಳು, ಮೈಸೂರು ಅಧೀನ ಬರುವ ಉದ್ಯಾನವನಗಳು / ನರ್ಸರಿಗಳಲ್ಲಿ ಸಾಮಾನ್ಯ, ಸ್ವಚ್ಛತೆ, ಉಳುಮೆ, ಪಾತಿ ಮಾಡುವುದು, ಗೊಬ್ಬರ ಹಾಕುವುದು, ಸಸ್ಯ ಸಂರಕ್ಷಣೆ ಔಷಧಿ ಸಿಂಪಡಿಸುವುದು,ನೀರು ಹಾಯಿಸುವುದು, ಗಿಡಗಳನ್ನು ಸವರುವಿಕೆ ಹಾಗೂ ಕತ್ತರಿಸುವುದು, ಹೆಡ್ಜ್ ಬೆಳೆಸುವುದು ಇತರೆ ತೋಟಗಾರಿಕೆ ಚಟುವಟಿಕೆಗಳು ಸೇರಿದಂತೆ ಒಂದು ವರ್ಷದ ಅವಧಿಗೆ ಸೇವೆಯನ್ನು ಒದಗಿಸಲು ಕರ್ನಾಟಕ ಪಾರದರ್ಶಕತೆ (KTTP) ನಿಯಮಾವಳಿ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ (Two Cover System) ಮಾನವ ಸಂಪನ್ಮೂಲಗಳ ಸಂಸ್ಥೆಗಳ ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದೆ,ಆಸಕ್ತಿಯುಳ್ಳವರು ಇ–ಟೆಂಡರ್ ಕರೆದಿದ್ದು, ಟೆಂಡರ್‌ಗಳನ್ನು ದಿನಾಂಕ : **15.07.2025** ರಿಂದ ದಿನಾಂಕ: **29.07.2025**ರ ಸಂಜೆ **5.00** ಗಂಟೆಯವರೆಗೆ ಸಲ್ಲಿಸುವುದು, ಭರ್ತಿ ಮಾಡಿದ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **30.07.2025** ರಂದು ಬೆಳಿಗ್ಗೆ **11.00** ಗಂಟೆಗೆ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **31.07.2025** ರಂದು ಸಂಜೆ **5.00** ಗಂಟೆಗೆ ತೋಟಗಾರಿಕೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಉದ್ಯಾನವನ ಮತ್ತು ತೋಟಗಳು),ಮೈಸೂರುರವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಗೆ ಸಂಪರ್ಕಿಸಲು ತಿಳಿಸಲಾಗಿದೆ. ದೂರವಾಣಿ ಸಂಖ್ಯೆ: 0821–2422256.

ಹೆಚ್ಚಿನ ಮಾಹಿತಿಯನ್ನು ಇ–ಪ್ರಕ್ಯೂರ್‌ಮೆಂಟ್(https://eproc.karnataka.gov.in)ರಲ್ಲಿ ಸಂಪರ್ಕಿಸಬಹುದು.

ಸಹಿ/–
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
(ಉದ್ಯಾನವನ ಮತ್ತು ತೋಟಗಳು) ಮೈಸೂರು

ವಾಸಾಸಂಇ/ಮೈಸೂರು/ಎಸ್‌ಎಸ್‌ಸಿ/644/2025–26